23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 292 | ನವದೆಹಲಿ | ಬೆಲೆ ₹10 | ಏಪ್ರಿಲ್ 28 2026, ಮಂಗಳವಾರ




ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ



ಶ್ರೀ ಡಿ.ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

## ಸರ್ಕಾರಿ ಶಾಲಾ - ಕಾಲೇಜು ದಾಖಲಾತಿ ಆರಂಭ

ನಿಮ್ಮ ಮಕ್ಕಳನ್ನು ಯಾವುದೇ ತರಗತಿಗಾದರೂ ಸೇರಿಸಲು ಅವಕಾಶವಿದೆ



ಇದು ಸರ್ಕಾರದ
**ಶಿಕ್ಷಣದ ಗ್ಯಾರಂಟಿ**

**ಕರ್ನಾಟಕ ಮಾದರಿ ಶಾಲಾ ಶಿಕ್ಷಣ!!**

**3 ವರ್ಷಗಳಲ್ಲಿ ನಮ್ಮದಾಗಲಿದೆ ದೇಶದಲ್ಲೇ ಅತ್ಯುತ್ತಮ ಸರ್ಕಾರಿ ಶಾಲಾ ವ್ಯವಸ್ಥೆ!!!**

**ಸರ್ಕಾರ ತನ್ನ ಶಾಲೆಗಳಿಗೆ ಒದಗಿಸಿರುವ ಸೌಕರ್ಯಗಳು**

ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶೂ, ಬಿಸಿಯೂಟ, ಹಾಲು ಇವಿಷ್ಟೇ ಸರ್ಕಾರಿ ಶಾಲೆಗಳ ಸಾಧನೆಯಲ್ಲ! **ಈ ವರ್ಷ ಫಲಿತಾಂಶದಲ್ಲಿ ಭಾರೀ ಹೆಚ್ಚಳ!! ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಇನ್ನೂ ದೊಡ್ಡ ಏರಿಕೆ!!!**

## 3 ವರ್ಷಗಳಲ್ಲಿ ಗುಣಮಟ್ಟ ಹೆಚ್ಚಿಸುವ 8 ಕ್ರಮಗಳು: ಇವೇ ಶಿಕ್ಷಣದ ಗ್ಯಾರಂಟಿಗಳು

**ಗ್ಯಾರಂಟಿ 1**
ಶಿಕ್ಷಕರ ಕೊರತೆ ಇನ್ನಿಲ್ಲ : 5ನೇ ತರಗತಿವರೆಗೆ ತರಗತಿಗೊಬ್ಬರು ಹಾಗೂ 6ನೇ ತರಗತಿಯಿಂದ ವಿಷಯಕ್ಕೊಬ್ಬರಂತೆ ಶಿಕ್ಷಕರ ನೇಮಕ.

**ಗ್ಯಾರಂಟಿ 2**
ಪೋಷಕರು ಬಯಸುವ ಮಾಧ್ಯಮ: ಎಲ್ಲಾ ಶಾಲೆಗಳಲ್ಲೂ ಕನ್ನಡದ ಜೊತೆಗೆ ಇಂಗ್ಲಿಷ್ ಮಾಧ್ಯಮ ಲಭ್ಯ; ಇಂಗ್ಲಿಷ್ ಬೋಧನೆಗಾಗಿ ಶಿಕ್ಷಕರಿಗೆ ವಿಶೇಷ ತರಬೇತಿ.

**ಗ್ಯಾರಂಟಿ 3**
ಉಚಿತ ಸಾರಿಗೆ ಸೌಲಭ್ಯ: ಕೆ.ಪಿ.ಎಸ್ ವಿದ್ಯಾರ್ಥಿಗಳಿಗೆ ಉಚಿತ ವಾಹನ ವ್ಯವಸ್ಥೆ.

**ಗ್ಯಾರಂಟಿ 4**
ಡಿಜಿಟಲ್ ಶಿಕ್ಷಣ: 1ನೇ ತರಗತಿಯಿಂದ ಕಂಪ್ಯೂಟರ್ ಹಾಗೂ 3ನೇ ತರಗತಿಯಿಂದಲೇ AI ಕಲಿಕೆ. 3 ವರ್ಷಗಳಲ್ಲಿ ಎಲ್ಲಾ ಕೆ.ಪಿ.ಎಸ್ ಶಾಲೆಗಳಿಗೆ ಕಂಪ್ಯೂಟರ್ ಶಿಕ್ಷಕರ ನೇಮಕ.

**2025-2026ನೇ ಸಾಲಿನಲ್ಲಿ ಪರೀಕ್ಷಾ ಫಲಿತಾಂಶದಲ್ಲಿ**
**ಚಾರಿತ್ರಿಕ ಏರಿಕೆ**

ಎಸ್.ಎಸ್.ಎಲ್.ಸಿ ಪರೀಕ್ಷೆ -1
**94.10%**

ದ್ವಿತೀಯ ಪಿಯುಸಿ ಪರೀಕ್ಷೆ -1
**86.48%**

**ಗ್ಯಾರಂಟಿ 5**
ಕಲೆ ಮತ್ತು ದೈಹಿಕ ಶಿಕ್ಷಣ: ಸಂಗೀತ, ಕಲೆ ಮತ್ತು ದೈಹಿಕ ಶಿಕ್ಷಣಕ್ಕೆ ಪ್ರತ್ಯೇಕ ಶಿಕ್ಷಕರ ನೇಮಕ; ಈ ವರ್ಷದಿಂದಲೇ ದೈಹಿಕ ಶಿಕ್ಷಕರ ಭರ್ತಿ ಆರಂಭ.

**ಗ್ಯಾರಂಟಿ 6**
ಶೈಕ್ಷಣಿಕೇತರ ಹೊರೆ ಮುಕ್ತಿ: ಬೋಧನೆಯ ಹೊರತಾದ ಕೆಲಸಗಳಿಗೆ ಪ್ರತ್ಯೇಕ ಸಿಬ್ಬಂದಿಗಳ ನೇಮಕ; ಶಿಕ್ಷಕರಿಗೆ ಬೋಧನೆಗೆ ಮಾತ್ರ ಆದ್ಯತೆ.

**ಗ್ಯಾರಂಟಿ 7**
ಮಗುವಿನ ಪ್ರಗತಿ ತಿಳಿಯಲು Lesson Based Assessment ಮತ್ತು ಪ್ರತಿ 2 ತಿಂಗಳಿಗೊಮ್ಮೆ ಕಡ್ಡಾಯ ಪೋಷಕರು-ಶಿಕ್ಷಕರ ಸಭೆ.

**ಗ್ಯಾರಂಟಿ 8**
ಕೌಶಲ್ಯ ಮತ್ತು ಸ್ಪರ್ಧಾತ್ಮಕ ತರಬೇತಿ: 6ನೇ ತರಗತಿಯಿಂದಲೇ ವೃತ್ತಿ ಕೌಶಲ್ಯ ಶಿಕ್ಷಣ ಮತ್ತು ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶೇಷ ತರಬೇತಿ.

### ಈ ಬದಲಾವಣೆಗಳನ್ನು ಯಾವಾಗಿನಿಂದ ಆರಂಭಿಸುತ್ತಿದ್ದೇವೆ?

ಕೆಲವು ಮಹತ್ವದ ಬದಲಾವಣೆಗಳು ಈ ವರ್ಷದಿಂದಲೇ ಜಾರಿಗೆ ಬರುತ್ತವೆ. 2-3 ವರ್ಷಗಳಲ್ಲಿ ಅದರ ಫಲಿತಾಂಶವನ್ನೂ ಕಾಣುತ್ತೀರಿ.

### ಐದು ವರ್ಷಗಳಲ್ಲಿ ಇರುವ ಗುರಿ ಏನು?

ದೇಶದ ಅತ್ಯುತ್ತಮ ಸರ್ಕಾರಿ ಶಾಲಾ ವ್ಯವಸ್ಥೆ ನಮ್ಮದಾಗಲಿದೆ! **ಇದು ನಮ್ಮ ಭರವಸೆ!!**
50 ಲಕ್ಷಕ್ಕೂ ಹೆಚ್ಚು ಮಕ್ಕಳು ಸರ್ಕಾರಿ ಶಾಲೆಗಳಿಗೆ ಸೇರುತ್ತಾರೆ! **ಇದು ನಮ್ಮ ವಿಶ್ವಾಸ!**



ಪೋಷಕರ ಧ್ವನಿ

**ನಿಮ್ಮೆಲ್ಲರ ಸಲಹೆಗಳಿಗೆ ಸ್ವಾಗತ: ಬೇಕು ಸರ್ವರ ಸಹಕಾರ**

ಶಿಕ್ಷಣ ಕ್ರಾಂತಿಯ ಈ 'ಕರ್ನಾಟಕ ಮಾದರಿ'ಯ ಕುರಿತಂತೆ ಶಿಕ್ಷಣಾಸಕ್ತರು, ಸಂಘ-ಸಂಸ್ಥೆಗಳು, ಪರಿಣಿತರ ಸಲಹೆಗಳನ್ನು ನಾವು ಸ್ವೀಕರಿಸುತ್ತೇವೆ. ಇಲ್ಲಿ ಕೊಡಲಾಗಿರುವ ಇ-ಮೇಲ್ ಮತ್ತು ವಾಟ್ಸಾಪ್ ನಂಬರಿಗೆ ನಿಮ್ಮ ಸಲಹೆಗಳನ್ನು ಕಳಿಸಿಕೊಡಬೇಕೆಂದು ಈ ಮೂಲಕ ಕೋರುತ್ತೇವೆ.

ಸಮಗ್ರ ಶಿಕ್ಷಣ ಕರ್ನಾಟಕ

ಉತ್ತಮ ಕಲಿಕೆ ಉಜ್ವಲ ಭವಿಷ್ಯ


ಹೊಸ ಕೆಪಿಎಸ್ ಪರಿಕಲ್ಪನೆ ಏನು ? **ಇಲ್ಲಿ ಸ್ಕ್ಯಾನ್ ಮಾಡಿ!**

**ನಿಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ನೀಡಲು...**

ಇ-ಮೇಲ್: edkarnataka@gmail.com | ವಾಟ್ಸಾಪ್ ನಂಬರ್: 94489 99314

ShalaShikshanaKarnataka

**ನಿತ್ಯ ಪಂಚಾಂಗ 28.04.2026 ಮಂಗಳವಾರ**



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ–ವಸಂತ ಋತು, ಚಾಂದ್ರಮಾನ, ಚೈತ್ರ–ವೈಶಾಖ ಮಾಸ

ವೈಶಾಖ ಶುದ್ಧ, ದ್ವಾದಶಿ, ಉತ್ತರಾ ನಕ್ಷತ್ರ, ಬಲ್ಮಾಡು ಉಳ್ಳಾಲಿ ದೈವ ಜಾತ್ರೆ, ಕಾನಂಗಿ ಶ್ರೀನಿವಾಸ ರಥ, ಶ್ರೀರಂಗಪಟ್ಟಣ ರಥ, ತೊರವಿ ನರಸಿಂಗ ರಥ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 – 12.00 | 1.30 – 3.00 |
| ಮಂಗಳ | 3.00 – 4.30 | 9.00 – 10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 – 12.00 |
| ಗುರು | 1.30 – 3.00 | 6.00 – 7.30 | 9.00 – 10.30 |
| ಶುಕ್ರ | 10.30 – 12.00 | 3.00 – 4.30 | 7.30 – 9.00 |
| ಶನಿ | 9.00 – 10.30 | 1.30 – 3.00 | 6.00 – 7.30 |

# ಹಳಿತಪ್ಪಿದ ಮುಂಬೈ–ಸೊಲ್ಲಾಪುರ ವಂದೇಭಾರತ್ ಎಕ್ಸ್‌ಪ್ರೆಸ್ ರೈಲು; ತಪ್ಪಿದ ದೊಡ್ಡ ಅನಾಹುತ



ಪುಣೆ, ಏ.27 ಮುಂಬೈ–ಸೊಲ್ಲಾಪುರ ವಂದೇ ಭಾರತ್ ರೈಲು ಸೋಮವಾರ ರಾತ್ರಿ ಪುಣೆ ನಿಲ್ದಾಣಕ್ಕೆ ಪ್ರವೇಶಿಸುವ ಮುನ್ನ ಹಳಿತಪ್ಪಿದ್ದು, ಅದೃಷ್ಟವಶಾತ್ ದೊಡ್ಡ ಅನಾಹುತವೊಂದು ತಪ್ಪಿದೆ. ಈ ಘಟನೆಯಲ್ಲಿ ಯಾವುದೇ ಪ್ರಯಾಣಿಕರಿಗೆ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್‌ನಿಂದ ನೈಋತ್ಯ ಮಹಾರಾಷ್ಟ್ರದ ಸೋಲಾಪುರಕ್ಕೆ ತೆರಳುತ್ತಿದ್ದ ಪ್ರೀಮಿಯಂ ಎಸಿ ರೈಲು(ಸಂಖ್ಯೆ 22225) ಇಂದು ರಾತ್ರಿ 7.30 ರ ಸುಮಾರಿಗೆ ಪ್ಲಾಟ್‌ಫಾರ್ಮ್ ಬಳಿ ಕ್ರಾಸಿಂಗ್ ಮೇಲೆ ಹಾದು ಹೋಗುತ್ತಿದ್ದಾಗ ಹಳಿತಪ್ಪಿದ ಘಟನೆ ನಡೆದಿದೆ ಎಂದು ಅವರು ಹೇಳಿದ್ದಾರೆ.

ವಂದೇಭಾರತ್ ರೈಲಿನ ಒಂದು ಬೋಗಿಯ ಚಕ್ರವು ಡೈಮಂಡ್ ಕ್ರಾಸಿಂಗ್‌ನಲ್ಲಿ ಹಳಿತಪ್ಪಿತು. ಆದ್ಯತೆಯ ಮೇಲೆಕ್ರಾಸಿಂಗ್ ಬದಲಾಯಿಸಲಾಗುತ್ತಿದೆ. ಘಟನೆಯಲ್ಲಿ ಯಾವುದೇ ಪ್ರಯಾಣಿಕರಿಗೆ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪುಣೆ ನಿಲ್ದಾಣದಲ್ಲಿ ನಡೆಯುತ್ತಿರುವ ಯಾರ್ಡ್ ನವೀಕರಣ ಕಾರ್ಯದ ಭಾಗವಾಗಿ ಕ್ರಾಸಿಂಗ್ ಅನ್ನು ನವೀಕರಣಕ್ಕೆ ನಿಗದಿಪಡಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಹಳಿತಪ್ಪಿದ ಕೋಚ್‌ನ ಪ್ರಯಾಣಿಕರು ತಮ್ಮ ಸಾಮಾನುಗಳನ್ನು ಹೊತ್ತುಕೊಂಡು ರೈಲಿನಿಂದ ಇಳಿದು ಹತ್ತಿರದ ಪ್ಲಾಟ್‌ಫಾರ್ಮ್‌ಗೆ ನಡೆದುಕೊಂಡು ಹೋಗುತ್ತಿದ್ದ0 ದೃಶ್ಯ ಕಂಡುಬಂದಿದೆ.

# ಆರೋಗ್ಯ ಸಂಕಷ್ಟ ಸಮಯದಲ್ಲಿ ರಾಜಕೀಯಕ್ಕಿಂತ ಮಾನವೀಯತೆ ಅಗತ್ಯ

### ಎಚ್‌ಡಿಕೆ ಹೇಳಿಕೆಗೆ ಸಚಿವ ಪರಮೇಶ್ವರ್ ತಿರುಗೇಟು



ಬೆಂಗಳೂರು, ಏ.27: ಸಚಿವ ಡಿ.ಸುಧಾಕರ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಇದನ್ನೇ ಕೇಂದ್ರವಾಗಿಟ್ಟುಕೊಂಡು ರಾಜ್ಯ ರಾಜಕಾರಣದಲ್ಲಿ ಈಗ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಕೆಸರೆರಚಾಟ ಆರಂಭವಾಗಿದೆ.

ಸುಧಾಕರ್ ಅವರ ಆರೋಗ್ಯದ ಬಗ್ಗೆ ಎಚ್.ಡಿ. ಕುಮಾರಸ್ವಾಮಿ ಅನುಮಾನ ವ್ಯಕ್ತಪಡಿಸಿದ್ದರು. ಎಚ್‌ಡಿಕೆ ಹೇಳಿಕೆಗೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ಇಂತಹ ಸಂಕಷ್ಟದ ಸಮಯದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಒಬ್ಬ ವ್ಯಕ್ತಿ ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿರುವಾಗ ಮಾನವೀಯತೆ ಪ್ರದರ್ಶಿಸಬೇಕು. ಸರ್ಕಾರ ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಸಾಧ್ಯವೇ? ಅಷ್ಟಕ್ಕೂ ಸುಧಾಕರ್ ಅವರ ಹೆಬ್ಬೆಟ್ಟನ್ನು ಬೇರೆಯವರು ಪಡೆದುಕೊಳ್ಳಲು ಹೇಗೆ ಸಾಧ್ಯ? ಈ ರೀತಿಯ ಅಮಾನವೀಯ ಮಾತುಗಳು ಕುಮಾರಸ್ವಾಮಿ ಅವರಿಗೆ ಶೋಭೆ ತರುವುದಿಲ್ಲ ಎಂದು ತಿರುಗೇಟು ನೀಡಿದ್ದಾರೆ.

# ಸಂಪುಟ ಪುನಾರಚನೆ- ಮೇ 2ನೇವಾರದಲ್ಲಿ ಹೈಕಮಾಂಡ್‌ನಿಂದ ಸಿಹಿಸುದ್ದಿ: ಅಶೋಕ್ ಪಟ್ಟಣ



ಬೆಂಗಳೂರು, ಏ.27: ಸಂಪುಟ ಪುನಾರಚನೆಗೆ ಆಗ್ರಹಿಸಿರುವ ಶಾಸಕರಿಗೆ ಕಾಂಗ್ರೆಸ್ ಹೈಕಮಾಂಡ್ ಮೇ 2ನೇ ವಾರದಲ್ಲಿ ಸಿಹಿಸುದ್ದಿ ಕೊಡುವುದಾಗಿ ಭರವಸೆ ನೀಡಿದೆ ಎಂದು ವಿಧಾನಸಭೆ ಸರ್ಕಾರಿ ಮುಖ್ಯ ಸಚೇತಕ ಅಶೋಕ್ ಪಟ್ಟಣ ಹೇಳಿದರು.

ಕಳೆದ ವಾರ ಹಿರಿಯ ಶಾಸಕರೆಲ್ಲ ದೆಹಲಿಗೆ ತೆರಳಿ ಹೈಕಮಾಂಡ್‌ನ ಭೇಟಿ ಮಾಡಿದ ಸಂದರ್ಭದಲ್ಲಿ ಮೇ ಎರಡನೇ ವಾರದಲ್ಲಿ ಸಿಹಿಸುದ್ದಿ ಕೊಡುವ ಭರವಸೆಯನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಕೊಟ್ಟಿದ್ದಾರೆ.

ನಾವು ಸಿಹಿ ಸುದ್ದಿಯ ನಿರೀಕ್ಷೆಯಲ್ಲಿದ್ದೇವೆ ಎಂದು ಅಶೋಕ ಪಟ್ಟಣ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ತಿಳಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹುಟ್ಟುಹಬ್ಬದ ಸಿಹಿಸುದ್ದಿ ಕೊಡೋದು, ಬಿಡೋದು ಕಾಂಗ್ರೆಸ್ ಹೈಕಮಾಂಡ್‌ಗೆ ಬಿಟ್ಟದ್ದು. ಅವರಿಗೆ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ. ನಮ್ಮ ಆಗ್ರಹ ಸಂಪುಟ ಪುನಾರಚನೆ ಅಷ್ಟೇ ಎಂದರು.

ಪಂಚರಾಜ್ಯಗಳ ಫಲಿತಾಂಶ ಬಂದ ನಂತರ ಮತ್ತೆ ಹಿರಿಯ ಶಾಸಕರೆಲ್ಲ ದೆಹಲಿಗೆ ಹೋಗಿ ಮತ್ತೊಮ್ಮೆ ಪಕ್ಷದ ವರಿಷ್ಠರನ್ನು ಭೇಟಿ ಮಾಡುತ್ತೇವೆ ಎಂದು ಅಶೋಕ್ ಪಟ್ಟಣ ಹೇಳಿದರು.

# ಪ್ರಸ್ತುತ ಎಲ್ಲ ಕ್ಷೇತ್ರಗಳಲ್ಲೂ ಅಧಃಪತನ ದರ್ಶನ: ಮಾಜಿ ಪ್ರಧಾನಿ ದೇವೇಗೌಡ ಕಳವಳ

**ಅಲ್ಲಮನ ತಾತ್ವಿಕತೆ, ಬಸವಣ್ಣನ ಕ್ರಿಯಾಶೀಲತೆ, ಅಂಬಿಗರ ಚೌಡಯ್ಯನ ಆಕ್ರೋಶ ಇಂದಿನ ಅಗತ್ಯ**

**ಬಸವಶ್ರೀ ಪ್ರಶಸ್ತಿ ನೀಡಿದ್ದಕ್ಕೆ ಬಸವ ವೇದಿಕೆಗೆ ಧನ್ಯವಾದ**



ಬೆಂಗಳೂರು, ಏ.27: ಪ್ರಸ್ತುತ ಎಲ್ಲ ಕ್ಷೇತ್ರಗಳಲ್ಲೂ ಅಧಃಪತನ ಕಾಣುತ್ತಿದ್ದೇವೆ. ವ್ಯವಸ್ಥೆಯ ಕೆಡಿಕಿನ ಬಗ್ಗೆ ವಿವೇಕಶಾಲಿಗಳು ಸಿನಿಕರಾಗುತ್ತಿದ್ದಾರೆ. ಜನಪರ ಚಳವಳಿಗಳು ಕ್ಷೀಣವಾಗುತ್ತಿವೆ. ಹಾಗಾಗಿ ಇಂದು ನಮಗೆ ಅಲ್ಲಮನ ತಾತ್ವಿಕತೆ, ಬಸವಣ್ಣನ ಕ್ರಿಯಾಶೀಲತೆ, ಅಂಬಿಗರ ಚೌಡಯ್ಯನ ಆಕ್ರೋಶ ಬೇಕಾಗಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಪ್ರತಿಪಾದಿಸಿದ್ದಾರೆ.

ಬಸವ ವೇದಿಕೆ ವತಿಯಿಂದ ತಮಗೆ 'ಬಸವಶ್ರೀ' ಪ್ರಶಸ್ತಿ ಘೋಷಣೆ ಮಾಡಿರುವುದಕ್ಕೆ ವೇದಿಕೆಗೆ ಪತ್ರ ಬರೆದು ಧನ್ಯವಾದ ತಿಳಿಸಿರುವ ಅವರು, ಸದ್ಯದ ಸಂದರ್ಭದಲ್ಲಿ ವಚನಕಾರರ ಮಹತ್ವ ಹಾಗೂ ಪ್ರಾಮುಖ್ಯವನ್ನು ಪ್ರತಿಪಾದಿಸಿದ್ದಾರೆ.

ಶ್ರೀಮಂತ–ಬಡವ, ಹೆಣ್ಣು–ಗಂಡು ಮೇಲು–ಕೀಳು, ಉಚ್ಚ–ನೀಚ ತಾರತಮ್ಯಗಳನ್ನು ತೊಲಗಿಸುವ ಒಂದು ದಿವ್ಯಮಂತ್ರವಾಗಿ ಬಸವಣ್ಣ ಸಾರಿದ್ದು ಏಕದೇವೋಪಾಸನೆ ಮತ್ತು ಕಾಯಕ ಮಹತ್ವ. ಅವರು ಜನರಿಂದ, ಜನರಿಗಾಗಿ ಜನರ ಮಹಾಮನೆ ಯನ್ನು ಕಟ್ಟಿ ಬಿಜ್ಜಳನ ಅರಮನೆಯನ್ನು ತೃಣವಾಗಿ ಭಾವಿಸಿದವರು. ಹಾಗೆ ನಡೆದ ಕಲ್ಯಾಣ ಕ್ರಾಂತಿಯಲ್ಲಿ ಸಾವಿರಾರು ಶರಣ–ಶರಣೆಯರು ತಮ್ಮ ಅನುಭವ, ಅನುಭಾವದಿಂದ ರಚಿಸಿದ ವಚನಗಳು ಕನ್ನಡದ ಸಾಹಿತ್ಯ ಲೋಕವನ್ನು ವಿಸ್ತರಿಸಿ ಸಂಸ್ಕೃತ ಮತ್ತು ಸಂಸ್ಕಾರವನ್ನು ಪ್ರಚುರಗೊಳಿಸಿದ ವಿಶಿಷ್ಟ ಸಾಹಿತ್ಯವಾಗಿದೆ ಎಂದು ಮಾಜಿ ಪ್ರಧಾನಿ ಬಣ್ಣಿಸಿದ್ದಾರೆ.

ಬಸವ ವೇದಿಕೆಯ ಮಿತ್ರರು ಬಸವ ಜಯಂತಿ ಅಂಗವಾಗಿ ಏರ್ಪಡಿಸಿರುವ ವಿಶಿಷ್ಟ ಕಾರ್ಯಕ್ರಮ ನಿಜಕ್ಕೂ ಅಭಿನಂದನೀಯ. ಈ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿರುವ ಪೂಜ್ಯ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಯವರಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಬಸವ ವೇದಿಕೆ ಗೆಳೆಯರು ನನ್ನ ಮೇಲಿನ ಅಭಿಮಾನದಿಂದಲೋ ಅಥವಾ ನನ್ನ ಹಿರಿತನದ ವಯಸ್ಸಿನ ಕಾರಣದಿಂದಲೋ ನನಗೆ 'ಬಸವಶ್ರೀ' ಪ್ರಶಸ್ತಿ ಪ್ರದಾನ ಮಾಡಲು ನಿರ್ಧರಿಸಿ ಆಯೋಜಿಸಿದ್ದಾರೆ ಎಂದು ದೇವೇಗೌಡರು ಹೇಳಿದರು.

ಖಂಡಿತವಾಗಿ ಈ ಪ್ರಶಸ್ತಿಗೆ ನಾನು ಅರ್ಹನಲ್ಲ. ಹಾಗಾಗಿ ಅತ್ಯಂತ ಮುಜುಗರ ಮತ್ತು ಸಂಕೋಚದಿಂದ ನಿಮ್ಮ ಅಭಿಮಾನಕ್ಕೆ ತಲೆ ಬಾಗುವವನಿದ್ದೇನೆ ಎಂದಿರುವ ಎಚ್‌ಡಿಡಿ , ಬಸವೇಶ್ವರರು 12ನೇ ಶತಮಾನದಲ್ಲಿ ನಡೆಸಿದ್ದು ಒಂದು ದೊಡ್ಡ ಜನಾಂದೋಲನ. ಅದೊಂದು ಅದ್ಭುತ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕತೆಯ ಕ್ರಾಂತಿ, ಕಾಯಕ ಮತ್ತು ದಾಸೋಹ ಎಂಬ ಪರಿಕಲ್ಪನೆಗಳು ಇಂದಿಗೂ ಪ್ರಸ್ತುತವಾಗಿರುವ ತತ್ವಾದರ್ಶಗಳು ಆಗಿವೆ ಎಂದಿದ್ದಾರೆ.

ಈ ಕಾರ್ಯಕ್ರಮದಲ್ಲಿ ಗುರುರಾಜ ಕರ್ಜಗಿಯವರೂ ಸೇರಿದಂತೆ ಅನೇಕ ಶರಣರ ಸೂಳ್ನುಡಿಗಳನ್ನು ಕೇಳಲಾದರೂ ನಾನು ಬರಬೇಕೆಂದಿದ್ದೆ. ಆದರೆ ನನ್ನ ಆರೋಗ್ಯ ವ್ಯತ್ಯಯದಿಂದಾಗಿ ಬರಲಾಗುತ್ತಿಲ್ಲ.

ಆದುದರಿಂದ ಪೂಜ್ಯ ಸ್ವಾಮೀಜಿಯವರಲ್ಲಿ, ಸಂಘಟಕರಲ್ಲಿ, ಗೌರವಾನ್ವಿತ ಅತಿಥಿ ಗಣ್ಯರಲ್ಲಿ, ಶರಣ ಸಮೂಹದಲ್ಲಿ ಕ್ಷಮೆ ಕೋರುತ್ತೇನೆ. ಕಾರ್ಯಕ್ರಮ ಯಶಸ್ವಿಯಾಗಿ ಇದರ ಸಂದೇಶ ಎಲ್ಲೆಡೆ ಪ್ರಚುರಗೊಳ್ಳಲಿ ಎಂದು ಹಾರೈಸುತ್ತೇನೆ ಎಂದು ದೇವೇಗೌಡರು ತಿಳಿಸಿದ್ದಾರೆ.

# ಕುರ್ಚಿ ಕಿತ್ತಾಟ ಬಿಟ್ಟರೆ ರಾಜ್ಯದ ಯಾವ ಸಮಸ್ಯೆ ಬಗ್ಗೆಯೂ ಚರ್ಚೆಯಾಗುತ್ತಿಲ್ಲ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕೆ



**ಕುಣಿಗಲ್, ಏ.27:** ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಕಿತ್ತಾಟ ನಡೆಯುತ್ತಿದ್ದು, ಒಬ್ಬರು ನಾನೇ ಐದು ವರ್ಷ ಸಿಎಂ ಎಂದರೆ, ಮತ್ತೊಬ್ಬರು ನನಗೆ ಎರಡೂವರೆ ವರ್ಷ ನಿಗದಿಯಾಗಿತ್ತು ಎನ್ನುತ್ತಾರೆ. ಪ್ರತಿನಿತ್ಯ ಇದನ್ನು ಬಿಟ್ಟರೆ ರಾಜ್ಯದಲ್ಲಿ ಯಾವ ಸಮಸ್ಯೆ ಚರ್ಚೆಯಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ತಾಲ್ಲೂಕಿನ ಹುಲಿಯೂರು ದುರ್ಗ ವ್ಯಾಪ್ತಿಯ ಮಾದಪ್ಪನಹಳ್ಳಿ ಗ್ರಾಮದಲ್ಲಿ ವೆಂಕಟೇಶ್ವರಸ್ವಾಮಿ ದೇವಾಲಯ ಉದ್ಘಾಟನಾ ಸಮಾರಂಭದ ನಂತರ ಮಾತನಾಡಿದ ಅವರು, ಇತ್ತೀಚೆಗೆ ಅಲ್ಲಲ್ಲಿ ಆಲಿಕಲ್ಲು ಮಳೆ ಬಿದ್ದು ಹಲವಾರು ಭಾಗದಲ್ಲಿ ಬಾಳೆ, ದ್ರಾಕ್ಷಿ, ದಾಳಿಂಬೆ ಬೆಳೆ ನಾಶವಾದರೂ ಯಾವುದರ ಬಗ್ಗೆಯೂ ಗಮನ ಹರಿಸುತ್ತಿಲ್ಲ ಎಂದು ಆರೋಪಿಸಿದರು. ರಾಜ್ಯದಲ್ಲಿ ಅಪರಾಧ ಮತ್ತು ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದರೂ ಯಾವುದೇ ಕ್ರಮ ಇಲ್ಲದಂತಾಗಿದೆ. ನನಗೆ ಬೇರೆ ಯಾವುದೇ ವ್ಯಾಮೋಹವಿಲ್ಲ ನಿಮ್ಮ ಆಶೀರ್ವಾದವಿದ್ದರೆ ಗ್ರಾಮೀಣ ಭಾಗದ ಜನರ ಬದುಕನ್ನು ಸರಿಪಡಿಸಬೇಕೆಂಬುದೇ ನನ್ನ ಗುರಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ದೇಶ ಆರ್ಥಿಕತೆಯಲ್ಲಿ ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿದೆ ಎಂದು ಹೇಳಿದರು. ಜನರ ಆಶೀರ್ವಾದದಿಂದ ಕೇಂದ್ರ ಸಚಿವನಾಗಿದ್ದೇನೆ. ಉದ್ಯೋಗ, ಸಹಕಾರ ಕೇಳಿಕೊಂಡು ಪ್ರತಿನಿತ್ಯ ನನ್ನನ್ನು ನೋಡಲು, ತಮ್ಮ ಕಷ್ಟ ಹೇಳಿಕೊಳ್ಳಲು ನೂರಾರು ಮಂದಿ ಬರುತ್ತಾರೆ. ನನಗೆ ಮೋದಿಯವರು ದೊಡ್ಡ ಜವಾಬ್ದಾರಿ ನೀಡಿದ್ದಾರೆ. ಪ್ರತಿ ರಾಜ್ಯಕ್ಕೂ ಭೇಟಿ ನೀಡಿದ್ದೇನೆ. ಬಡತನ ಎಂಬುದು ಇನ್ನೂ ನಿವಾರಣೆಯಾಗಿಲ್ಲ, ಒಂದು ಕಡೆ ಶ್ರೀಮಂತ ವರ್ಗ ಇದ್ದರೆ, ಮತ್ತೊಂದು ಕಡೆ ಬಡ ವರ್ಗದವರು ಇದ್ದಾರೆ. ಇದನ್ನೆಲ್ಲಾ ನೋಡಿದರೆ ಬಡತನ ನಿವಾರಣೆಯಾಗಿಲ್ಲ ಎಂದು ಜಿಗುಪ್ಸೆಯಾಗುತ್ತದೆ ಎಂದು ಎಚ್‌ಡಿಕೆ ಹೇಳಿದರು.

ಇದೇ ವೇಳೆ, ಸಂಸದ ಡಾ.ಸಿ.ಎನ್.ಮಂಜುನಾಥ್, ಶಾಸಕ ಮುನಿರತ್ನ, ಮಾಜಿ ಸಚಿವ ಡಿ.ನಾಗರಾಜಯ್ಯ, ಬಿಜೆಪಿ ಮುಖಂಡ ಡಿ.ಕೃಷ್ಣಕುಮಾರ್ ಮತ್ತು ಸ್ಥಳೀಯ ಮುಖಂಡರು ಹಾಜರಿದ್ದರು.

**ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡುವಂತೆ ಪ್ರಮಾಣಪತ್ರ: ಸರ್ಕಾರಕ್ಕೆ ತರಾಟೆ**

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದು ಈಗಾಗಲೇ ಐದು–ಹತ್ತು ವರ್ಷ ಕಳೆದು ಹೋಗಿದೆ. ಚುನಾವಣೆ ನಡೆಸಲು ಸರ್ಕಾರದ ಬಳಿ ಹಣವಿಲ್ಲದ ಕಾರಣ ಸೆಪ್ಟೆಂಬರ್‌ವರೆಗೆ ಚುನಾವಣೆ ಗಳನ್ನು ಮುಂದೂಡುವಂತೆ ರಾಜ್ಯ ಚುನಾವಣಾ ಆಯೋಗ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

# ಒಳಮೀಸಲಾತಿ ಅನ್ವಯ 125 ವೈದ್ಯರ ನೇಮಕ

### ಆರ್ಥಿಕ ಇಲಾಖೆಯಿಂದ ಅನುಮೋದನೆ, ಶೀಘ್ರ ನೇಮಕಾತಿ ಪ್ರಕ್ರಿಯೆಗೆ ಚಾಲನೆ: ಸಚಿವ ದಿನೇಶ್ ಗುಂಡೂರಾವ್



ಹುಬ್ಬಳ್ಳಿ, ಏ.27: ರಾಜ್ಯದಲ್ಲಿ 125 ವೈದ್ಯರ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಸಿಕ್ಕಿದ್ದು, ಒಳಮೀಸಲಾತಿ ಅನ್ವಯ ಶೀಘ್ರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 1,300 ಶುಶ್ರೂಷಕರ ನೇಮಕ ಮಾಡಿಕೊಳ್ಳಲು ಅವಕಾಶವಿದೆ. ತಾಲ್ಲೂಕು ಆಸ್ಪತ್ರೆ ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿರಬೇಕು ಎನ್ನುವ ನಿಟ್ಟಿನಲ್ಲಿ, ಕೆಲವು ಮೂಲ ಸೌಕರ್ಯಗಳನ್ನು ಒದಗಿಸಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಸರ್ಕಾರಿ ಔಷಧಗಳೇ ಸಿಗಬೇಕು ಎನ್ನುವ ಉದ್ದೇಶದಿಂದ, ಈಗಿರುವ ಜೆನರಿಕ್ ಮಳಿಗೆಗಳನ್ನು ತೆರವುಗೊಳಿಸುವ ನಿರ್ಧಾರ ತೆಗೆದುಕೊಂಡಿದ್ದೇವೆ. ಈ ಕುರಿತು ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ನಾವು ಸಹ ನ್ಯಾಯಾಲಯದಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಿದ್ದೇವೆ' ಎಂದು ತಿಳಿಸಿದರು.

ಬಿಸಿಲಿನ ತಾಪ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ರಾಜ್ಯ ಸರ್ಕಾರ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಹೀಟ್ ಸ್ಟ್ರೋಕ್ ಪ್ರಕರಣಗಳಿಗೆ ತುರ್ತು ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಎಲ್ಲ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ' ಎಂದರು.

**ಸಚಿವಗಿರಿ ಕಾಯಂ ಆಗಿರಬೇಕೆಂದೇನಿಲ್ಲ, ಇತರರಿಗೂ ಅವಕಾಶ ಸಿಗಬೇಕು**

ತಾವೊಬ್ಬರೇ ಕಾಯಂ ಸಚಿವರಾಗಿರಬೇಕು ಎಂದೇನಿಲ್ಲ. ಸಾಕಷ್ಟು ಮಂದಿ ಹಿರಿಯರು, ಅನುಭವಿಗಳೂ ಇದ್ದಾರೆ. ಅವರಿಗೂ ಅವಕಾಶ ದೊರೆಯಬೇಕು ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಅಭಿಪ್ರಾಯಪಟ್ಟರು.

ಸರ್ಕಾರ ಅಧಿಕಾರಕ್ಕೇರಿ ಮೂರು ವರ್ಷ ಸಮೀಪಿಸುತ್ತಿದೆ. ಸಚಿವ ಸಂಪುಟ ಪುನರ್ ರಚನೆಯಾಗಿ, ಉಳಿದವರಿಗೂ ಅಲ್ಲಿ ಅವಕಾಶ ಸಿಗಬೇಕು. ಈ ಕುರಿತು ಪಕ್ಷದ ವರಿಷ್ಠರು ಮತ್ತು ಮುಖ್ಯಮಂತ್ರಿ ಸೂಕ್ತ ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿದ್ದು, ಶೀಘ್ರದಲ್ಲಿಯೇ ಜಾರಿಗೆಯೂ ಬರಲಿದೆ. ಸಚಿವ ಸ್ಥಾನ ಕಳೆದುಕೊಳ್ಳುವವರು ಅವಮಾನ ಎಂದು ಭಾವಿಸಬಾರದು. ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವ ದೊಡ್ಡತನ ಇಟ್ಟುಕೊಂಡಿರಬೇಕು. ನಾವೆಲ್ಲ ಪಕ್ಷದ ಶಿಸ್ತಿನ ಸಿಪಾಯಿಗಳಾಗಿದ್ದು, ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನವನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತೇವೆ ಎಂದರು.



ಬೆಂಗಳೂರಿನಲ್ಲಿ ಕೆಎಎಸ್ ಅಧಿಕಾರಿಗಳ ಸಂಘದ ನವೀಕರಿಸಿದ ಕಟ್ಟಡ ಹಾಗೂ ಹೊಸದಾಗಿ ನಿರ್ಮಿಸಿರುವ ಹೆಚ್ಚುವರಿ ಕೊಠಡಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಉದ್ಘಾಟಿಸಿದರು. ಡಿಸಿಎಂ ಡಿ. ಕೆ.ಶಿವಕುಮಾರ್, ಸಚಿವ ಕೃಷ್ಣ ಬೈರೇಗೌಡ, ಮುಖ್ಯಮಂತ್ರಿಗಳ ಕಾರ್ಯದರ್ಶಿ ಕಾವೇರಿ, ಕೆಎಎಸ್ ಅಧಿಕಾರಿಗಳ ಸಂಘದ ಅಧ್ಯಕ್ಷ ಶಿವಸ್ವಾಮಿ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಸತ್ಯನಾರಾಯಣ್, ಸಂಘದ ಪದಾಧಿಕಾರಿಗಳು ಹಾಜರಿದ್ದರು.

# ದೆಹಲಿಯಲ್ಲಿ ಸತತ 3ನೇ ದಿನವೂ 42.55°ಸೆ. ಗಿಂತ ಹೆಚ್ಚಿನ ತಾಪಮಾನ; ವಾರದ ಮಧ್ಯೆ ಮಳೆ, ಬಿರುಗಾಳಿಯೊಂದಿಗೆ ತಂಪೆರೆಯುವ ಸಾಧ್ಯತೆ

**ನವದೆಹಲಿ, ಏ.27:** ದೆಹಲಿಯಾದ್ಯಂತ ತಾಪಮಾನವು ಸತತ ಮೂರನೇ ದಿನವೂ 42°C ಗಿಂತ ಹೆಚ್ಚಿನ ಮಟ್ಟವನ್ನು ತಲುಪಿದ್ದರಿಂದ ಸೋಮವಾರ ದೆಹಲಿ ನಿವಾಸಿಗಳು ತೀವ್ರ ಶಾಖದಿಂದ ತತ್ತರಿಸಿದ್ದಾರೆ.

ದೆಹಲಿಯ ಮೂಲ ಹವಾಮಾನ ಕೇಂದ್ರವಾದ ಸಫ್ದರ್‌ಜಂಗ್, ಗರಿಷ್ಠ ತಾಪಮಾನದಲ್ಲಿ ಸ್ವಲ್ಪ ಹೆಚ್ಚಳವನ್ನು ವರದಿ ಮಾಡಿದೆ, ಇದು 42.3ಲಿಅ ಆಗಿದ್ದು, ಇದು ಸಾಮಾನ್ಯಕ್ಕಿಂತ 3.3 ಡಿಗ್ರಿ ಹೆಚ್ಚಾಗಿದೆ. ರಾಷ್ಟ್ರ ರಾಜಧಾನಿಯಲ್ಲಿ ಗರಿಷ್ಠ ಗರಿಷ್ಠ ತಾಪಮಾನವು ಕ್ರಮವಾಗಿ 43.8ಲಿಅ ಮತ್ತು 43.2°C ತಲುಪಿದೆ. ಭಾರತ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ, ಬುಧವಾರದಿಂದ 3–5ಲಿಅ ಕುಸಿತವನ್ನು ದಾಖಲಿಸುವ ಮೊದಲು, ಮತ್ತೊಂದು ದಿನ ಶಾಖ ಮುಂದುವರಿಯುವ ಸಾಧ್ಯತೆಯಿದೆ. ಗರಿಷ್ಠ ತಾಪಮಾನದಲ್ಲಿನ ಕುಸಿತವು ದೆಹಲಿಯಲ್ಲಿ ಮುಂಬರುವ ಮಳೆಗೆ ಕಾರಣವಾಗಿರಬಹುದು ಎಂದು ತಜ್ಞರು ಗಮನಿಸಿದ್ದಾರೆ. ಸೋಮವಾರ ಮತ್ತು ಬುಧವಾರದಂದು ಐಎಂಡಿ ಯೆಲ್ಲೋ ಅಲರ್ಟ್‌ನ್ನು ನೀಡಿತು, ಸೋಮವಾರ ಸಂಜೆಯಿಂದ ಗುಡುಗು ಮತ್ತು ಲಘು ಮಳೆಯಾಗುವ ಸಾಧ್ಯತೆಯಿದೆ. ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ, ಮುಂದಿನ ಮೂರು ದಿನಗಳಲ್ಲಿ ನಗರದ ಮೇಲೆ ಗಂಟೆಗೆ 30–40 ಕಿ.ಮೀ ವೇಗದಲ್ಲಿ ಬಲವಾದ ಮೇಲ್ಮೈ ಗಾಳಿ ಬೀಸುವ ಸಾಧ್ಯತೆಯಿದೆ, ಸೋಮವಾರ ಸಂಜೆ ಗಂಟೆಗೆ 60 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ಏತನ್ಮಧ್ಯೆ, ಸೋಮವಾರ, ದೆಹಲಿಯ ವಾಯು ಗುಣಮಟ್ಟ ಸೂಚ್ಯಂಕ ಸ್ವಲ್ಪ ಸುಧಾರಣೆಯನ್ನು ತೋರಿಸಿದೆ.

# ಗೊಂದಲದ ಗೂಡಾದ ಲೆಕ್ಕ ಮಂಡನೆ ಸಭೆ

**ಪಂಚಮಸಾಲಿ ಪೀಠ ಟ್ರಸ್ಟ್‌ನ ಲೆಕ್ಕಪತ್ರ ಮಂಡನೆಗೆ ವಚನಾನಂದ ಸ್ವಾಮೀಜಿ ಪರ ಭಕ್ತರ ವಿರೋಧ**

**2008ರಿಂದ 2026ರವರೆಗೆ 27.61 ಕೋಟಿ ರೂ. ದೇಣಿಗೆ: ಧರ್ಮದರ್ಶಿಯಿಂದ ಮಾಹಿತಿ**



**ಹರಿಹರ (ದಾವಣಗೆರೆ), ಏ.27:** ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ಟ್ರಸ್ಟ್‌ನ ಲೆಕ್ಕಪತ್ರ ಮಂಡನೆಗೆ ವಚನಾನಂದ ಸ್ವಾಮೀಜಿ ಪರ ಭಕ್ತರು ವಿರೋಧ ವ್ಯಕ್ತಪಡಿಸಿದರು. ಇದರಿಂದ ಲೆಕ್ಕಪತ್ರ ಮಂಡನೆ ಸಭೆ ಗೊಂದಲದ ಗೂಡಾಯಿತು. ಮಠದ ಆವರಣದಲ್ಲಿ ಏರ್ಪಡಿಸಿದ ಸಭೆ ಆರಂಭವಾದ ಕೆಲ ಹೊತ್ತಿನ ಬಳಿಕ ಸಭೆಯಿಂದ ಹೊರ ನಡೆದ ಕೆಲವರು ಲೆಕ್ಕಪತ್ರ ಮಂಡನೆ ಸಭೆಗೆ ಬಹಿಷ್ಕಾರ ಹಾಕಿದರು.

ಬಳಿಕ ಸ್ವಾಮೀಜಿ ಪರ ಗುಂಪು ವೇದಿಕೆ ಸಮೀಪ ಧಾವಿಸಿ ಟ್ರಸ್ಟ್ ಸದಸ್ಯ ಎಚ್.ಎಸ್.ನಾಗರಾಜ್ ಅವರ ಭಾಷಣಕ್ಕೆ ಅಡ್ಡಿಪಡಿಸಿತು. ಇದರಿಂದ ಸಭೆಯಲ್ಲಿ ಕೋಲಾಹಲ ಸೃಷ್ಟಿ ಆಯಿತು. ವೇದಿಕೆಗೆ ನುಗ್ಗುವ ಪ್ರಯತ್ನವನ್ನು ಪೊಲೀಸರು ವಿಫಲಗೊಳಿಸಿದರು. ಟ್ರಸ್ಟ್ ಪರವಾಗಿರುವವರು 'ಹರ ಹರ ಮಹಾದೇವ', 'ಜೈ ಪಂಚಮಸಾಲಿ' ಘೋಷಣೆ ಮೊಳಗಿಸಿದರು. ಮಧ್ಯೆ ಪ್ರವೇಶಿಸಿದ ಪೊಲೀಸರು ಸ್ವಾಮೀಜಿ ಪರ ಬಣದ ಭಕ್ತರನ್ನು ದೇಗುಲದ ಸಮೀಪ ತಡೆದರು. ಗೊಂದಲ ಉಂಟಾಗದಂತೆ ಎಚ್ಚರಿಕೆ ನೀಡಿದರು. ಕೆಲ ಹೊತ್ತಿನ ಬಳಿಕ ಸ್ವಾಮೀಜಿ ಪರ ಭಕ್ತರು ಗುರುಪೀಠದ ಕಟ್ಟಡದ ಕಡೆ ಸಾಗಿದರು. ಬಳಿಕ ಟ್ರಸ್ಟ್ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಅವರು ಲೆಕ್ಕಪತ್ರ ಮಂಡನೆ ಮಾಡಲು ಆರಂಭಿಸಿದರು. ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ಟ್ರಸ್ಟ್‌ನ ಲೆಕ್ಕಪತ್ರ ಮಂಡನೆಗೆ ವಚನಾನಂದ ಸ್ವಾಮೀಜಿ ಪರ ಭಕ್ತರು ವಿರೋಧ ವ್ಯಕ್ತಪಡಿಸಿದರು. ಇದರಿಂದ ಲೆಕ್ಕಪತ್ರ ಮಂಡನೆ ಸಭೆ ಗೊಂದಲದ ಗೂಡಾಯಿತು.

**ಲೆಕ್ಕ ನೀಡಿದ ಧರ್ಮದರ್ಶಿ ಬಿ.ಸಿ. ಉಮಾಪತಿ**



ಲೆಕ್ಕ ಕೊಡುವ ಪ್ರಕ್ರಿಯೆ ಆರಂಭಿಸಿದ ಪಂಚಮಸಾಲಿ ಪೀಠದ ಟ್ರಸ್ಟ್ ಧರ್ಮದರ್ಶಿ ಬಿ.ಸಿ. ಉಮಾಪತಿ , 2008ರಿಂದ 2026ರವರೆಗೆ ಮಠಕ್ಕೆ ಬಂದಿರುವ ಧಣಿಗೆ ಕುರಿತು ಸಂಪೂರ್ಣವಾದ ಮಾಹಿತಿ ನೀಡಿದ್ದಾರೆ. 2008ರಿಂದ 2026ರ ವರೆಗಿನ ಲೆಕ್ಕ ಮಂಡನೆ ಆರಂಭವಾಗಿದ್ದು ಟ್ರಸ್ಟಿನ ಧರ್ಮದರ್ಶಿ ಬಿಸಿ ಉಮಾಪತಿ ಲೆಕ್ಕ ಮಂಡನೆ ಮಾಡಿದ್ದು 27 ಕೋಟಿ 61 ಲಕ್ಷದ 57,518 ರೂ. ದೇಣಿಗೆ ಬಂದಿದೆ. ಭಕ್ತರ ಮತ್ತು ಸರ್ಕಾರದಿಂದ ಬಂದಿದ್ದ ಒಟ್ಟು ಹಣ ಇದಾಗಿದ್ದು ಕಳೆದ 18 ವರ್ಷಗಳಿಂದ ಮಠಕ್ಕೆ ಬಂದ ದೇಣಿಗೆ ಇದಾಗಿದೆ. ಸರ್ಕಾರದಿಂದ, ಭಕ್ತರಿಂದ, ಸಮಾಜ ಬಾಂಧವರಿಂದ ಹಾಗೂ ದಾಸೋಹ ನಿಧಿಗಾಗಿ ಒಟ್ಟು 27 ಕೋಟಿ 61 ಲಕ್ಷದ 57,518 ರೂ. ಜಮಾ ಆಗಿದೆ.ಇದು ಲೆಕ್ಕ ಕೊಡಬೇಕು ಅಂತ ಏನು ಚಳವಳಿ ಮಾಡುತ್ತಿದ್ದಾರೋ ಇದು ಲೆಕ್ಕ ಕೊಡುವ ಚಳವಳಿ ಅಲ್ಲ. ನಾವು ಈಗಾಗಲೇ ಹೇಳಿಕೆ ಸಂಬಂಧ ಲೆಕ್ಕ ಕೊಟ್ಟಿದ್ದೇವೆ ಸ್ವಾಮೀಜಿ ಮಾಡಿದ ತಪ್ಪನ್ನು ಮುಚ್ಚಿಹಾಕುವುದಕ್ಕೆ ಈ ಲೆಕ್ಕ ಕೊಡುವ ಚಳವಳಿ ತಂತ್ರ ಮಾಡಲಾಗಿದೆ ಎಂದು ಉಮಾಪತಿ ಆರೋಪಿಸಿದ್ದಾರೆ.

# ಸರ್ವಜ್ಞನಗರದಲ್ಲಿ ನವೀಕೃತ ಡಾ.ರಾಜ್ ಉದ್ಯಾನವನ ಲೋಕಾರ್ಪಣೆ

**ನೂತನ ಬಯಲು ರಂಗಮಂದಿರ ಉದ್ಘಾಟನೆ ಮಾಡಿದ ಸಚಿವ ಕೆ.ಜಿ. ಜಾರ್ಜ್**



ಬೆಂಗಳೂರು, ಏ.27: ಡಾ.ರಾಜ್‌ಕುಮಾರ್ ಅವರು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ಹಸಿರಾಗಿ, ಜನರ ಉಸಿರಾಗಿದ್ದಾರೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ. ಡಾ.ರಾಜಕುಮಾರ್ ಜನ್ಮದಿನದ ಪ್ರಯುಕ್ತ ಅವರ ಪುತ್ತಳಿಗೆ ಮಾಲಾರ್ಪಣೆ ಮಾಡಿದ ಬಳಿಕ ಕಮ್ಮನಹಳ್ಳಿಯಲ್ಲಿ ನವೀಕರಣಗೊಂಡ ಡಾ. ರಾಜ್‌ಕುಮಾರ್ ಉದ್ಯಾನವನ್ನು ಉದ್ಘಾಟಿಸಿ, ನೂತನವಾಗಿ ನಿರ್ಮಿಸಿರುವ ಬಯಲು ರಂಗಮಂದಿರವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ನಮ್ಮ ಕ್ಷೇತ್ರದಲ್ಲಿ ಡಾ.ರಾಜಕುಮಾರ್ ಹೆಸರಿನಲ್ಲಿ ಉದ್ಯಾನ ನಿರ್ಮಿಸಿ, ಅಚ್ಚುಕಟ್ಟಾಗಿ ನಿರ್ವಹಿಸಲಾಗುತ್ತಿದೆ. ಈಗ ಹೊಸದಾಗಿ ನಿರ್ಮಿಸಿರುವ ಬಯಲು ರಂಗಮಂದಿರವು ಸಮುದಾಯದ ವಿವಿಧ ಕಾರ್ಯಕ್ರಮಗಳನ್ನು ನಡೆಸಲು ವೇದಿಕೆಯಾಗಲಿದೆ. ಕ್ಷೇತ್ರದ ಇತರ ಉದ್ಯಾನಗಳನ್ನೂ ನವೀಕರಿಸಿ ಮತ್ತಷ್ಟು ಸುಂದರಗೊಳಿಸಲಾಗುವುದು ಎಂದರು. ಉದ್ಯಾನದಲ್ಲಿ ಶುಚಿತ್ವ, ಉದ್ಯಾನ ಬಳಕೆದಾರರಿಗೆ ಒದಗಿಸಿರುವ ಸೌಕರ್ಯಗಳನ್ನು ಪರಿಶೀಲಿಸದರಲ್ಲದೆ, ವಿಕಲಚೇತನರಿಗೆ ವ್ಹೀಲ್‌ಚೇರ್ ಹಾಗೂ ಕ್ರೀಡಾಪಟುಗಳಿಗೆ ಕ್ರೀಡಾ ಸಾಮಗ್ರಿಗಳನ್ನು ವಿತರಿಸಿದರು. ಹೆಣ್ಣೂರು ಜೀವವೈವಿಧ್ಯ ಉದ್ಯಾನಕ್ಕೂ ಭೇಟಿ ನೀಡಿದ ಸಚಿವ ಕೆ.ಜೆ. ಜಾರ್ಜ್, ಸುಸ್ಥಿರ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲನೆ ನಡೆಸಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಏಪ್ರಿಲ್ 28, 2026, ಮಂಗಳವಾರ

## ಒಳಪುಟಗಳಲ್ಲಿ

ಕಾನೂನು ವಿದ್ಯಾರ್ಥಿಗಳಿಗೆ ಭಾರತೀಯ ಮೌಲ್ಯ ಕಲಿಸಬೇಕು - ಪು.4

ಉಮರ್ ಖಾಲಿದ್ ಕಾರ್ಯಕ್ರಮಕ್ಕೆ ಅನುಮತಿ ಬೇಡ: ಸಂಸದ ಮೋಹನ್ ಮನವಿ - ಪು.5



ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಸಿದ ಘಟನೆಗೆ ಬ್ರಾಹ್ಮಣ ಮಹಾಸಂಘ ಖಂಡನೆ - ಪು.6

ಹವಾಮಾನ ಬದಲಾವಣೆಯ ಕ್ರಿಯಾಸಮಿತಿ ಯೋಜನೆ ತರಬೇತಿ - ಪು.7

# ಮುಕ್ತ ವ್ಯಾಪಾರ ಒಪ್ಪಂದಕ್ಕೆ ಭಾರತ–ನ್ಯೂಜಿಲೆಂಡ್ ಸಹಿ

- ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಸಹಿ
- ಹೂಡಿಕೆ, ಉದ್ಯೋಗ ಕ್ಷೇತ್ರದಲ್ಲಿ ವ್ಯಾಪಕ ಬದಲಾವಣೆ ನಿರೀಕ್ಷೆ
- 100% ತೆರಿಗೆಮುಕ್ತ ವ್ಯವಹಾರ

**ನವದೆಹಲಿ, ಏ.27:** ಭಾರತ ಮತ್ತು ನ್ಯೂಜಿಲೆಂಡ್‌ನಡುವಿನ ದ್ವಿಪಕ್ಷೀಯ ವ್ಯಾಪಾರ ಸಂಬಂಧಗಳಲ್ಲಿ ಹೊಸ ಯುಗ ಆರಂಭವಾಗಿದೆ. ಎರಡು ದೇಶಗಳು ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿವೆ. ಈ ಒಪ್ಪಂದವು ವ್ಯಾಪಾರ, ಹೂಡಿಕೆ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ವ್ಯಾಪಕ ಬದಲಾವಣೆಗಳನ್ನು ತರಲಿದೆ ಎಂದು ನಿರೀಕ್ಷಿಸಲಾಗಿದೆ.

ಕೇಂದ್ರ ವಾಣಿಜ್ಯ ಮತ್ತು ಉದ್ಯೋಗ ಸಚಿವ ಪಿಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್‌ವಾಣಿಜ್ಯ ಮಂತ್ರಿ ಟಾಡ್ ಮ್ಯಾಕ್‌ಲೇ ಉಪಸ್ಥಿತಿಯಲ್ಲಿ ಈ ಮಹತ್ವದ ಒಪ್ಪಂದಕ್ಕೆ ಅಧಿಕೃತ ಸಹಿ ಹಾಕಲಾಯಿತು. ಇದು ಭಾರತೀಯ ಆರ್ಥಿಕತೆ ಮತ್ತು ರಫ್ತುದಾರರಿಗೆ ಜಾಗತಿಕ ಮಾರುಕಟ್ಟೆಯಲ್ಲಿ ದೊಡ್ಡ ಅವಕಾಶ ಸೃಷ್ಟಿಸಲಿದೆ.

ಕಳೆದ ವರ್ಷ ಮಾರ್ಚ್ 16 ರಂದು ಪ್ರಾರಂಭವಾದ ಮಾತುಕತೆಗಳು ಒಂಭತ್ತು ತಿಂಗಳಲ್ಲಿ ಪೂರ್ಣಗೊಂಡವು. ಈ ಒಪ್ಪಂದ ಜಾರಿಗೆಯಾದ ಬಳಿಕ ಭಾರತಕ್ಕೆ ಎಲ್ಲ ತೆರಿಗೆಯುಕ್ತ ಉತ್ಪನ್ನಗಳ ಮೇಲೆ ತಕ್ಷಣ 100% ಶುಲ್ಕ–ಮುಕ್ತ ಪ್ರವೇಶ ದೊರೆಯಲಿದೆ. ಇದರ ಪರಿಣಾಮವಾಗಿ ನ್ಯೂಜಿಲ್ಯಾಂಡ್‌ಗೆ ಹೋಗುವ ಭಾರತೀಯ ರಫ್ತುಗಳ ಮೇಲೆ ಯಾವುದೇ ರೀತಿಯ ತೆರಿಗೆ ವಿಧಿಸಲಾಗುವುದಿಲ್ಲ.

ಪ್ರಸ್ತುತ ನ್ಯೂಜಿಲೆಂಡ್‌ಭಾರತದಿಂದ ರಫ್ತು ಮಾಡುವ ಸುಮಾರು 450 ಉತ್ಪನ್ನಗಳ ಮೇಲೆ 10% ಸುಂಕ ವಿಧಿಸುತ್ತಿತ್ತು. ಹೊಸ ಒಪ್ಪಂದದಡಿ ಈ ಸುಂಕ ರದ್ದಾಗುತ್ತದೆ. ಇದರಿಂದ ಭಾರತೀಯ ಜವಳಿ, ಚರ್ಮೋದ್ಯಮ, ಟೋಪಿ, ಸಿರಾಮಿಕ್ಸ್, ಕಾರ್ಪೆಟ್, ವಾಹನಗಳು ಮತ್ತು ಅವುಗಳ ಭಾಗಗಳ ರಫ್ತುಗೆ ಭಾರಿ ಉತ್ತೇಜನ ದೊರೆಯಲಿದೆ.ಬದಲಿಗೆ, ಭಾರತವು ನ್ಯೂಜಿಲ್ಯಾಂಡ್‌ನಿಂದ ಬರುವ ಶೇ.95 ಸಾಮಗ್ರಿಗಳ ಮೇಲೆ ಸುಂಕದಲ್ಲಿ ವಿನಾಯಿತಿ ಅಥವಾ ಕಡಿತ ಮಾಡಿದೆ. ಒಪ್ಪಂದದ ಪ್ರಕಾರ ನ್ಯೂಜಿಲೆಂಡ್‌ಮುಂದಿನ 15 ವರ್ಷಗಳಲ್ಲಿ ಭಾರತದಲ್ಲಿ 20 ಶತಕೋಟಿ ಡಾಲರ್ (ಸುಮಾರು 1.7 ಲಕ್ಷ ಕೋಟಿ ರೂಪಾಯಿ) ಹೂಡಿಕೆ ಮಾಡುವ ಬದ್ಧತೆ ವ್ಯಕ್ತಪಡಿಸಿದೆ. ಇದು ಯುರೋಪಿಯನ್ ಫ್ರೀ ಟ್ರೇಡ್ ಅಸೋಸಿಯೇಷನ್ ಭಾರತದೊಂದಿಗೆ ಮಾಡಿದ 100 ಶತಕೋಟಿ ಡಾಲರ್ ಹೂಡಿಕೆ ಚೌಕಟ್ಟಿನ ಮಾದರಿಯಲ್ಲೇ ಇದೆ.

ಇನ್ನೊಂದು ತಂತ್ರಾತ್ಮಕ ಕ್ರಮವಾಗಿ, ಭಾರತವು ತನ್ನ ಸೂಕ್ಷ್ಮ ದೇಶೀಯ ಕೃಷಿ ಮತ್ತು ಡೈರಿ ಕ್ಷೇತ್ರಗಳನ್ನು ಈ FTAಯ ವ್ಯಾಪ್ತಿಯಿಂದ ಸಂಪೂರ್ಣ ಹೊರಗಿಡಲಾಗಿದೆ. ಹಾಲು, ಕ್ರೀಮ್, ಮಜ್ಜಿಗೆ, ಮೊಸರು, ಪನ್ನೀರ್ ಸೇರಿದಂತೆ ಎಲ್ಲಾ ಡೈರಿ ಉತ್ಪನ್ನಗಳು ಮತ್ತು ಇತರ ಕೃಷಿ ಉತ್ಪನ್ನಗಳ ಮೇಲೆ ಯಾವುದೇ ಆಯಾತ ಸುಂಕ ವಿನಾಯಿತಿ ನೀಡಲಾಗಿಲ್ಲ. ಇದರಿಂದ ಭಾರತೀಯ ರೈತರು ಮತ್ತು ಸ್ಥಳೀಯ ಡೈರಿ ಉದ್ಯಮಗಳ ಹಿತಗಳ ರಕ್ಷಣೆ ಖಚಿತವಾಗಿದೆ.



ಈ ಒಪ್ಪಂದದಲ್ಲಿ ಜಾಗತಿಕ ಮಟ್ಟದಲ್ಲಿ ಮೊದಲ ಬಾರಿಗೆ ನ್ಯೂಜಿಲೆಂಡ್‌ಯಾವುದೇ ದೇಶದೊಂದಿಗೆ ವಿದ್ಯಾರ್ಥಿ ಚಲನೆ ಮತ್ತು ಪಠ್ಯಾವಧಿ ನಂತರದ ಕೆಲಸ ವೀಸಾ (ಪೋಸ್ಟ್–ಸ್ಟಡಿ ವರ್ಕ್ ವೀಸಾ) ಬಗ್ಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಇನ್ನುಮುಂದೆ ಭಾರತೀಯ ವಿದ್ಯಾರ್ಥಿಗಳು ತಮ್ಮ ಪಠ್ಯಾವಧಿಯಲ್ಲಿ ವಾರಕ್ಕೆ 20 ಗಂಟೆಗಳವರೆಗೆ ಕೆಲಸ ಮಾಡಬಹುದು ಮತ್ತು ವಿಸ್ತರಿತ ಪೋಸ್ಟ್–ಸ್ಟಡಿ ವರ್ಕ್ ವೀಸಾ ಪಡೆಯಬಹುದು.

ಉನ್ನತ ವೇತನದ ಉದ್ಯೋಗ ಬಯಸುವ ಕೌಶಲ್ಯಪೂರ್ಣ ಭಾರತೀಯ ವೃತ್ತಿಪರರಿಗೆ ಅನುಕೂಲವಾಗಲಿದೆ. ಈ ಮೂಲಕ ವೃತ್ತಿಪರರು 3 ವರ್ಷಗಳವರೆಗೆ ನ್ಯೂಜಿಲ್ಯಾಂಡ್‌ನಲ್ಲಿ ಉಳಿದು ಕೆಲಸ ಮಾಡಬಹುದು.

**ವರ್ಕಿಂಗ್ ಹಾಲಿಡೇ ಕಾರ್ಯಕ್ರಮ:** ಒಪ್ಪಂದದಡಿ ವಿಶೇಷ ವರ್ಕಿಂಗ್ ಹಾಲಿಡೇ ವೀಸಾ ಕಾರ್ಯಕ್ರಮವನ್ನೂ ಪರಿಚಯಿಸಲಾಗಿದೆ. ಇದರಲ್ಲಿ ಪ್ರತಿ ವರ್ಷ 1000 ಯುವ ಭಾರತೀಯರು 12 ತಿಂಗಳ ಕಾಲ ನ್ಯೂಜಿಲೆಂಡ್‌ಗೆ ಬಹು ಪ್ರವೇಶದೊಂದಿಗೆ ಹೋಗಬಹುದು.

ಒಪ್ಪಂದ ಸಹಿಯ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ವಾಣಿಜ್ಯ ಮತ್ತು ಉದ್ಯೋಗ ಸಚಿವ ಪೀಯೂಷ್ ಗೋಯಲ್, ಬದಲಾಗುತ್ತಿರುವ ಕಾಲದಲ್ಲಿ ಭಾರತ ಮತ್ತು ನ್ಯೂಜಿಲೆಂಡ್‌ಒಬ್ಬರನ್ನೊಬ್ಬರು ಆಯ್ಕೆ ಮಾಡಿಕೊಂಡಿವೆ.. ಈ ಈಖಿಂ ರೆಕಾರ್ಡ್ 9 ತಿಂಗಳಲ್ಲಿ ಪೂರ್ಣಗೊಂಡಿದೆ. ಈ ವೇಗವು ನಮ್ಮ ದೇಶಗಳ ನಡುವಿನ ಆಳವಾದ ವಿಶ್ವಾಸ ಮತ್ತು ಸಾಮಾನ್ಯ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ.

ಈ ಒಪ್ಪಂದವು ವಿಕಸಿತ ದೇಶಗಳೊಂದಿಗೆ ಭಾರತದ ಸಂಬಂಧಗಳಲ್ಲಿ ಮತ್ತೊಂದು ಮಹತ್ವದ ಸಾಧನೆಯಾಗಿದೆ ಮತ್ತು ಪ್ರಧಾನಿ ಮೋದಿ ಅವರ ವಿಕಸಿತ ಭಾರತ 2047 ದೃಷ್ಟಿಕೋನಕ್ಕೆ ನಮ್ಮನ್ನು ಹತ್ತಿರ ತರುತ್ತದೆ. ಈ ಒಪ್ಪಂದದಿಂದ ಭಾರತದ ರಫ್ತು, ವಿಶೇಷವಾಗಿ ವಸ್ತ್ರ, ಔಷಧಿ ಮತ್ತು ಯಂತ್ರೋಪಕರಣಗಳಲ್ಲಿ ಬೆಳವಣಿಗೆಯಾಗುವ ನಿರೀಕ್ಷೆಯಿದೆ. ಸೇವಾ ಕ್ಷೇತ್ರ, ವಿಶೇಷವಾಗಿ ಐಟಿ ಮತ್ತು ಆರ್ಥಿಕ ಸೇವೆಗಳಿಗೂ ಲಾಭವಾಗಲಿದೆ. ಪ್ರಸ್ತುತ ಎರಡು ದೇಶಗಳ ನಡುವಿನ ವ್ಯಾಪಾರ 1.3 ಶತಕೋಟಿ ಡಾಲರ್ ಆಗಿದೆ. ಇದನ್ನು ಮುಂದಿನ ಐದು ವರ್ಷಗಳಲ್ಲಿ 500 ಕೋಟಿ ಡಾಲರ್‌ಗೆ ಏರಿಸುವ ಗುರಿ ಹೊಂದಲಾಗಿದೆ ಎಂದರು.



ಚಾಮರಾಜನಗರದ ಉತ್ತವಳ್ಳಿಯ ಪಂಚಶೀಲ ಬೆಟ್ಟದ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರ ವತಿಯಿಂದ ಬೆಂಗಳೂರಿನ ಸದಾಶಿವ ನಗರದ ನಾಗಸೇನಾ ಬುದ್ಧ ವಿಹಾರದಲ್ಲಿ ಸೋಮವಾರ ಆಯೋಜಿಸಿದ್ದ ವಿಶ್ವ ಬೌದ್ಧ ಮಹಾ ಸಮ್ಮೇಳನ ಸಮಿತಿ, ಉಪಾಸಿಕ ಅಂಡ್ ಉಪಾಸಕ ಚಾರಿಟಬಲ್ ಟ್ರಸ್ಟ್ ಹಾಗೂ ಇಂಟರ್‌ನ್ಯಾಷನಲ್ ಬುದ್ಧಿಸ್ಟ್ ಮಾಂಕ್ಸ್ ಚಾರಿಟಬಲ್ ಟ್ರಸ್ಟ್, ವಿಶ್ವ ಬೌದ್ಧ ಮಹಾ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಅಲ್ಲದೆ 888 ಅಡಿ ಎತ್ತರದ ಭಗವಾನ್ ಬುದ್ಧರ ಮೂರ್ತಿ ನಿರ್ಮಾಣ ಯೋಜನೆಗೆ ಚಾಲನೆ ನೀಡಿದರು.

### ಎಎಪಿ ತೊರೆದ ಸಂಸದರನ್ನು ಬಿಜೆಪಿ ಪಟ್ಟಿಯಲ್ಲಿ ಸೇರಿಸಲು ಸಭಾಪತಿ ಸೂಚನೆ

# ರಾಜ್ಯಸಭೆಯಲ್ಲಿ ಕಮಲ ಪಕ್ಷದ ಬಲ 113ಕ್ಕೆ ಏರಿಕೆ

**ನವದೆಹಲಿ, ಏ.27:** ರಾಜ್ಯಸಭೆಯಲ್ಲಿ ಏಳು ಆಮ್ ಆದ್ಮಿ ಪಕ್ಷ ಸಂಸದರನ್ನು ಭಾರತೀಯ ಜನತಾ ಪಕ್ಷ ಅಡಿಯಲ್ಲಿ ಪಟ್ಟಿ ಮಾಡಲು ರಾಜ್ಯಸಭಾ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಸೋಮವಾರ ಅನುಮತಿ ನೀಡಿದ್ದಾರೆ. ಇದರೊಂದಿಗೆ ಮೇಲ್ಮನೆಯಲ್ಲಿ ಬಿಜೆಪಿಯ ಬಲ 113ಕ್ಕೆ ಏರಿಕೆಯಾಗಿದೆ. ಅರವಿಂದ್ ಕೇಜ್ರಿವಾಲ್ ನೇತೃತ್ವದ ಎಎಪಿ ಪಕ್ಷದ ಬಲ ಮೂರು ಸದಸ್ಯರಿಗೆ ಇಳಿಕೆಯಾಗಿದೆ.

ರಾಘವ್ ಛಡ್ಡಾ, ಅಶೋಕ್ ಮಿತ್ತಲ್, ಹರ್ಭಜನ್ ಸಿಂಗ್, ಸಂದೀಪ್ ಪಾಠಕ್, ವಿಕ್ರಮ್‌ಜಿತ್ ಸಹ್ನಿ, ಸ್ವಾತಿ ಮಲಿವಾಲ್ ಹಾಗೂ ರಾಜಿಂದರ್ ಗುಪ್ತಾ ಬಿಜೆಪಿ ಸೇರ್ಪಡೆಯಾದ ಹಿನ್ನೆಲೆ ಎಎಪಿಯಲ್ಲಿ ಸಂಜಯ್ ಸಿಂಗ್, ಎನ್.ಡಿ. ಗುಪ್ತಾ ಮತ್ತು ಸಂತ ಬಲ್ಬೀರ್ ಸಿಂಗ್ ಮಾತ್ರ ಉಳಿದಿದ್ದಾರೆ. ಈ ಬೆಳವಣಿಗೆಯ ನಡುವೆಯೇ, ಪಕ್ಷಾಂತರ ವಿರೋಧಿ ಕಾನೂನಿನಡಿಯಲ್ಲಿ ಈ ಏಳು ಸಂಸದರನ್ನು ಅನರ್ಹಗೊಳಿಸುವಂತೆ ಎಎಪಿ ನಾಯಕ ಸಂಜಯ್ ಸಿಂಗ್ ರಾಜ್ಯಸಭಾ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿದ್ದಾರೆ.

ಸಂವಿಧಾನದ ಹತ್ತನೇ ಶೆಡ್ಯೂಲ್ ಉಲ್ಲೇಖಿಸಿ ಸಲ್ಲಿಸಿದ ಈ ಅರ್ಜಿಯಲ್ಲಿ, ಪಕ್ಷಾಂತರ ನಡೆದಿದೆ ಎಂದು ಆರೋಪಿಸಲಾಗಿದೆ.ಇದಕ್ಕೆ ಪ್ರತಿಯಾಗಿ, ಬಿಜೆಪಿ ಸೇರ್ಪಡೆಯಾದ ಸಂಸದರು ತಾವು ಸಂಸದೀಯ ಪಕ್ಷದ ಮೂರರಲ್ಲಿ ಎರಡು ಭಾಗಕ್ಕಿಂತ ಹೆಚ್ಚು ಸದಸ್ಯರನ್ನು ಒಳಗೊಂಡಿರುವುದರಿಂದ ವಿಲೀನ ನಿಯಮದಡಿ ಅನರ್ಹತೆ ತಪ್ಪಿಸಿಕೊಳ್ಳಬಹುದು ಎಂದು ವಾದಿಸಿದ್ದಾರೆ. ಆದರೆ ಮೂಲ ಪಕ್ಷವೇ ವಿಲೀನಗೊಂಡಿಲ್ಲ ಎಂಬುದು ಎಎಪಿ ವಾದವಾಗಿದೆ. ಈ ಕುರಿತು ಎರಡೂ ಕಡೆಯ ವಾದಗಳನ್ನು ಆಲಿಸಿದ ಬಳಿಕ ಸ್ಪೀಕರ್ ಅಂತಿಮ ತೀರ್ಮಾನ ಕೈಗೊಳ್ಳಬೇಕಿದೆ.

ಸಂಸದೀಯ ಬಲಾಬಲಗಳ ಪ್ರಕಾರ, 245 ಸದಸ್ಯರ ರಾಜ್ಯಸಭೆಯಲ್ಲಿ ಬಹುಮತಕ್ಕೆ ಅಗತ್ಯವಾದ 123 ಸ್ಥಾನಗಳಿಗೆ ಬಿಜೆಪಿ ಈಗ ಕೇವಲ 10 ಸ್ಥಾನಗಳು ಬೇಕಾಗಿದೆ. ಎನ್‌ಡಿಎ ಮೈತ್ರಿಕೂಟವು ಒಟ್ಟು 149 ಸದಸ್ಯರನ್ನು ಹೊಂದಿದ್ದು, ಇದರಲ್ಲಿ ಏಳು ನಾಮನಿರ್ದೇಶಿತ ಹಾಗೂ ಇಬ್ಬರು ಸ್ವತಂತ್ರ ಸಂಸದರು ಸೇರಿದ್ದಾರೆ. ಬಿಜೆಪಿಯೇತರ ಪಕ್ಷಗಳಲ್ಲಿ ಎಐಎಡಿಎಂಕೆ (5), ಜೆಡಿ(ಯು) (4), ಎನ್‌ಸಿಪಿ (4), ಟಿಡಿಪಿ, ಶಿವಸೇನೆ ಮತ್ತು ಯುಪಿಪಿಎಲ್ (ತಲಾ 2) ಹಾಗೂ ಆರ್‌ಪಿಐ(ಎ), ಜೆಡಿ(ಎಸ್), ಎಜಿಪಿ, ಎನ್‌ಪಿಪಿ, ಎಂಎನ್‌ಎಫ್, ಆರ್‌ಎಲ್‌ಡಿ, ಆರ್‌ಎಲ್‌ಎಂ ಮತ್ತು ಪಿಎಂಕೆ (ತಲಾ 1) ಸದಸ್ಯರನ್ನು ಹೊಂದಿವೆ.

ವಿರೋಧ ಪಕ್ಷಗಳ ಇಂಡಿ ಒಕ್ಕೂಟ ಒಟ್ಟು 75 ಸದಸ್ಯರನ್ನು ಹೊಂದಿದೆ. ಕಾಂಗ್ರೆಸ್ (29), ತೃಣಮೂಲ ಕಾಂಗ್ರೆಸ್ (13), ಡಿಎಂಕೆ (8), ಸಮಾಜವಾದಿ ಪಕ್ಷ (4), ಆರ್‌ಜೆಡಿ, ಸಿಪಿಐ(ಎಂ), ನ್ಯಾಷನಲ್ ಕಾನ್ಫರೆನ್ಸ್ (ತಲಾ 3), ಜೆಎಂಎಂ ಮತ್ತು ಮುಸ್ಲಿಂ ಲೀಗ್ (ತಲಾ 2) ಹಾಗೂ ಎನ್‌ಸಿಪಿ (ಎಸ್‌ಪಿ), ಶಿವಸೇನೆ (ಯುಬಿಟಿ), ಕೇರಳ ಕಾಂಗ್ರೆಸ್ (ಎಂ), ಡಿಎಂಡಿಕೆ, ಎಂಎನ್‌ಎಂ ಮತ್ತು ಸ್ವತಂತ್ರ (ತಲಾ 1) ಸದಸ್ಯರನ್ನು ಒಳಗೊಂಡಿದೆ. ಎಎಪಿ ಕೂಡ ಈ ಮೈತ್ರಿಕೂಟದ ಭಾಗವಾಗಿದೆ. ಒಟ್ಟು ಸಂಖ್ಯೆಯನ್ನು 78ಕ್ಕೆ ತಲುಪಿಸಿದೆ.

ವೈಎಸ್‌ಆರ್ ಕಾಂಗ್ರೆಸ್ (7), ಬಿಜೆಡಿ (6), ಬಿಆರ್‌ಎಸ್ (3) ಮತ್ತು ಬಿಎಸ್‌ಪಿ (1) ಪಕ್ಷಗಳು ತಟಸ್ಥ ನಿಲುವು ತಾಳಿವೆ. ರಾಜ್ಯಸಭೆಯಲ್ಲಿ ಒಂದು ಸ್ಥಾನ ಖಾಲಿಯಾಗಿದೆ. ಜೂನ್ ಮತ್ತು ಜುಲೈನಲ್ಲಿ ಖಾಲಿಯಾಗುವ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಎನ್‌ಡಿಎ ಇನ್ನೂ ಐದು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ. ಇದರಿಂದ ಮೈತ್ರಿಯ ಒಟ್ಟು ಬಲ 163ಕ್ಕೆ ಏರಬಹುದು ಎನ್ನಲಾಗಿದೆ.

# ನಾಲ್ಕೈದು ತಿಂಗಳಲ್ಲಿ ಶಿಕ್ಷಕರ ನೇಮಕಾತಿ



- ಒಳಮೀಸಲಾತಿ ಸಮಸ್ಯೆ ಬಗೆಹರಿದಿದೆ., ಆದಷ್ಟು ಬೇಗ ಪ್ರಕ್ರಿಯೆ ಪೂರ್ಣ

**ಶಿವಮೊಗ್ಗ, ಏ.27:** ನಾಲ್ಕೈದು ತಿಂಗಳಲ್ಲಿ ಶಿಕ್ಷಕರ ನೇಮಕಾತಿ ಮಾಡಲಾಗುವುದು ಎಂದು ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದ್ದಾರೆ. ಸುದ್ದಿ ಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಒಳಮೀಸಲಾತಿ ಘೋಷಣೆಯಾದ ನಂತರ ಶುಕ್ರವಾರ ನೇಮಕಾತಿ ಕುರಿತು ಪ್ರಥಮ ಸಭೆ ನಡೆಸಲಾಗಿದೆ. ನಂತರ ಎರಡು ದಿನ ರಜೆ ಇತ್ತು. ಈಗ ಒಳಮೀಸಲಾತಿ ಸಮಸ್ಯೆ ಬಗೆಹರಿದಿದೆ. ಆದಷ್ಟು ಶೀಘ್ರವಾಗಿ ಶಿಕ್ಷಕರ ನೇಮಕಾತಿಯ ಸಿಇಟಿ ನಡೆಸಲಾಗುವುದು ಎಂದಿದ್ದಾರೆ.ಯಾರು ಓದಿಕೊಂಡಿದ್ದಾರೆ ಅವರ ಕಷ್ಟ ನನಗೂ ತಿಳಿಯುತ್ತದೆ. ಇಲಾಖೆಗೂ ಅಂತಹವರ ಅವಶ್ಯಕತೆ ಇದೆ. ಕೆಲವರು ಸರ್ಕಾರದ ಬಳಿ ದುಡ್ಡಿಲ್ಲ ಎನ್ನುತ್ತಾರೆ. ಅಂತಹವರಿಗೆ ತಲೆಯಲ್ಲಿ ಬುದ್ಧಿಯೇ ಇಲ್ಲ ಎಂದು ತಿರುಗೇಟು ನೀಡಿದರು. ಒಳ ಮೀಸಲಾತಿ ಘೋಷಣೆ ಆಗಿರುವುದರಿಂದ ನೇಮಕಾತಿ ಹಾದಿ ಸುಗಮವಾಗಿದೆ ಎಂದು ಹೇಳಿದರು.

**ವಿಶ್ವನಾಥ್ ಬಗ್ಗೆ ಹೆಚ್ಚು ಮಾತನಾಡಲ್ಲ:** ಎಸ್‌ಎಸ್‌ಎಲ್‌ಸಿ ಫಲಿತಾಂಶದ ಬಗ್ಗೆ ಎಂಎಲ್‌ಸಿ ಎಚ್. ವಿಶ್ವನಾಥ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಮಧು ಬಂಗಾರಪ್ಪ, ಅವರು ದೇಶದ ಭವಿಷ್ಯಕ್ಕೆ, ತಂದೆ ತಾಯಿಗೆ, ಅವರ ಶಿಕ್ಷಕರಿಗೆ ಮಾಡಿದ ಅವಮಾನವಾಗಿದೆ. ಅವರು ಕಾಪಿ ಹೊಡೆಸಿ ತೇರ್ಗಡೆ ಮಾಡಲಾಗಿದೆ ಎಂದಿದ್ದಾರೆ. ವಿಶ್ವನಾಥ್ ಅವರಿಗೆ ವಯಸ್ಸಾಗಿದೆ ಎಂದಷ್ಟೇ ಹೇಳಬಹುದು ಅವರ ಬಗ್ಗೆ ಹೆಚ್ಚು ಮಾತನಾಡಲ್ಲ. ಅವರು ಯಾವ ಪಕ್ಷದಲ್ಲಿದ್ದಾರೆಂದು ತಿಳಿಯುತ್ತಿಲ್ಲ. ಮೈಸೂರು ಜಿಲ್ಲೆಗೆ ವಿಶ್ವನಾಥ್ ಅವಮಾನ ಮಾಡಿದ್ದಾರೆ. ಹೀನಾಯವಾಗಿ ಸೋತು, ಪುಕ್ಸಟ್ಟೆಯಾಗಿ ಪರಿಷತ್ ಸದಸ್ಯರಾಗಿದ್ದಾರೆ. ವಿಶ್ವನಾಥ್‌ಗೆ ವಯಸ್ಸಾಗಿದೆ. ಅವರನ್ನು ಕ್ಷಮಿಸಿ ಬಿಡೋಣ ಎಂದು ಹೇಳಿದರು.

# ಗ್ಯಾರಂಟಿಗಳು ಮಕ್ಕಳ ಭವಿಷ್ಯ ರೂಪಿಸುವ ಶಕ್ತಿ



- ಎಸ್‌ಎಸ್‌ಎಲ್‌ಸಿಯಲ್ಲಿ ರ್ಯಾಂಕ್ ಪಡೆದ ಮೈಸೂರು ವಿದ್ಯಾರ್ಥಿನಿ ಸಾಧನೆಗೆ, ಡಿಸಿಎಂ ಡಿ.ಕೆ. ಶಿವಕುಮಾರ್ ಮೆಚ್ಚುಗೆ

**ಬೆಂಗಳೂರು, ಏ.27:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಗೃಹಲಕ್ಷ್ಮಿ' ಯೋಜನೆಯ ಹಣ ಕೇವಲ ಸಂಸಾರಕ್ಕಷ್ಟೇ ಅಲ್ಲ, ಮಕ್ಕಳ ಭವಿಷ್ಯ ರೂಪಿಸುವ ಶಕ್ತಿಯಾಗಿಯೂ ಪರಿಣಮಿಸಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಬಣ್ಣಿಸಿದ್ದಾರೆ. ಮೈಸೂರಿನ ಮಾಧುರಿ ಆರ್. ಎಂಬ ವಿದ್ಯಾರ್ಥಿನಿ ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯಕ್ಕೆ ಎರಡನೇ ರ್ಯಾಂಕ್ ಗಳಿಸಿದ್ದು, ಬಾಲಕಿಯ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಡಿ.ಕೆ. ಶಿವಕುಮಾರ್ ಅವರು, ಗ್ಯಾರಂಟಿ ಯೋಜನೆಗಳು ಜನರ ಬದುಕಿನಲ್ಲಿ ಮಹತ್ತರವಾದ ಬದಲಾವಣೆ ತರುತ್ತಿವೆ ಎಂಬುದಕ್ಕೆ ಇದೊಂದು ನಿದರ್ಶನ. ಸರ್ಕಾರದ ಗ್ಯಾರಂಟಿ ಯೋಜನೆಗಳು ಇಂತಹ ಹತ್ತು ಹಲವು ಸಾಧನೆಗಳಿಗೆ ಮುನ್ನುಡಿ ಬರೆದಿವೆ. ಬಡವರ ಮನೆಯ ಮಗು ಇಂದು ರಾಜ್ಯಮಟ್ಟದ ರ್ಯಾಂಕ್ ಪಡೆಯಲು ಗ್ಯಾರಂಟಿ ಹಣವೇ ಆಧಾರವಾಗಿದೆ ಎಂಬುದು ಹೆಮ್ಮೆಯ ವಿಷಯ. ನಮ್ಮ ಸರ್ಕಾರ ನಮ್ಮ ಹೆಮ್ಮೆ (ಮೈ ಗವರ್ನಮೆಂಟ್–ಮೈ ಪ್ರೌಡ್), ನಮ್ಮ ಗ್ಯಾರಂಟಿ ನಮ್ಮ ಹೆಮ್ಮೆ (ಮೈ ಗ್ಯಾರಂಟಿ–ಮೈ ಪ್ರೌಡ್) ಎಂಬುದು ಈ ಮೂಲಕ ಸಾಬೀತಾಗಿದೆ ಎಂದು ಹೇಳಿದ್ದಾರೆ

ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಹೊರೆ ಎನ್ನುವ ವಿರೋಧ ಪಕ್ಷದವರು ಇನ್ನಾದರೂ ಅಸತ್ಯ ನುಡಿಯುವುದನ್ನು ಮತ್ತು ದಾರಿತಪ್ಪಿಸುವುದನ್ನು ನಿಲ್ಲಿಸಲಿ. ಆರ್ಥಿಕ ಅಡೆತಡೆಗಳ ಕಾರಣದಿಂದ ಶಿಕ್ಷಣದಲ್ಲಿ ಹಿಂದೆ ಬೀಳುತ್ತಿದ್ದ ಅನೇಕ ವಿದ್ಯಾರ್ಥಿಗಳಿಗೆ ಗ್ಯಾರಂಟಿ ಯೋಜನೆಗಳು ಹೊಸ ಅವಕಾಶಗಳನ್ನು ಸೃಷ್ಟಿಸಿವೆ. ಗ್ಯಾರಂಟಿ ಯೋಜನೆಗಳು "ಓದಿಗೆ ನೆರವು, ಭವಿಷ್ಯಕ್ಕೆ ಭರವಸೆ" ಮೂಡಿಸುತ್ತಿವೆ ಎಂದು ಹೇಳಿದ್ದಾರೆ.

**ಶಿಕ್ಷಣ ರಂಗದಲ್ಲೂ ಗ್ಯಾರಂಟಿ ಕ್ರಾಂತಿ:** ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಕೇವಲ ಅಂಕಿ–ಅಂಶಗಳಲ್ಲ, ಅವು ಜನರ ಜೀವನದ ದಿಕ್ಕನ್ನೇ ಬದಲಿಸುತ್ತಿವೆ. ಯಾರೋ ದೇವರಿಗೆ ಕಿರೀಟ ಮಾಡಿಸಿದರೆ, ಇನ್ಯಾರೋ ಜೀವನೋಪಾಯಕ್ಕಾಗಿ ಬಳೆ ಅಂಗಡಿ ಅಥವಾ ಗೂಡು ಅಂಗಡಿ ಇಟ್ಟುಕೊಂಡು ಸ್ವಾವಲಂಬಿಗಳಾಗುತ್ತಿದ್ದಾರೆ. ಈಗ ಶಿಕ್ಷಣ ರಂಗದಲ್ಲೂ ಗ್ಯಾರಂಟಿ ಯೋಜನೆಗಳು ಕ್ರಾಂತಿ ಮಾಡುತ್ತಿವೆ ಎಂಬುದಕ್ಕೆ ಮಾಧುರಿಯೇ ಸಾಕ್ಷಿ ಎಂದಿದ್ದಾರೆ.

ಮೈಸೂರು ತಾಲೂಕಿನ ಇಲವಾಲದ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಮಾಧುರಿ, 625ಕ್ಕೆ 624 ಅಂಕ ಗಳಿಸಿ ರಾಜ್ಯಕ್ಕೆ ದ್ವಿತೀಯ ಹಾಗೂ ಜಿಲ್ಲೆಗೆ ಟಾಪರ್ ಆಗಿದ್ದಾರೆ. ಮಾಧುರಿ ತಾಯಿ ಸರಿತಾ ಅವರು ಈ ಹಿಂದೆ ಖಾಸಗಿ ಸಂಸ್ಥೆಯಲ್ಲಿದ್ದರು, ಆದರೆ ಅನಾರೋಗ್ಯದ ಕಾರಣ ಕೆಲಸ ಬಿಡಬೇಕಾಯಿತು. ಆ ಸಂಕಷ್ಟದ ಸಮಯದಲ್ಲಿ ಆಸರೆಯಾಗಿದ್ದು ಗೃಹಲಕ್ಷ್ಮಿ ಯೋಜನೆ. ಸರ್ಕಾರ ನೀಡುವ ತಿಂಗಳ 2 ಸಾವಿರ ರೂ.ಗಳನ್ನು ಉಳಿಸಿ, ಅದರಲ್ಲಿ ಮಾಧುರಿಗೆ ಟ್ಯೂಷನ್ ಫೀಸ್ ಕಟ್ಟಿದ್ದರು. ತಾಯಿಯ ಈ ತ್ಯಾಗಕ್ಕೆ ಮಾಧುರಿ ಇಂದು ರ್ಯಾಂಕ್ ಪಡೆಯುವ ಮೂಲಕ ಅದ್ಭುತ ಉಡುಗೊರೆ ನೀಡಿದ್ದಾರೆ.

### ಕುಕ್ಕರ್‌ಬಾಂಬ್ ಸ್ಫೋಟ ಪ್ರಕರಣ

# ಮೊಹಮ್ಮದ್ ಶಾರೀಕ್‌ಗೆ 10 ವರ್ಷ ಜೈಲು: ಎನ್‌ಐಎ ಕೋರ್ಟ್ ಆದೇಶ

ಬೆಂಗಳೂರು, ಏ.27: ಮಂಗಳೂರಿನ ಕುಕ್ಕರ್ ಬಾಂಬ್ ಬ್ಲಾಸ್ಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮೊಹಮ್ಮದ್ ಶಾರಿಕ್‌ಗೆ 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ಎನ್‌ಐಎ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.2022ರ ನವೆಂಬರ್ 19ರಂದು ಮಂಗಳೂರಿನಲ್ಲಿ ನಡೆದಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಎನ್ ಐಎ ವಿಶೇಷ ನ್ಯಾಯಾಲಯ ಇಂದು ಅಪರಾಧಿ ಮೊಹಮ್ಮದ್ ಶಾರಿಕ್ ಗೆ 10 ವರ್ಷಗಳ ಕಠಿಣ ಜೈಲು ಶಿಕ್ಷೆ ನೀಡಿ ಆದೇಶ ಹೊರಡಿಸಿದೆ.2024ರ ಏಪ್ರಿಲ್ ನಲ್ಲಿ ತಾನು ಯಾವುದೇ ತಪ್ಪು ಮಾಡಿಲ್ಲ ಎಂದು ಶಾರಿಕ್ ಹೇಳಿದ್ದ. ಬಳಿಕ ಕಳೆದ ಡಿಸೆಂಬರ್ ನಲ್ಲಿ ಶಾರಿಕ್ ತನ್ನ ತಪ್ಪನ್ನು ಒಪ್ಪಿಕೊಂಡಿದ್ದ. ಆರೋಪಿ ತಪ್ಪೊಪ್ಪಿಕೊಂಡಿದ್ದಾಗಿ ಎನ್‌ಐಎ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಈಗಾಗಲೇ ಅನುಭವಿಸಿರುವ ಜೈಲು ಶಿಕ್ಷೆಯನ್ನು ಕಡಿತಗೊಳಿಸುವುದರೊಂದಿಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿದೆ.

# ಎಐಸಿಸಿ ಅಧ್ಯಕ್ಷ ಖರ್ಗೆ ಭೇಟಿಯಾದ ಸಚಿವ ಸತೀಶ್ ಜಾರಕಿಹೊಳಿ

## ಸಿಎಂ ಬದಲಾವಣೆ ಗೊಂದಲ ಇತ್ಯರ್ಥಪಡಿಸಲು ಮನವಿ



ನವದೆಹಲಿ, ಏ.27: ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲವನ್ನು ಶೀಘ್ರವಾಗಿ ಇತ್ಯರ್ಥಪಡಿಸುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮನವಿ ಮಾಡಿದ್ದಾರೆ.

ದೆಹಲಿಯಲ್ಲಿ ಭೇಟಿಯಾಗಿ ರಾಜ್ಯದ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದ ಅವರು ಸಿಎಂ ವಿಚಾರಕ್ಕೆ ಸಂಬಂಧಿಸಿದಂತೆ ಹೈಕಮಾಂಡ್ ಶೀಘ್ರವೇ ನಿರ್ಧಾರ ಕೈಗೊಳ್ಳುವಂತೆ ಒತ್ತಾಯಿಸಿದರು. ಬೆಳಗ್ಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೇವಾಲ ಅವರನ್ನು ಭೇಟಿಯಾದ ನಂತರ ಖರ್ಗೆ ಅವರನ್ನು ಭೇಟಿಯಾದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲ ಬಗೆಹರಿಸಬೇಕು ಎಂದು ಹಿಂದೆಯೂ ಹೇಳಿದ್ದೇವೆ, ಇಂದೂ ಅದೇ ಹೇಳುತ್ತಿದ್ದೇವೆ. ನಾಯಕತ್ವ ಬದಲಾವಣೆಯಿಂದ ಪಕ್ಷಕ್ಕೆ ಮುಜುಗರವಾಗುತ್ತಿದೆ. ಪಕ್ಷದೊಳಗೆ ಆಂತರಿಕ ಗೊಂದಲ ಹೆಚ್ಚುತ್ತಿದೆ. ಇನ್ನಷ್ಟು ವಿಳಂಬ ಮಾಡುವುದು ಬೇಡ. ಐದು ರಾಜ್ಯಗಳ ಚುನಾವಣಾ ಫಲಿತಾಂಶಗಳ ಬೆನ್ನಲ್ಲೇ ಒಂದು ನಿರ್ಧಾರಕ್ಕೆ ಬರಬೇಕು ಎಂದು ಮನವಿ ಮಾಡಿದ್ದಾರೆ. ಇದೇ ವೇಳೆ ಮುಸ್ಲಿಂ ರಾಜಕೀಯ ಬೆಳವಣಿಗೆಗಳ ಬಗ್ಗೆ ಸಮಾಲೋಚನೆ ನಡೆದಿದೆ ಎಂದು ತಿಳಿದುಬಂದಿದೆ.

ಈ ಬಗ್ಗೆ ಮಾತನಾಡಿದ ಸತೀಶ್ ಜಾರಕಿಹೋಳಿ, ಸಂಪುಟ ವಿಸ್ತರಣೆ ಸೂಕ್ತ ಸಮಯದಲ್ಲಿ ಮಾಡುವುದಾಗಿ ಹಿಂದೆಯೇ ಹೇಳಲಾಗಿದೆ ಎಂದು ಸ್ಪಷ್ಟಪಡಿಸಿದ ಅವರು, ಸಿಎಂ ಬದಲಾವಣೆ ಹೈಕಮಾಂಡ್‌ಗೆ ಬಿಟ್ಟಿದ್ದು ಆದರೆ ಈ ಚರ್ಚೆ ನಿಲ್ಲಬೇಕು. ಹೈಕಮಾಂಡ್ ಯಾವ ನಿರ್ಧಾರಕ್ಕೆ ಬಂದರೂ ನಮ್ಮ ಬೆಂಬಲವಿದೆ ಎಂದು ತಿಳಿಸಿದ್ದಾರೆ. ಹಿರಿಯ ಶಾಸಕರು ಹಿಂದೆ ದೆಹಲಿಗೆ ಬಂದಿದ್ದು ತಪ್ಪಲ್ಲ, ಹೈಕಮಾಂಡ್ ತೀರ್ಮಾನ ಮಾಡುವುದನ್ನು ಕಾಯುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.

# ಕರ್ನಾಟಕದ ಹೆದ್ದಾರಿ ಯೋಜನೆ ತ್ವರಿತವಾಗಿ ಪೂರ್ಣಗೊಳಿಸಿ

## ಅನುಷ್ಠಾನದಲ್ಲಿ ಮಾನದಂಡ ಪಾಲನೆ, ತಂತ್ರಜ್ಞಾನಕ್ಕೆ ಆದ್ಯತೆ ನೀಡುವಂತೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಸೂಚನೆ



**ಬೆಂಗಳೂರು, ಏ.27:** ಕರ್ನಾಟಕದಲ್ಲಿ ಹೆದ್ದಾರಿ ಕಾಮಗಾರಿಗಳನ್ನು ಸುಸ್ಥಿರ ಮತ್ತು ಪರಿಣಾಮಕಾರಿ ಮೂಲಸೌಕರ್ಯವನ್ನು ಖಚಿತಪಡಿಸಿಕೊಳ್ಳಲು ಕಾಮಗಾರಿಗಳನ್ನು ಸಕಾಲಿಕವಾಗಿ ಅನುಷ್ಠಾನಗೊಳಿಸಬೇಕು. ಕಟ್ಟುನಿಟ್ಟಾದ ಗುಣಮಟ್ಟದ ಮಾನದಂಡಗಳನ್ನು ಪಾಲಿಸುವ ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಆದ್ಯತೆ ನೀಡಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಆದೇಶಿಸಿದ್ದಾರೆ.

ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಬಂದ ಪ್ರತಿಕ್ರಿಯೆಯ ಆಧಾರದ ಮೇಲೆ ಕರ್ನಾಟಕ ಮತ್ತು ಕೇರಳದಲ್ಲಿನ ಹೆದ್ದಾರಿ ಯೋಜನೆಗಳ ಗುಣಮಟ್ಟ ಮತ್ತು ನಿರ್ವಹಣೆಯ ಪ್ರಗತಿಯನ್ನು ಪರಿಶೀಲಿಸಿದರು. ನವದೆಹಲಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಮತ್ತು ಯೋಜನಾ ಗುತ್ತಿಗೆದಾರರೊಂದಿಗೆ ಪರಿಶೀಲನಾ ಸಭೆ ನಡೆಸಿದರು.

ಕರ್ನಾಟಕದ 7,926 ಕಿ.ಮೀ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಕೇರಳದ 61 ರಾಷ್ಟ್ರೀಯ ಹೆದ್ದಾರಿ ಯೋಜನೆಗಳಲ್ಲಿ 1,513 ಕಿ.ಮೀ. ಗುಣಮಟ್ಟ ಮತ್ತು ನಿರ್ವಹಣಾ ಪ್ರಗತಿಯನ್ನು ಪರಿಶೀಲಿಸಿದರು. ಪ್ರಮುಖ ಹೆದ್ದಾರಿ ಕಾರಿಡಾರ್‌ಗಳಲ್ಲಿ ಸುಗಮ ಸಂಪರ್ಕವನ್ನು ಖಚಿತಪಡಿಸಿಕೊಳ್ಳಲು, ಆನ್‌ಗ್ರೌಂಡ್ ಕಾಮಗಾರಿಗಳನ್ನು ವೇಗಗೊಳಿಸಲು, ಗುಣಮಟ್ಟದ ಮೇಲ್ವಿಚಾರಣಾ ವ್ಯವಸ್ಥೆಗಳನ್ನು ಬಲಪಡಿಸಲು ಮತ್ತು ಆಸ್ತಿಯ ದೀರ್ಘಾಯುಷ್ಯವನ್ನು ಹೆಚ್ಚಿಸಲು, ಸವಾರಿ ಗುಣಮಟ್ಟವನ್ನು ಸುಧಾರಿಸಲು ಮತ್ತು ಆಧುನಿಕ ನಿರ್ಮಾಣ ಪದ್ಧತಿ ಅಳವಡಿಸಿಕೊಳ್ಳುವ ಅಗತ್ಯವನ್ನು ಅವರು ಸೂಚಿಸಿದರು.

ಮಳೆಗಾಲಕ್ಕೆ ಮುಂಚಿತವಾಗಿ ಸಂಪೂರ್ಣ ಸಿದ್ಧತೆಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸಚಿವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಿದರು. ರಸ್ತೆ ಸುರಕ್ಷತೆ, ರಚನಾತ್ಮಕ ಬಾಳಿಕೆ ಮತ್ತು ಹೆದ್ದಾರಿ ಜಾಲದಾದ್ಯಂತ ನಿರಂತರ ಸಂಚಾರವನ್ನು ಕಾಪಾಡಿಕೊಳ್ಳಲು ತಡೆಗಟ್ಟುವ ಕ್ರಮಗಳು ಮತ್ತು ಬಲವಾದ ಪ್ರತಿಕ್ರಿಯೆ ವ್ಯವಸ್ಥೆಗಳ ಮಹತ್ವವನ್ನು ಅವರು ಎತ್ತಿ ತೋರಿಸಿದರು.

ಸಮಗ್ರ ಒಳಚರಂಡಿ ನಿರ್ವಹಣೆ, ಇಳಿಜಾರು ರಕ್ಷಣಾ ಕ್ರಮಗಳು ಮತ್ತು ಅಡಚಣೆಗಳನ್ನು ಕಡಿಮೆ ಮಾಡಲು ಮತ್ತು ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ತ್ವರಿತ–ಪ್ರತಿಕ್ರಿಯೆ ಕಾರ್ಯವಿಧಾನಗಳ ಸ್ಥಾಪನೆ ಸೇರಿದಂತೆ ಮಳೆಗಾಲಕ್ಕಾಗಿ ಮುಂಗಡ ಯೋಜನೆಯನ್ನು ಕೈಗೊಳ್ಳಲು ನಿತಿನ್ ಗಡ್ಕರಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುಜರಾತ್ ಸ್ಥಳೀಯ ಸಂಸ್ಥೆಗಳ ಚುನಾವಣೆ

# 736 ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಅವಿರೋಧ ಆಯ್ಕೆ

**ಅಹಮದಾಬಾದ್, ಏ. 27:** ಗುಜರಾತ್ ರಾಜ್ಯದಲ್ಲಿ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ ಬಳಿಕ, ರಾಜ್ಯದಾದ್ಯಂತ 15 ನಗರಪಾಲಿಕೆಗಳು, 84 ನಗರಸಭೆಗಳು, 34 ಜಿಲ್ಲಾ ಪಂಚಾಯಿತಿಗಳು ಹಾಗೂ 260 ತಾಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಯಿತು.

ವಿರೋಧ ಪಕ್ಷಗಳ ಅಭ್ಯರ್ಥಿಗಳ ಮೇಲೆ ಒತ್ತಡ ಹೇರುವ ಮೂಲಕ ಅವರು ನಾಮಪತ್ರಗಳನ್ನು ಹಿಂಪಡೆಯುವಂತೆ ಮಾಡಲಾಗಿದೆ ಎಂಬ ಗಂಭೀರ ಆರೋಪಗಳು ಈ ಚುನಾವಣೆಯ ಸಂದರ್ಭದಲ್ಲಿ ಕೇಳಿಬಂದಿದ್ದು, ಇದರ ಬೆನ್ನಿಗೇ, ಬಿಜೆಪಿಯ 736 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

2021ರಲ್ಲಿ ಈ ಸಂಖ್ಯೆ 220 ಹಾಗೂ 2015ರಲ್ಲಿ ಕೇವಲ 37 ಆಗಿತ್ತು. ಗುಜರಾತ್ ರಾಜ್ಯದಲ್ಲಿ ಬಿಜೆಪಿ ಆಡಳಿತಾರೂಢ ಪಕ್ಷವಾಗಿದ್ದು, 1995ರಿಂದಲೂ ರಾಜ್ಯದ ಅಧಿಕಾರ ಚುಕ್ಕಾಣಿ ಹಿಡಿದಿದೆ. ಏಪ್ರಿಲ್ 15ರಂದು ನಾಮಪತ್ರ ಸಲ್ಲಿಸಿದ ಕೆಲವೇ ಕ್ಷಣಗಳಲ್ಲಿ ವಡೋದರ, ಸೂರತ್, ಮೆಹ್ಸಾನ ಹಾಗೂ ಬನಸ್ಕಾಂತದಾದ್ಯಂತ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷಕ್ಕೆ ಸೇರಿದ ಸುಮಾರು 400ಕ್ಕೂ ಹೆಚ್ಚು ಅಭ್ಯರ್ಥಿಗಳು ಸ್ಪರ್ಧೆಯಿಂದ ಹಿಂದೆ ಸರಿದಿದ್ದರು.

ರವಿವಾರ ಮುಂಜಾನೆ 7 ಗಂಟೆಯಿಂದ ಪ್ರಾರಂಭಗೊಂಡ ಮತದಾನ ಪ್ರಕ್ರಿಯೆ, ಸಂಜೆ 6 ಗಂಟೆಗೆ ಮುಕ್ತಾಯಗೊಂಡಿತು. ಗುಜರಾತ್ ನಾದ್ಯಂತ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ 25,537 ಅಭ್ಯರ್ಥಿಗಳು ಸ್ಪರ್ಧಿಸಿದ್ದು, 4.18 ಕೋಟಿ ಅರ್ಹ ಮತದಾರರು ತಮ್ಮ ಮತ ಚಲಾಯಿಸಿದರು. ಈ ಬಾರಿ ನದಿಯಾಡ್, ಸುರೇಂದ್ರನಗರ್, ಆನಂದ್, ನವಸಾರಿ, ವಾಪಿ, ನೋರ್ಬಿ, ಗಾಂಧಿಧಾಮ್, ಪೋರಬಂದರ್ ಹಾಗೂ ಮೆಹ್ಸಾನ ಸೇರಿದಂತೆ ಒಟ್ಟು ಒಂಬತ್ತು ನೂತನ ನಗರ ಪಾಲಿಕೆಗಳನ್ನು ರಚಿಸಲಾಗಿದ್ದು, ಇದೇ ಪ್ರಥಮ ಬಾರಿಗೆ ಈ ನಗರ ಪಾಲಿಕೆಗಳಿಗೆ ಚುನಾವಣೆ ನಡೆಯಿತು. ಮಂಗಳವಾರ ಮತ ಎಣಿಕೆ ನಡೆಯಲಿದೆ.

# ಜನನಾಯಗನ್ ಕೊನೇ ಚಿತ್ರವಲ್ಲ ಟಿವಿಕೆ ಮುಖ್ಯಸ್ಥ ವಿಜಯ್ ಸ್ಪಷ್ಟನೆ



**ಚೆನ್ನೈ, ಏ.27:** ಕಾಲಿವುಡ್ ಸ್ಟಾರ್ ನಟ, ಟಿವಿಕೆ ಪಕ್ಷದ ನಾಯಕ ದಳಪತಿ ವಿಜಯ್ ಅಭಿನಯದ ಕೊನೆಯ ಬಹುನಿರೀಕ್ಷಿತ ಸಿನಿಮಾ 'ಜನನಾಯಗನ್' ರಿಲೀಸ್‌ಗೆ ಸದ್ಯ ಸೆನ್ಸಾರ್ ಮಂಡಳಿ ತಂದಿಟ್ಟ ಸಂಕಷ್ಟ ಇನ್ನೂ ಬಗೆಹರಿದಿಲ್ಲ. ಕೋರ್ಟ್ ಮೆಟ್ಟಿಲೇರಿದ ಚಿತ್ರತಂಡಕ್ಕೆ ಅಂದುಕೊಂಡ ದಿನದಂದೇ ಬಿಡುಗಡೆ ಭಾಗ್ಯ ನೀಡದಂತೆ ಮಾಡಿದ್ದು ಸಿಬಿಎಫ್‌ಸಿ ಜ.09ರಂದು ಚಿತ್ರಮಂದಿರಗಳಲ್ಲಿ ತೆರೆ ಕಾಣಬೇಕಿದ್ದ ವಿಜಯ್ ಚಿತ್ರ, ಇಂದಿಗೂ ಬಿಡುಗಡೆ ಆಗದಿರುವುದು ಹಲವು ಕಾಲಿವುಡ್ ಚಿತ್ರಗಳಿಗೆ ಭಾರಿ ಸಂಕಷ್ಟ ತಂದೊಡ್ಡಿದೆ.

ವಿಜಯ್ ಅವರ ಜನನಾಯಗನ್ ಚಿತ್ರದ ರಿಲೀಸ್ ಯಾವಾಗ ಎಂಬ ಸ್ಪಷ್ಟ ಮಾಹಿತಿ ತಮಿಳು ಚಿತ್ರರಂಗಕ್ಕೆ ಇನ್ನೂ ಲಭ್ಯವಾಗಿಲ್ಲ. ಇದು ರಿಲೀಸ್ಗೆ ಎದುರುನೋಡುತ್ತಿರುವ ನಟನ ಅಭಿಮಾನಿಗಳು ಮತ್ತು ಚಿತ್ರಪ್ರೇಮಿಗಳಲ್ಲಿ ದೊಡ್ಡ ಗೊಂದಲ ಸೃಷ್ಟಿಸಿದೆ. ಜನವರಿಯಿಂದ ಇಲ್ಲಿಯವರೆಗೂ ಬಿಡುಗಡೆ ಯಾವಾಗ ಎಂಬುದೇ ಇನ್ನೂ ತಿಳಿಯದ ನಿರ್ಮಾಪಕರಿಗೆ ಸೋಲು ಸಿಕ್ಕರೆ ಏನು ಗತಿ ಎಂಬ ತಲೆಬಿಸಿ ಕಾಡತೊಡಗಿದೆ. ಅದಕ್ಕೀಗ, ವಿಜಯ್ ಮತ್ತೊಂದು ಸಿನಿಮಾದಲ್ಲಿ ನಟಿಸುವ ಮೂಲಕ ನಿರ್ಮಾಪಕರಿಗೆ ಹಣವನ್ನು ಹಿಂತಿರುಗಿಸಲು ಮುಂದಾಗಿದ್ದಾರೆ ಎಂದು ಸಿನಿ ಮೂಲಗಳು ತಿಳಿಸಿವೆ.

ಮೊದಲೇ ರಿಲೀಸ್ ಸಂಕಷ್ಟ ಅನುಭವಿಸುತ್ತಿರುವ ಜನ ನಾಯಗನ್ಗೆ ಇತ್ತೀಚೆಗಷ್ಟೇ ಚಿತ್ರದ ಬಹುಮುಖ್ಯ ದೃಶ್ಯಗಳ ಸೋರಿಕೆ ದೊಡ್ಡ ಹೊಡೆತ ನೀಡಿದೆ. ಈ ಎಲ್ಲ ಬೆಳವಣಿಗೆಗಳು, ಸಿನಿಮಾದ ಗೆಲುವಿನ ಓಟಕ್ಕೆ ಬ್ರೇಕ್ ಹಾಕಲಿದೆ ಎಂಬ ಭಯ ಅದಾಗಲೇ ನಿರ್ಮಾಪಕರಲ್ಲಿ ಕಾಡಲಾರಂಭಿಸಿದೆ. ಇದೇ ಕಾರಣಕ್ಕೋ, ಏನೋ ಚಿತ್ರದ ನಿರ್ಮಾಪಕರಿಗೆ ಇನ್ನೊಂದು ಚಿತ್ರ ಮಾಡಿಕೊಡುವ ಭರವಸೆಯನ್ನು ವಿಜಯ್ ಕೊಟ್ಟಿದ್ದಾರೆ ಎಂದು ವರದಿಯಾಗಿದೆ.

ಈ ನಿರ್ಧಾರ ಜನ ನಾಯಗನ್ ಒಟ್ಟು ಗಳಿಕೆಯನ್ನು ನೋಡಿದ ಮೇಲೆ ಕೈಗೊಳ್ಳುವುದಾಗಿ ವಿಜಯ್ ಹೇಳಿದ್ದಾರೆ ಎನ್ನಲಾಗಿದೆ. ಚಿತ್ರದ ತಯಾರಕರು ಹೇಳಿರುವಂತೆ ಇದೇನಾದರೂ ನಿಜವಾದರೆ, ಅದರಲ್ಲೂ ನಟನ ಕೊನೆಯ ಚಿತ್ರ ಎನ್ನಲಾದ ಜನ ನಾಯಗನ್ ಬಾಕ್ಸ್ ಆಫೀಸ್‌ನಲ್ಲಿ ಸೋತರೆ, ಅದೇ ನಿರ್ಮಾಪಕರಿಗೆ ಇನ್ನೊಂದು ಸಿನಿಮಾ ಮಾಡಿಕೊಡುವುದು ವಿಜಯ್ ಅವರ ಉದ್ದೇಶವಾಗಿದೆ.

# ಜನಗಣತಿ ಒತ್ತಡ: ಬಿಸಿಲಾಘಾತಕ್ಕೆ ಇಬ್ಬರು ಶಿಕ್ಷಕರ ಸಾವು

ಭುವನೇಶ್ವರ, ಏ.27: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಜನಗಣತಿ ಕಾರ್ಯದಲ್ಲಿ ತೊಡಗಿದ್ದ ಇಬ್ಬರು ಶಾಲಾ ಶಿಕ್ಷಕರು ಬಿಸಿಲಿನ ಹೊಡೆತಕ್ಕೆ ಮೃತಪಟ್ಟಿರುವ ಘಟನೆ ಒಡಿಶಾದಲ್ಲಿ ನಡೆದಿದೆ. ಮಯೂರ್‌ಭಂಜ್ ಮತ್ತು ಸುಂದರ್‌ಗಢ ಜಿಲ್ಲೆಗಳಲ್ಲಿ ಈ ಸಾವುಗಳು ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಜಿಲ್ಲೆಗಳಲ್ಲಿ ತಾಪಮಾನವು 37 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿದೆ. ರಾಜ್ಯದಲ್ಲಿ ಒಟ್ಟು ಜನಗಣತಿ ಕರ್ತವ್ಯದಲ್ಲಿರುವ ಮೂವರು ಸಾವನ್ನಪ್ಪಿದ್ದಾರೆ. ಮಯೂರ್‌ಭಂಜ್‌ನಲ್ಲಿ, ಬೆಟ್ನೋಟಿ ಬ್ಲಾಕ್‌ನ ಬೈದ್ಯನಾಥ್ ಪ್ರೌಢಶಾಲೆಯ ಶಿಕ್ಷಕ ರಾಜ್‌ಕಪೂರ ಹೆಂಬ್ರಾಮ್ ಹೀಟ್ ಸ್ಟ್ರೋಕ್‌ಗೆ ಒಳಗಾಗಿ ಭಾನುವಾರ ಸಂಜೆ ಬರಿಪಾದದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ಮೃತಪಟ್ಟಿದ್ದಾರೆ.

ಸೋದರಳಿಯ ಲಕ್ಷ್ಮಿ ಕಾಂತ್ ಹೆಂಬ್ರಾಮ್ ಹೇಳುವಂತೆ ಜನಗಣತಿ ಕಾರ್ಯದಿಂದ ಹಿಂತಿರುಗುವಾಗ ಹೆಂಬ್ರಾಮ್ ಪ್ರಜ್ಞೆ ಕಳೆದುಕೊಂಡಿದ್ದಾರೆ.

ಮುಖ್ಯೋಪಾಧ್ಯಾಯಿನಿ ಮಮತಾ ದಾಸ್ ಕೂಡಾ ಇದೇ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ. ಅನಾರೋಗ್ಯವಿದ್ದರೂ ಜನಗಣತಿ ಕರ್ತವ್ಯಗಳನ್ನು ಮುಂದುವರಿಸಲು ಒತ್ತಡವಿದೆ ಎಂದು ಸಹೋದ್ಯೋಗಿಗಳಿಗೆ ಹೆಂಬ್ರಾಮ್ ಈ ಹಿಂದೆಯೇ ತಿಳಿಸಿದ್ದರು ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಸುಂದರ್‌ಗಢ ಜಿಲ್ಲೆಯಲ್ಲಿ ಗುರುಂಡಿಯಾ ಬ್ಲಾಕ್‌ನಲ್ಲಿರುವ ಜರಡಾ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಅನುರಾಗ್ ಎಕ್ಕಾ ಶನಿವಾರ ಜನಗಣತಿ ಕರ್ತವ್ಯದ ಸಮಯದಲ್ಲಿ ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಅದೇ ದಿನ ಮೃತಪಟ್ಟಿದ್ದಾರೆ. ಆರಂಭದಲ್ಲಿ ಅವರನ್ನು ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಗಿತ್ತು. ನಂತರ ಅವರ ಸ್ಥಿತಿ ಹದಗೆಟ್ಟ ಕಾರಣ ಜಿಲ್ಲಾ ಕೇಂದ್ರ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಈ ಹಿಂದೆ, ಏಪ್ರಿಲ್ 21ರಂದು ಸೋನೆಪುರ ಜಿಲ್ಲೆಯ ಗಣತಿದಾರರೊಬ್ಬರು ಜನಗಣತಿ ಕರ್ತವ್ಯದಿಂದ ಹಿಂದಿರುಗಿದ ನಂತರ ಹೃದಯಾಘಾತದಿಂದ ಸಾವನ್ನಪ್ಪಿದ್ದರು. ಅಧಿಕ ತಾಪಮಾನದ ನಡುವೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ರಾಜ್ಯ ಸರ್ಕಾರ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನ ಹೊರಡಿಸಿದೆ. ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ಮನೆ ಮನೆಗೆ ತೆರಳಿ ಜನಗಣತಿ ಮಾಡದಂತೆ ಎಂದು ಸೂಚಿಸಿದೆ. ಹಾಗೆಯೇ ಕರ್ತವ್ಯದ ಸಮಯದಲ್ಲಿ ನೀರು ಕುಡಿಯಲು ಮತ್ತು ಒಆರ್‌ಎಸ್ ಅನ್ನು ಸೇವಿಸಲು ಅಧಿಕಾರಿಗಳಿಗೆ ಸಲಹೆ ನೀಡಿದೆ.

# ಪಶ್ಚಿಮ ಬಂಗಾಳದಲ್ಲಿ ಇದು ಕೊನೆಯ ಪ್ರಚಾರ ರ್‍ಯಾಲಿ

## ಫಲಿತಾಂಶ ನಂತರ ಬಿಜೆಪಿ ಪ್ರಮಾಣ ವಚನ ಸಮಾರಂಭಕ್ಕೆ ಬರುತ್ತೇನೆ: ಪ್ರಧಾನಿ ನರೇಂದ್ರ ಮೋದಿ




**ಕೊಲ್ಕತ್ತಾ, ಏ.27:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಎರಡನೇ ಹಂತದ ಮತದಾನಕ್ಕೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಇಂದು ಬರ್ರಾಕ್‌ಪುರ್‌ನಲ್ಲಿ ಆಯೋಜಿಸಲಾದ ರ್‍ಯಾಲಿಯಲ್ಲಿ ಭಾಗವಹಿಸಿದರು. ಇದು ರಾಜ್ಯದಲ್ಲಿ ತಮ್ಮ ಕೊನೆಯ ರ್‍ಯಾಲಿ ಎಂದು ಘೋಷಿಸಿದ ಅವರು, ಮೇ 4ರಂದು ಫಲಿತಾಂಶ ಪ್ರಕಟವಾದ ನಂತರ ಬಿಜೆಪಿ ಪ್ರಮಾಣ ವಚನ ಸಮಾರಂಭಕ್ಕೆ ನಾನು ಖಂಡಿತವಾಗಿ ಹಿಂದಿರುಗುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರ್‍ಯಾಲಿಯಲ್ಲಿ ಮಾತನಾಡುತ್ತಾ ಪ್ರಧಾನಿ ಮೋದಿ ಅವರು, ಇದು ಈ ಚುನಾವಣೆಯಲ್ಲಿ ನನ್ನ ಕೊನೆಯ ರ್‍ಯಾಲಿ, ಮೇ 4ರ ಫಲಿತಾಂಶದ ನಂತರ ಬಿಜೆಪಿಯ ಪ್ರಮಾಣ ವಚನ ಸಮಾರಂಭಕ್ಕೆ ಖಂಡಿತವಾಗಿ ಬರುತ್ತೇನೆ ಎಂಬ ವಿಶ್ವಾಸದೊಂದಿಗೆ ಹಿಂದಿರುಗುತ್ತಿದ್ದೇನೆ. ಇದು ನನ್ನ ಉತ್ಸಾಹವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಹೆಲಿಪ್ಯಾಡ್‌ನಿಂದ ಇಲ್ಲಿ ಬರುವಾಗ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿ ಎರಡೂ ಕಡೆ ಭಾರೀ ಜನಸಮೂಹವಿತ್ತು. ಬೆಳಗ್ಗೆ ಅಷ್ಟು ಮಂದಿ ನನ್ನನ್ನು ಆಶೀರ್ವದಿಸಲು ಬಂದಿರುವುದು ಊಹಿಸಲೂ ಸಾಧ್ಯವಿಲ್ಲ ಎಂದು ಹೇಳಿದರು. ತೃಣಮೂಲ ಕಾಂಗ್ರೆಸ್ ಸರ್ಕಾರವನ್ನು ತೀವ್ರವಾಗಿ ಟೀಕಿಸಿದ ಪ್ರಧಾನಿ ಮೋದಿ, ರಾಜ್ಯದಲ್ಲಿ ಕೈಗಾರಿಕೆಗಳು ಕುಸಿದಿವೆ, ಅನೇಕ ಕಾರ್ಖಾನೆಗಳು ಮುಚ್ಚಿವೆ. ಟಿಎಮ್‌ಸಿ ಸರ್ಕಾರಕ್ಕೆ ಭವಿಷ್ಯದ ಅಭಿವೃದ್ಧಿಗೆ ಸ್ಪಷ್ಟ ರೋಡ್‌ಮ್ಯಾಪ್ ಇಲ್ಲ ಎಂದು ಟೀಕಿಸಿದ ಅವರು, ಡಬಲ್ ಎಂಜಿನ್ ಸರ್ಕಾರದ ಅಗತ್ಯವನ್ನು ಒತ್ತಿ ಹೇಳಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದಾಗಿ ಕೆಲಸ ಮಾಡಿದಾಗಲೇ ವೇಗವಾಗಿ ಅಭಿವೃದ್ಧಿ ಸಾಧ್ಯ ಎಂದು ವಿವರಿಸಿದರು. ಟಿಎಮ್‌ಸಿಯ ಸಿಂಡಿಕೇಟ್ ವ್ಯವಸ್ಥೆಯನ್ನು ಕೊನೆಗೊಳಿಸಬೇಕು ಎಂದು ಒತ್ತಾಯಿಸಿದ ಮೋದಿ, ಟಿಎಮ್‌ಸಿ ಭಯೋತ್ಪಾದನೆ ಮತ್ತು ಅಪಶಬ್ದ ರಾಜಕಾರಣದ ಮೇಲೆಯೇ ಅವಲಂಬಿತವಾಗಿದೆ ಎಂದು ಆರೋಪಿಸಿದರು. ಮಹಿಳೆಯರಿಗೆ ರಾಜ್ಯವು ಅಸುರಕ್ಷಿತವಾಗಿದೆ ಎಂದು ಹೇಳಿ, ಮಹಿಳಾ ಮತದಾರರನ್ನು ಟಿಎಮ್‌ಸಿ ಸರ್ಕಾರದ ಕಾರ್ಯಕ್ಷಮತೆಯ ಬಗ್ಗೆ ಯೋಚಿಸಿ ಮತ ಚಲಾಯಿಸುವಂತೆ ಕರೆ ನೀಡಿದರು.

ಕೊಲ್ಕತ್ತಾದ ಬಗ್ಗೆ ಮಾತನಾಡುತ್ತಾ, ಟಿಎಮ್‌ಸಿ ಲಂಡನ್‌ನಂತೆ ಅಭಿವೃದ್ಧಿಪಡಿಸುವುದಾಗಿ ಭರವಸೆ ನೀಡಿತ್ತು ಆದರೆ ಕಳೆದ 15 ವರ್ಷಗಳಲ್ಲಿ ನಗರದ ಗುರುತೇ ಬದಲಾಗಿದೆ ಎಂದು ಟೀಕಿಸಿದರು. ಅಕ್ರಮ ವಲಸಿಗರು ನಗರದಲ್ಲಿ ನೆಲೆಸುವಂತೆ ಅನುಮತಿ ನೀಡಲಾಗಿದೆ ಎಂದು ಆರೋಪಿಸಿ, ಕೊಲ್ಕತ್ತಾ ನಿವಾಸಿಗಳು ನಗರದ ಮೂಲ ಗುರುತನ್ನು ಕಾಪಾಡುವಂತೆ ಮನವಿ ಮಾಡಿದರು.

ಯುವಕರಿಗೆ ಐದು ಮುಖ್ಯ ಗ್ಯಾರಂಟಿಗಳನ್ನು ಘೋಷಿಸಿದ ಪ್ರಧಾನಿ ಮೋದಿ, ಸರ್ಕಾರಿ ನೇಮಕಾತಿಗಳನ್ನು ಸಮಯಕ್ಕೆ ಸರಿಯಾಗಿ ನಡೆಸುವುದು, ಖಾಲಿ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವುದು, ಕೌಶಲ್ಯ ಅಭಿವೃದ್ಧಿಗೆ ಹೊಂದಿಕೊಂಡ ಉದ್ಯೋಗ ಸೃಷ್ಟಿ, 7ನೇ ವೇತನ ಆಯೋಗದ ಪ್ರಯೋಜನಗಳು, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಹೆಚ್ಚಿಸುವ ಜಿ–ರಾಮ್ ಯೋಜನೆ ಜಾರಿ ಮಾಡಲಾಗುವುದು ಎಂದರು.

ರಾಜ್ಯದಲ್ಲಿ ಮಹಿಳೆಯರು ರಾತ್ರಿಯೂ ಸುರಕ್ಷಿತವಾಗಿ ಓಡಾಡುವಂತೆ, ಮಹಿಳೆಯರಿಗೆ ನ್ಯಾಯ ದೊರೆಯುವಂತೆ ಮತ್ತು ಉತ್ತಮ ಕಾನೂನು ಸುವ್ಯವಸ್ಥೆಗಾಗಿ ಕಮಲ ಚಿಹ್ನೆಗೆ ಮತ ನೀಡುವಂತೆ ಮೋದಿ ಮನವಿ ಮಾಡಿದರು.

# ಕಾನೂನು ವಿದ್ಯಾರ್ಥಿಗಳಿಗೆ ಭಾರತೀಯ ಮೌಲ್ಯ ಕಲಿಸಬೇಕು



ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅರವಿಂದ್ ಧರ್ಮಾಧಿಕಾರಿ

NLIU SBA

**ನವದೆಹಲಿ, ಏ.27:** ಭಾರತದಲ್ಲಿ ವಿಶೇಷವಾಗಿ ಪ್ರಮುಖ ರಾಷ್ಟ್ರೀಯ ಕಾನೂನು ವಿಶ್ವ ವಿದ್ಯಾಲಯಗಳಲ್ಲಿನ ಕಾನೂನು ಶಿಕ್ಷಣದ ಬಗ್ಗೆ ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸುಶ್ರುತ್ ಅರವಿಂದ್ ಧರ್ಮಾಧಿಕಾರಿ ಕಳವಳ ವ್ಯಕ್ತಪಡಿಸಿದ್ದಾರೆ.

ನ್ಯಾಷನಲ್ ಲಾ ಇನ್‌ಸ್ಟಿಟ್ಯೂಟ್ ಯೂನಿವರ್ಸಿಟಿ ಆಯೋಜಿಸಿದ್ದ ಎರಡನೇ ಕಾನೂನು ಸಮ್ಮೇಳನದಲ್ಲಿ ಮಾತನಾಡಿದ ಅವರು, ಎನ್‌ಎಲ್‌ಯು ಸಂಸ್ಥೆ ಪ್ರತಿಭಾನ್ವಿತರನ್ನು ರೂಪಿಸುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಆದರೆ, ಸಮಸ್ಯೆಯೇನೆಂದರೆ ಅವರು ವೇಗವಾಗಿ ಕೋಟ್ಯಾಧಿಪತಿಗಳಾಗುವ ಅಂತಿಮ ಗುರಿಯೊಂದಿಗೆ ಪದವಿ ಪಡೆಯುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ತಮ್ಮ ಸಾಂಸ್ಕೃತಿಕ ಮತ್ತು ತಾತ್ವಿಕ ವಿಚಾರಗಳೊಂದಿಗೆ ಸಂಪರ್ಕವನ್ನು ಕಳೆದುಕೊಂಡಿರುತ್ತಾರೆ ಎಂದು ಹೇಳಿದರು.

ಎಲ್ಲಾ ಕಾನೂನು ವಿದ್ಯಾರ್ಥಿಗಳಿಗೆ ಜೈನ ಧರ್ಮ, ಬೌದ್ಧ ಧರ್ಮ, ಮನುಸ್ಮೃತಿ ಮತ್ತು ಅರ್ಥಶಾಸ್ತ್ರದ ತತ್ವಗಳು ಮತ್ತು ಅವುಗಳ ಪರಸ್ಪರ ಸಂಬಂಧವನ್ನು ಕಲಿಸಬೇಕು. ಇದರಿಂದ ವಿದ್ಯಾರ್ಥಿಗಳ ಚಿಂತನೆಯಲ್ಲಿ ಸ್ಥಿರತೆ ಮತ್ತು ಪ್ರಬುದ್ಧತೆ ಬರುತ್ತದೆ. ನಮ್ಮ ಕರ್ತವ್ಯಗಳು ಮತ್ತು ಕರ್ಮದ ಬಗ್ಗೆ ಜಾಗೃತರಾಗಿ ಭಾರತದ ಶ್ರೇಷ್ಠ ಸಂಸ್ಕೃತಿಯ ಬಗ್ಗೆ ಅವರಿಗೆ ಜ್ಞಾನ ಹೆಚ್ಚಳವಾಗುತ್ತದೆ ಎಂದು ಹೇಳಿದರು.

ಭಾರತದ ಇತಿಹಾಸ ಮತ್ತು ಪ್ರಾಚೀನ ಗ್ರಂಥಗಳಲ್ಲಿ ಇರುವ ಮೌಲ್ಯಗಳು ಅನೇಕ ರೀತಿಯಲ್ಲಿ ಸಂವಿಧಾನ ದಲ್ಲಿಯೂ ಪ್ರತಿಬಿಂಬಿತ ವಾಗಿದೆ. ಇಂತಹ ವಿಷಯಗಳನ್ನು ಕಾನೂನು ಪಠ್ಯಕ್ರಮದಲ್ಲಿ ಸೇರಿಸಬೇಕು, ವಿಶೇಷವಾಗಿ ಕಾನೂನು ವಿದ್ಯಾರ್ಥಿಗಳಿಗೆ ಬೋಧಿಸಬೇಕು ಎಂದು ಹೇಳಿದರು. ಕಾನೂನು ವಿದ್ಯಾರ್ಥಿಗಳು ಸಮಾಜದ ಮೂಲ ಮೌಲ್ಯ ವ್ಯವಸ್ಥೆಗಳೊಂದಿಗೆ ಸಂಪರ್ಕ ಹೊಂದಿರಬೇಕು ಮತ್ತು ಅವರು ಕಾನೂನನ್ನು ಆರಿಸಿಕೊಂಡ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ ಎಂದು ಹೇಳಿದರು. ನ್ಯಾಯಾಂಗ ವ್ಯವಸ್ಥೆಯ ಭಾರತೀಯೀಕರಣವು ಕೇವಲ ಕಾನೂನು ಸುಧಾರಣೆ ಮಾತ್ರವಲ್ಲ. ಭಾರತದ ಕಾನೂನು ಗುರುತನ್ನು ಮರುಸ್ಥಾಪಿಸುವ ಮಹತ್ವದ ಹೆಜ್ಜೆಯಾಗಿದೆ. ಇದರಿಂದ ನ್ಯಾಯ ಹೆಚ್ಚು ಸುಲಭವಾಗಿ ದೊರೆಯುತ್ತದೆ. ಸಾಂಸ್ಕೃತಿಕವಾಗಿಯೂ ಪ್ರಸ್ತುತವಾಗಿಸುತ್ತದೆ ಮತ್ತು ಭಾರತೀಯ ಸಮಾಜದ ಅಗತ್ಯಗಳನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

# ಶಾಸಕರ ಖರೀದಿ ತಡೆಯಲು ಟಿಎಂಸಿಗೆ ಬಹುಮತ ನೀಡಿ: ಮಮತಾ ಮನವಿ



**ಕೋಲ್ಕತ್ತಾ, ಏ.27:** ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ನಡೆದಂತೆ ಪಶ್ಚಿಮ ಬಂಗಾಳದಲ್ಲೂ ಶಾಸಕರ ಖರೀದಿ ನಡೆಸಲು ಬಿಜೆಪಿ ಹೊಂಚು ಹಾಕುತ್ತಿದ್ದು, ಇದನ್ನು ತಡೆಯಲು ಮುಂಬರುವ ಚುನಾವಣೆಯಲ್ಲಿ ಟಿಎಂಸಿಗೆ ಮೂರನೇ ಎರಡರಷ್ಟು ನಿಚ್ಚಳ ಬಹುಮತ ನೀಡುವಂತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತದಾರರಲ್ಲಿ ಮನವಿ ಮಾಡಿದ್ದಾರೆ.

ಚುನಾವಣಾ ಪ್ರಚಾರ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದ ಅವರು, ಕೇವಲ ಸರಳ ಬಹುಮತ ಬಂದರೆ ಸಾಲದು. ಅಲ್ಪ ಬಹುಮತ ಪಡೆದು ಸರ್ಕಾರ ರಚಿಸಿದರೆ, ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ತನ್ನ ಹಣಬಲ ಹಾಗೂ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಶಾಸಕರನ್ನು ಖರೀದಿಸುವ ಯತ್ನ ಮಾಡುತ್ತದೆ. ಹೀಗಾಗಿ ಬಿಜೆಪಿಯ ಈ ಪ್ರಜಾಪ್ರಭುತ್ವ ವಿರೋಧಿ ಕೃತ್ಯಕ್ಕೆ ಶಾಶ್ವತವಾಗಿ ಕಡಿವಾಣ ಹಾಕಲು ಪಶ್ಚಿಮ ಬಂಗಾಳದ 294 ವಿಧಾನಸಭಾ ಕ್ಷೇತ್ರಗಳ ಪೈಕಿ ಟಿಎಂಸಿಗೆ ಮೂರನೇ ಎರಡರಷ್ಟು ಸ್ಥಾನಗಳನ್ನು ನೀಡಿ ಆಶೀರ್ವದಿಸಬೇಕು ಎಂದು ಕರೆ ನೀಡಿದ್ದಾರೆ.

ಬಿಜೆಪಿಯ ಶಾಸಕರ ಖರೀದಿ ಕಾರ್ಯಾಚರಣೆಯನ್ನು ಕಟುವಾಗಿ ಟೀಕಿಸಿದ ಮಮತಾ ಬ್ಯಾನರ್ಜಿ, ಮಧ್ಯಪ್ರದೇಶದಲ್ಲಿ ಕಮಲ್‌ನಾಥ್ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಹಾಗೂ ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಮಹಾವಿಕಾಸ್ ಅಘಾಡಿ (ಎಂವಿಎ) ಸರ್ಕಾರವನ್ನು ಬಿಜೆಪಿ ಯಾವ ರೀತಿ ವಾಮಮಾರ್ಗದ ಮೂಲಕ ಉರುಳಿಸಿತು ಎಂಬುದು ಇಡೀ ದೇಶಕ್ಕೆ ತಿಳಿದಿದೆ. ಜನಾದೇಶವನ್ನು ಗೌರವಿಸದ ಬಿಜೆಪಿ, ವಿರೋಧ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಕೋಟಿಗಟ್ಟಲೆ ಹಣ ಸುರಿದು ಶಾಸಕರನ್ನು ಸೆಳೆದು ಸರ್ಕಾರಗಳನ್ನು ಅಸ್ಥಿರಗೊಳಿಸುವ ಕುತಂತ್ರದಲ್ಲಿ ಸದಾ ನಿರತವಾಗಿರುತ್ತದೆ. ಬಂಗಾಳದಲ್ಲಿ ಆ ಪಕ್ಷಕ್ಕೆ ಈ ಅವಕಾಶವನ್ನು ಯಾವುದೇ ಕಾರಣಕ್ಕೂ ನೀಡಬಾರದು? ಎಂದು ತಿಳಿಸಿದರು.

ಒಂದು ವೇಳೆ ನಮಗೆ ಸ್ಪಷ್ಟವಾದ ಮೂರನೇ ಎರಡರಷ್ಟು ಬಹುಮತ ಸಿಕ್ಕರೆ, ಶಾಸಕರನ್ನು ಒಡೆಯುವುದು ಬಿಜೆಪಿಗೆ ಅಸಾಧ್ಯವಾಗುತ್ತದೆ. ಬಿಜೆಪಿಯು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಯ ಮೂಲ ತತ್ವಗಳನ್ನೇ ಗಾಳಿಗೆ ತೂರಿದೆ. ಕುದುರೆ ವ್ಯಾಪಾರಕ್ಕಿಳಿಯುವ ಅವರ ಅಸಂವಿಧಾನಿಕ ತಂತ್ರಕ್ಕೆ ಪಶ್ಚಿಮ ಬಂಗಾಳದ ಪ್ರಜ್ಞಾವಂತ ಮತದಾರರು ಮತಯಂತ್ರದ ಮೂಲಕವೇ ತಕ್ಕ ಉತ್ತರ ನೀಡಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿನ ಅಭಿವೃದ್ಧಿ ಕಾರ್ಯಗಳು ಮತ್ತು ಮಹಿಳಾ ಪರ, ಜನಪರ ಯೋಜನೆಗಳನ್ನು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಸಲು ಸುಭದ್ರ ಸರ್ಕಾರ ಅತ್ಯಗತ್ಯ ಎಂದು ಪ್ರತಿಪಾದಿಸಿದ ಅವರು, ಬಿಜೆಪಿಯ ವಾಮಮಾರ್ಗದ ರಾಜಕಾರಣವನ್ನು ಬೇರುಸಹಿತ ಕಿತ್ತೊಗೆಯಲು ಜನತೆ ಬೆಂಬಲಿಸಬೇಕು ಎಂದು ಕೋರಿದ್ದಾರೆ.



ರಾಜ್ಯದ ಮಾನ್ಯತೆ ಪಡೆದು 50 ವರ್ಷ ಪೂರೈಸಿರುವ ಸಂದರ್ಭದಲ್ಲಿ ಸಿಕ್ಕಿಂನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸೋಮವಾರ ಗ್ಯಾಂಗ್‌ಟಕ್ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ರೋಡ್‌ಶೋನಲ್ಲಿ ಭಾಗವಹಿಸಿದರು. ಸ್ಥಳೀಯ ಜನತೆಗೆ ಪ್ರಧಾನಿಗೆ ಅಭೂತಪೂರ್ವ ಸ್ವಾಗತ ಕೋರಿದರು.

# ಹೊಸ ಮದ್ಯನೀತಿ ಪ್ರಕರಣ: ನ್ಯಾಯ ಸಿಗುವ ಭರವಸೆಯಿಲ್ಲ



**ನ್ಯಾ. ಸ್ವರ್ಣಕಾಂತ ಅವರ ಪೀಠದ ಮುಂದೆ ಹಾಜರಾಗಲ್ಲ: ನ್ಯಾಯಾಧೀಶರಿಗೆ ಕೇಜ್ರಿವಾಲ್ ಪತ್ರ**

**ನವದೆಹಲಿ, ಏ.27:** ದೆಹಲಿ ಹೊಸ ಮದ್ಯನೀತಿಯಲ್ಲಿನ ಅಕ್ರಮ ಪ್ರಕರಣದ ವಿಚಾರಣೆ ನಡೆಸುತ್ತಿರುವ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸ್ವರ್ಣಕಾಂತಾ ಶರ್ಮಾ ಅವರ ಪೀಠದ ಮುಂದೆ ಹಾಜರಾಗುವುದಿಲ್ಲ ಎಂದು ಆಮ್ ಆದ್ಮಿ ಪಾರ್ಟಿ ರಾಷ್ಟ್ರೀಯ ಸಂಯೋಜಕ ಮತ್ತು ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ತಿಳಿಸಿದ್ದಾರೆ. ಈ ಬಗ್ಗೆ ಪತ್ರ ಬರೆದಿರುವ ಕೇಜ್ರಿವಾಲ್, ನ್ಯಾಯಮೂರ್ತಿ ಸ್ವರ್ಣಕಾಂತ ಅವರಿಂದ ನ್ಯಾಯ ಸಿಗುವ ಭರವಸೆ ಭಗ್ನಗೊಂಡಿದೆ. ಆದ್ದರಿಂದ, ನಾನು ಗಾಂಧೀಜಿಯವರ ಸತ್ಯಾಗ್ರಹದ ಮಾರ್ಗವನ್ನು ಅನುಸರಿಸಲು ನಿರ್ಧರಿಸಿದ್ದೇನೆ. ನನ್ನ ಆತ್ಮಸಾಕ್ಷಿಯ ಧ್ವನಿಯ ಆಧಾರದ ಮೇಲೆ ನಾನು ಈ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ. ನ್ಯಾಯಮೂರ್ತಿ ಸ್ವರ್ಣಕಾಂತ ಅವರ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಹಕ್ಕನ್ನು ನಾನು ಉಳಿಸಿಕೊಳ್ಳುತ್ತೇನೆ ಎಂದು ಅರವಿಂದ್ ಕೇಜ್ರಿವಾಲ್ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕರಣದ ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶರಾದ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರು ಪಕ್ಷಪಾತ ಹೊಂದಿದ್ದಾರೆಂದು ಆರೋಪಿಸಿದ ಕೇಜ್ರಿವಾಲ್, ಪ್ರಕರಣವನ್ನು ಬೇರೆ ಪೀಠಕ್ಕೆ ವರ್ಗಾಯಿಸಬೇಕೆಂದು ಕೋರಿದರು. ಆದಾಗ್ಯೂ, ಹೈಕೋರ್ಟ್ ಅವರ ಮನವಿಯನ್ನು ಸ್ವೀಕರಿಸಲಿಲ್ಲ. ವಿಚಾರಣೆಯ ಸಮಯದಲ್ಲಿ, ಮುಖ್ಯ ನ್ಯಾಯಮೂರ್ತಿ ಈ ವಿಷಯದ ಬಗ್ಗೆ ಪ್ರತಿಕ್ರಿಯಿಸಿ ಅರ್ಜಿಯನ್ನು ವಜಾಗೊಳಿಸಿದರು. ಅರ್ಜಿಯನ್ನು ವಜಾಗೊಳಿಸಿದ ನಂತರ, ಕೇಜ್ರಿವಾಲ್ ಈಗ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರ ನ್ಯಾಯಾಲಯದ ಮುಂದೆ ಹಾಜರಾಗುವುದಿಲ್ಲ ಎಂದು ಘೋಷಿಸಿದ್ದಾರೆ.

ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ ಜೈಲಿಗೆ ಕಳುಹಿಸಲಾಯಿತು. ಚುನಾಯಿತ ಸರ್ಕಾರವನ್ನು ತಪ್ಪಾಗಿ ಉರುಳಿಸಲಾಯಿತು. ನಮ್ಮನ್ನು ಜೈಲಿನಲ್ಲಿ ಇರಿಸಲಾಯಿತು, ಆದರೆ ಅಂತಿಮವಾಗಿ ಸತ್ಯ ಮೇಲುಗೈ ಸಾಧಿಸಿತು. ನ್ಯಾಯಾಲಯವು ನನ್ನನ್ನು ಸಂಪೂರ್ಣವಾಗಿ ನಿರಪರಾಧಿ ಎಂದು ಘೋಷಿಸಿತು. ನ್ಯಾಯಾಲಯವು ಸಿಬಿಐ ತನಿಖೆಯನ್ನು ಪ್ರಶ್ನಿಸಿ ತನಿಖಾ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ಆದೇಶಿಸಿತು. ಸಿಬಿಐ ತಕ್ಷಣವೇ ಈ ನಿರ್ಧಾರವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತು. ಪ್ರಕರಣವನ್ನು ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರ ಮುಂದೆ ವಿಚಾರಣೆ ನಡೆಸಲಾಯಿತು.

**ಆಗ ನನ್ನ ಮನಸ್ಸಿನಲ್ಲಿ ಪ್ರಶ್ನೆ ಉದ್ಭವಿಸಿತು:** ನನಗೆ ಅವರ ಮುಂದೆ ನ್ಯಾಯ ಸಿಗುತ್ತದೆಯೇ ಸುಳ್ಳು ಆರೋಪಗಳ ಮೇಲೆ ನನ್ನನ್ನು ಜೈಲಿಗೆ ಹಾಕಿದ ಆರ್‌ಎಸ್‌ಎಸ್–ಸೈದ್ಧಾಂತಿಕ ಸರ್ಕಾರದೊಂದಿಗೆ ಸಂಬಂಧ ಹೊಂದಿರುವ ಅಖಿಲ ಭಾರತ ವಕೀಲರ ಮಂಡಳಿಯ ವೇದಿಕೆಗಳಿಗೆ ಅವರು ಪದೇ ಪದೇ ಹಾಜರಾಗಿದ್ದಾರೆ ಎಂದು ನ್ಯಾಯಾಧೀಶರೇ ಒಪ್ಪಿಕೊಂಡಿದ್ದಾರೆ. ನಾನು ಮತ್ತು ಆಮ್ ಆದ್ಮಿ ಪಕ್ಷ ಆ ಸಿದ್ಧಾಂತದ ಕಟ್ಟಾ ವಿರೋಧಿಗಳು. ಅಂತಹ ಪರಿಸ್ಥಿತಿಯಲ್ಲಿ, ಅವರ ಮುಂದೆ ನ್ಯಾಯ ಸಿಗಬಹುದೇ ಎಂದು ಪತ್ರದಲ್ಲಿ ಬರೆದಿದ್ದಾರೆ. ಕೇಜ್ರಿವಾಲ್ ಪತ್ರಕ್ಕೆ ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅರವಿಂದ್ ಕೇಜ್ರಿವಾಲ್ ಇಂದು ನ್ಯಾಯಾಧೀಶರಿಗೆ ಬರೆಯಲು ಪ್ರಯತ್ನಿಸಿದ ಪತ್ರವನ್ನು ನಾವು ಖಂಡಿಸುತ್ತೇವೆ. ಅವರ ಟೀಕೆಗಳು ಪ್ರಜಾಪ್ರಭುತ್ವ ವಿರೋಧಿಯಾಗಿವೆ ಎಂದಿದ್ದಾರೆ.

# ಬೆಂಗಳೂರಿಗೆ ಮಕ್ಕಳ ಕಳ್ಳಸಾಗಣೆ ಮಾಡುತ್ತಿದ್ದ ವ್ಯಕ್ತಿ ಬಂಧನ

**ಕೊಲ್ಕತ್ತ/ಬೆಂಗಳೂರು, ಏ.27:** ಪಶ್ಚಿಮ ಬಂಗಾಳದಿಂದ ಬೆಂಗಳೂರಿಗೆ ಮಕ್ಕಳನ್ನು ಕಳ್ಳಸಾಗಣೆ ಮಾಡುತ್ತಿದ್ದ 27 ವರ್ಷದ ವ್ಯಕ್ತಿಯನ್ನು ಶನಿವಾರ ಸಂಜೆ ಹಟಿಯಾ ರೈಲ್ವೆ ನಿಲ್ದಾಣದಲ್ಲಿ ಬಂಧಿಸಲಾಗಿದೆ. ಮಾನವ ಕಳ್ಳಸಾಗಣೆ ಮತ್ತು ಬಾಲ ಕಾರ್ಮಿಕ ಪದ್ಧತಿ ವಿರೋಧಿ ವಿಶೇಷ ಕಾರ್ಯಾಚರಣೆಯ ವೇಳೆ ರೈಲ್ವೆ ಪೊಲೀಸ್ ಪಡೆ ಅರೆಸ್ಟ್ ಮಾಡಿದೆ.

ವಿಶೇಷ ತಪಾಸಣೆ ಕೈಗೊಂಡಿದ್ದ ಸಮಯದಲ್ಲಿ 14ರಿಂದ 15 ವರ್ಷದೊಳಗಿನ ಮೂವರು ಬಾಲಕರು ಶಂಕಾಸ್ಪದವಾಗಿ ಕಂಡುಬಂದಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಆರ್‌ಪಿಎಫ್ ಅಧಿಕಾರಿಗಳು ಮಕ್ಕಳನ್ನು ರಕ್ಷಿಸಿ ವಿಚಾರಣೆ ನಡೆಸಿದಾಗ ಮಾನವ ಕಳ್ಳಸಾಗಣೆ ದಂಧೆ ಬೆಳಕಿಗೆ ಬಂದಿದೆ. ರಕ್ಷಿಸಲಾದ ಬಾಲಕರು ಪಶ್ಚಿಮ ಬಂಗಾಳದ ಪುರುಲಿಯಾ ಜಿಲ್ಲೆಯ ಝಾಲ್ದಾ ಮೂಲದವರೆಂದು ಗುರುತಿಸಲಾಗಿದೆ. ಬಂಧಿತ ಆರೋಪಿಯು ವಿಚಾರಣೆಯ ವೇಳೆ ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ. ಈತ ಬಡ ಮಕ್ಕಳನ್ನು ಆಮಿಷವೊಡ್ಡಿ ಬೆಂಗಳೂರಿನ ವಿವಿಧ ನಿರ್ಮಾಣ ಸ್ಥಳಗಳಿಗೆ ಬಾಲಕಾರ್ಮಿಕರಾಗಿ ಕಳುಹಿಸುತ್ತಿದ್ದನು. ಪ್ರತಿ ಮಗುವಿನ ಮೇಲೆ ಈತನಿಗೆ 300 ರಿಂದ 400 ರೂಪಾಯಿ ಕಮಿಷನ್ ಸಿಗುತ್ತಿತ್ತು ಎಂಬ ಆಘಾತಕಾರಿ ಮಾಹಿತಿ ಹೊರಬಂದಿದೆ.

ಈ ದಂಧೆಯಲ್ಲಿ ಮತ್ತೊಬ್ಬ ವ್ಯಕ್ತಿಯೂ ಭಾಗಿಯಾಗಿದ್ದು, ಅವರಿಬ್ಬರು ಸೇರಿ ವಿವಿಧ ರಾಜ್ಯಗಳಿಂದ ಬಡ ಮಕ್ಕಳನ್ನು ಕಳ್ಳಸಾಗಣೆ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಸ್ತುತ ರಕ್ಷಿಸಲಾದ ಮಕ್ಕಳನ್ನು ಸುರಕ್ಷಿತವಾಗಿ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಲಾಗಿದ್ದು, ಪ್ರಕರಣದ ತನಿಖೆ ಮುಂದುವರಿದಿದೆ.

# ಸಫಾರಿಪ್ರಿಯರಿಗೆ ಸೆಲ್ಫಿ ನಿಷೇಧ, ಮೊಬೈಲ್ ಏರೋಪ್ಲೇನ್ ಮೋಡ್‌ನಲ್ಲಿ ಇರಬೇಕು

## ವನ್ಯಜೀವಿ, ಪ್ರವಾಸಿಗರ ಸುರಕ್ಷತೆಗಾಗಿಅರಣ್ಯ ಇಲಾಖೆ ಮಹತ್ವದ ನಿರ್ಧಾರ

**ಬೆಂಗಳೂರು, ಏ.27:** ವನ್ಯಜೀವಿ ಸಂರಕ್ಷಣೆ ಮತ್ತು ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಕರ್ನಾಟಕ ಅರಣ್ಯ ಇಲಾಖೆ ಮಹತ್ವದ ನಿರ್ಧಾರ ಕೈಗೊಂಡಿದ್ದು, ಸಫಾರಿ ವೇಳೆ ಮೊಬೈಲ್ ಬಳಕೆಗೆ ಕಟ್ಟುನಿಟ್ಟಿನ ನಿಯಂತ್ರಣ ಹೇರಿದೆ. ಸಫಾರಿಗೆ ಹೋಗುವ ಎಲ್ಲರೂ ಮೊಬೈಲ್‌ಗಳನ್ನು ಏರೋಪ್ಲೇನ್ ಮೋಡ್‌ನಲ್ಲಿ ಇಡಬೇಕು ಹಾಗೂ ಸೆಲ್ಫಿ ತೆಗೆದುಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ಕ್ರಮವು ಸುಪ್ರೀಂಕೋರ್ಟ್ ನೀಡಿದ ಇತ್ತೀಚಿನ ನಿರ್ದೇಶನದ ನಂತರ ಕೈಗೊಳ್ಳಲಾಗಿದೆ. ಸಫಾರಿ ಪ್ರದೇಶಗಳಲ್ಲಿ ಮೊಬೈಲ್ ಬಳಕೆಯಿಂದ ವನ್ಯಜೀವಿಗಳಿಗೆ ಅಡ್ಡಿಯುಂಟು ಮಾಡುವುದು ಹಾಗೂ ಪ್ರವಾಸಿಗರ ನಡುವೆ ಅನವಶ್ಯಕ ಗದ್ದಲ ಉಂಟಾಗುವುದನ್ನು ತಡೆಯುವುದು ಈ ನಿಯಮದ ಉದ್ದೇಶವಾಗಿದೆ.

ರಣಥಂಬೋರ್, ಸರಿಸ್ಕಾ ಮತ್ತು ಇತರ ಹುಲಿ ಮೀಸಲು ಪ್ರದೇಶಗಳ ಸಫಾರಿ ವಲಯಗಳಲ್ಲಿ ಈಗಾಗಲೇ ನಿಯಮವನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿದ್ದರೂ, ಕರ್ನಾಟಕ ಇನ್ನೂ ಅದನ್ನು ಸಂಪೂರ್ಣವಾಗಿ ಅನುಸರಿಸಿರಲಿಲ್ಲ. ಇದೀಗ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆ ಮುಂದಾಗಿದೆ.

ಕರ್ನಾಟಕದಲ್ಲಿ ಸಫಾರಿಗಳು ನಿಯಂತ್ರಿತವಾಗಿ ನಡೆಯುತ್ತಿರುವುದರಿಂದ ಇತರ ರಾಜ್ಯಗಳಂತೆ ಸಂಪೂರ್ಣ ಮೊಬೈಲ್ ನಿಷೇಧ ಅಗತ್ಯವಿಲ್ಲ. ಆದರೆ, ಪ್ರಾಣಿಗಳಿರುವ ಸ್ಥಳದ ಮಾಹಿತಿ ಹಂಚಿಕೊಳ್ಳುವುದು, ನೇರ ಸಂಪರ್ಕ ನಡೆಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಪ್ರಾಣಿಗಳ ಸ್ಥಳ ಮಾಹಿತಿ ಹೊರಬಂದರೆ ಒಂದೇ ಸ್ಥಳದಲ್ಲಿ ಹೆಚ್ಚಿನ ವಾಹನಗಳು ಸೇರುವ ಸಾಧ್ಯತೆ ಇದೆ. ಇದರಿಂದ ವನ್ಯಜೀವಿಗಳಿಗೆ ಅಡ್ಡಿಯುಂಟು ಮಾಡಿದಂತಾಗುತ್ತದೆ.



### ಅರಣ್ಯಗಳನ್ನು ನಿಶ್ಯಬ್ಧ ವಲಯಗಳೆಂದು ಘೋಷಿಸಬೇಕು

ಸಫಾರಿ ವಾಹನ ಚಾಲಕರು ಹಾಗೂ ಮಾರ್ಗದರ್ಶಕರಿಗೂ ಈ ನಿಯಮ ಅನ್ವಯವಾಗಬೇಕು. ವೈರ್‌ಲೆಸ್ ರೇಡಿಯೋಗಳ ಬಳಕೆಗೆ ವಿಸ್ತರಿಸಬೇಕು.

ಈ ಕ್ರಮಗಳು ಹುಲಿ ಕಾಣಿಸಿಕೊಂಡ ಸ್ಥಳಗಳಲ್ಲಿ ಸಫಾರಿ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರದಂತೆ ನೋಡಿಕೊಳ್ಳುತ್ತವೆ. ಸಂರಕ್ಷಿತ ಪ್ರದೇಶಗಳು ಮತ್ತು ಹುಲಿ ಅಭಯಾರಣ್ಯಗಳಲ್ಲಿ 4ಜಿ ಟವರ್‌ಗಳ ನಿರ್ಮಾಣವು ಹೆಚ್ಚುತ್ತಿದ್ದು, ಆತಂಕವನ್ನು ಎದುರು ಮಾಡುತ್ತಿವೆ. ಇದು ವನ್ಯಜೀವಿ ಸಂರಕ್ಷಣಾ ಗುರಿಗಳಿಗೆ ಹೊಂದಿಕೆಯಾಗುವುದಿಲ್ಲ. ಅಂತಹ ಪ್ರಸ್ತಾಪಗಳನ್ನು ತಿರಸ್ಕರಿಸಬೇಕು ಎನ್ನುತ್ತಾರೆ ಅರಣ್ಯ ಇಲಾಖೆಯ ಅಧಿಕಾರಿಗಳು. ಫೆಬ್ರವರಿ 17, ರೊಳಗೆ ಪರಿಸರ–ಸೂಕ್ಷ್ಮ ವಲಯಗಳನ್ನು ಒಳಗೊಂಡಂತೆ ಹುಲಿ ಅಭಯಾರಣ್ಯಗಳ ಸಂಪೂರ್ಣ ಪ್ರದೇಶವನ್ನು ಶಬ್ದ ಮಾಲಿನ್ಯ (ನಿಯಂತ್ರಣ) ನಿಯಮಗಳು, 2000 ರ ಅಡಿಯಲ್ಲಿ ಸೈಲೆನ್ಸ್ ಝೋನ್ ಎಂದು ಘೋಷಿಸಬೇಕೆಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಎಲ್ಲಾ ಅರಣ್ಯಗಳನ್ನು ಸೈಲೆನ್ಸ್ ಜೋನ್‌ಗಳೆಂದು ಘೋಷಿಸುವುದನ್ನು ಪರಿಗಣಿಸುವಂತೆ ನ್ಯಾಯಾಲಯವು ಸರ್ಕಾರಗಳಿಗೆ ಸೂಚಿಸಿವೆ. ಆದ್ದರಿಂದ, ದೇಶಾದ್ಯಂತ ಅನ್ವಯವಾಗುವ ನವೆಂಬರ್ 2025ರ ತೀರ್ಪಿನಲ್ಲಿರುವ ನಿರ್ದೇಶನಗಳನ್ನು ರಾಜ್ಯ ಸರ್ಕಾರ ಪಾಲಿಸಬೇಕು ಎಂಬ ಅಭಿಪ್ರಾಯ ಇಲಾಖೆಯಲ್ಲಿ ವ್ಯಕ್ತವಾಗಿದೆ.

ಸುಪ್ರೀಂ ಕೋರ್ಟ್ ನಿರ್ದೇಶನವನ್ನು 2026ರ ಮೇ 17ರೊಳಗೆ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

# ರಾಜ್ಯದ ಎಂಟು ಜಿಲ್ಲೆಗಳ ಕ್ಷೇತ್ರ ಪುನರ್ ವಿಂಗಡಣೆ ಪೂರ್ಣ: ಅಧಿಸೂಚನೆ ಪ್ರಕಟ

**ಬೆಂಗಳೂರು, ಏ.27:** ಎಂಟು ಪ್ರಮುಖ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಪುನರ್ವಿಂಗಡಣೆ ಪ್ರಕ್ರಿಯೆ ಪೂರ್ಣಗೊಳಿಸಿ ಗಡಿ ಗುರುತಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಜೊತೆಗೆ ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸಿ ಹೊಸ ಅಧಿಸೂಚನೆಯನ್ನು ಹೊರಡಿಸಿದೆ.

ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ಹಾಸನ, ಉತ್ತರ ಕನ್ನಡ, ಯಾದಗಿರಿ, ಬೀದರ್, ಕೊಪ್ಪಳ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿ ಗುರುತಿಸಿ ಮತ್ತು ಚುನಾಯಿತ ಸದಸ್ಯರ ಸಂಖ್ಯೆ ನಿಗದಿಪಡಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

**ಮರು ವಿಂಗಡಣೆಗೆ ಕಾರಣಗಳೇನು?**

ನಗರಾಭಿವೃದ್ಧಿ ಇಲಾಖೆಯು ಈ ಹಿಂದೆ ಗ್ರಾಮೀಣ ಭಾಗವಾಗಿದ್ದ ಕೆಲವು ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತಿಸಿದೆ. ಕಂದಾಯ ಇಲಾಖೆಯು ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳ ಭೌಗೋಳಿಕ ಗಡಿಗಳನ್ನು ಪುನರ್ ರಚಿಸಿರುವುದರಿಂದ ಜಿಲ್ಲಾ ಪಂಚಾಯಿತಿಗಳ ಗಡಿಗಳನ್ನು ಮರು ಪರಿಶೀಲಿಸುವುದು ಅನಿವಾರ್ಯವಾಗಿತ್ತು.

ಕ್ಷೇತ್ರಗಳ ಹೆಸರು ಮತ್ತು ವ್ಯಾಪ್ತಿಯಲ್ಲಿ ಗೊಂದಲವಿಲ್ಲದಂತೆ ಹೊಸ ಕ್ರಮಸಂಖ್ಯೆಗಳನ್ನು ನೀಡಲು ಹಳೆಯ ಅಧಿಸೂಚನೆಗಳನ್ನು ಹಿಂಪಡೆಯಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 28 ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 28 ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಇದರಲ್ಲಿ ಹೊಸಕೋಟೆ (8), ದೇವನಹಳ್ಳಿ (7), ದೊಡ್ಡಬಳ್ಳಾಪುರ (7) ಮತ್ತು ನೆಲಮಂಗಲ (6) ಕ್ಷೇತ್ರಗಳಿವೆ.

**ಮೇ5ಕ್ಕೆ ಅದಾಲತ್**

ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ ರಾಜ್ಯದ 31 ಜಿಲ್ಲೆಗಳ ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆಯ ಕರಡು ಪ್ರಕಟಣೆಗೆ ಸಂಬಂಧಿಸಿದಂತೆ ಪ್ರಮುಖ ಬದಲಾವಣೆಗಳನ್ನು ಮಾಡಿದೆ.

ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ನೀಡಲಾಗಿದ್ದ ಕಾಲಾವಕಾಶವನ್ನು ಮೇ 2ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ಏ.27ರಂದು ನಿಗದಿಪಡಿಸಲಾಗಿದ್ದ ಪರಿಶೀಲನಾ ಅದಾಲತ್ತನ್ನು ಈಗ ಮೇ 5ಕ್ಕೆ ಮುಂದೂಡಲಾಗಿದೆ.

ಬಹುಮಹಡಿಗಳ ಕಟ್ಟಡದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಚೇರಿಯಲ್ಲಿ ಅದಾಲತ್ ನಡೆಯಲಿದೆ. ಈ ಪುನರ್ ವಿಂಗಡಣೆಯು ಮುಂಬರುವ ಪಂಚಾಯತ್ ಚುನಾವಣೆಗಳ ಮೇಲೆ ನೇರ ಪರಿಣಾಮ ಬೀರಲಿದ್ದು, ಭೌಗೋಳಿಕ ವ್ಯಾಪ್ತಿಗೆ ಅನುಗುಣವಾಗಿ ಆಡಳಿತಾತ್ಮಕ ಸುಧಾರಣೆಯನ್ನು ತರುವ ಗುರಿ ಹೊಂದಿದೆ.

# ಶೀಘ್ರದಲ್ಲೇ ಡಿಕೆಶಿಗೆ ಉತ್ತಮ ಸ್ಥಾನ: ಕುರ್ಚಿ ಚರ್ಚೆಗೆ ಪುಷ್ಟಿ ನೀಡಿದ ಶಾಸಕ ಡಾ.ರಂಗನಾಥ್

**ಬೆಂಗಳೂರು, ಏ.27:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಶೀಘ್ರದಲ್ಲೇ ಒಳ್ಳೆಯ ಸ್ಥಾನ ಸಿಗಲಿದೆ ಎಂದು ಕುಣಿಗಲ್ ಶಾಸಕ ಡಾ. ರಂಗನಾಥ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಸಿಎಂ ಸ್ಥಾನ ಬದಲಾವಣೆಯ ವದಂತಿಗಳಿಗೆ ಪರೋಕ್ಷವಾಗಿ ಪುಷ್ಟಿ ನೀಡಿದ್ದಾರೆ.

ನಾವು ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು, ಫಲಾಫಲಗಳನ್ನು ದೇವರಿಗೆ ಬಿಡಬೇಕು. ಅದೇ ರೀತಿ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಜವಾಬ್ದಾರಿಯನ್ನು ಹೊತ್ತು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಮುಂಬರುವ ದಿನಗಳಲ್ಲಿ ಒಳ್ಳೆಯ ಸ್ಥಾನ ಸಿಗಬೇಕು ಎನ್ನುವುದು ನಮ್ಮೆಲ್ಲರ ನಿರೀಕ್ಷೆಯಾಗಿದೆ. ಹೈಕಮಾಂಡ್ ಈ ಸಂಬಂಧ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ ಎಂಬ ವಿಶ್ವಾಸ ನಮಗಿದೆ. ಮೇ 15ರಂದು ಡಿ.ಕೆ. ಶಿವಕುಮಾರ್ ಅವರ ಜನ್ಮದಿನವಿದೆ. ಅಷ್ಟರೊಳಗೆ ಅವರಿಗೆ



ಯಾವುದಾದರೂ ಸಂತೋಷದ ವಿಚಾರ ಅಥವಾ 'ಸಿಹಿ ಸುದ್ದಿ' ಬರಬಹುದು ಎಂಬ ಆಶಯ ನಮ್ಮದಾಗಿದೆ ಎಂದು ಹೇಳಿದ್ದಾರೆ.

**ಒಪ್ಪಂದದ ಸ್ವರೂಪ ಏನೆಂದು ಹೈಕಮಾಂಡ್ ಸ್ಪಷ್ಟಪಡಿಸಬೇಕು**

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಒಪ್ಪಂದದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಅಂತಹ ಒಂದು ಒಪ್ಪಂದವಾಗಿದೆ ಎಂಬ ವಿಚಾರ ಎಲ್ಲರ ತಲೆಯಲ್ಲೂ ಇದೆ. ಆದರೆ, ಆ ಒಪ್ಪಂದದ ಸ್ವರೂಪ ಏನು ಎಂಬುದನ್ನು ಹೈಕಮಾಂಡ್ ಸ್ಪಷ್ಟಪಡಿಸಬೇಕು. ಈ ಮೂಲಕ ಹೈಕಮಾಂಡ್ ಸದ್ಯ ಇರುವ ಗೊಂದಲವನ್ನು ಬಗೆಹರಿಸಬೇಕು. ಇದನ್ನು ನಾವಷ್ಟೇ ಅಲ್ಲ, ಎಲ್ಲರೂ ಹೇಳುತ್ತಿದ್ದಾರೆ ಎಂದು ರಂಗನಾಥ್ ಉತ್ತರಿಸಿದರು. ಸಿದ್ದರಾಮಯ್ಯ ಅವರು ಪ್ರಸ್ತುತ ಒಳ್ಳೆಯ ಆಡಳಿತ ನೀಡುತ್ತಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್ ಅವರಿಗೂ ಮುಖ್ಯಮಂತ್ರಿ ಸ್ಥಾನ ಸಿಗಬೇಕು ಎನ್ನುವುದು ನಮ್ಮ ಆಸೆ. ಹೈಕಮಾಂಡ್ ಏನೇ ನಿರ್ಧಾರ ತಗೊಂಡರೂ ನಾವು ಅದಕ್ಕೆ ಬದ್ಧರಾಗಿರುತ್ತೇವೆ. ವರಿಷ್ಠರು ಸೂಕ್ತ ನಿರ್ಧಾರ ತಗೊಳ್ಳುತ್ತಾರೆ ಎಂಬ ವಿಶ್ವಾಸವಿದೆ. ಎಲ್ಲದಕ್ಕೂ ಕಾಲ ಬರಬೇಕು, ಕಾಲಾಯ ತಸ್ಮೈ ನಮಃ ಎಂದು ಮಾರ್ಮಿಕವಾಗಿ ನುಡಿದರು.

# ಪರಿಶಿಷ್ಟ ಎಡ ಸಮುದಾಯದ ಹೊಸ ಬೇಡಿಕೆ

**ಬೆಂಗಳೂರು, ಏ.27:** ದಶಕಗಳ ಸಂಘರ್ಷ, ಸಾಮಾಜಿಕ ನ್ಯಾಯದ ಹಕ್ಕೊತ್ತಾಯ ಹಾಗೂ ಸಮುದಾಯಗಳ ನಿರಂತರ ಹೋರಾಟಕ್ಕೆ ಮನ್ನಣೆ ನೀಡಿ ಪರಿಶಿಷ್ಟ ಜಾತಿಯ ಒಳಮೀಸಲಾತಿ ಜಾರಿಗೆ ರಾಜ್ಯ ಸರ್ಕಾರ ಹಸಿರುನಿಶಾನೆ ತೋರಿದ ಬೆನ್ನಲ್ಲೇ ಒಳಮೀಸಲಾತಿ ಕೋರಿಕೆಯ ಹೊಸ ಕೂಗು ಪ್ರತಿಧ್ವನಿಸಲಾರಂಭಿಸಿದೆ. ಒಳಮೀಸಲಾತಿ ಆರ್ಥಿಕ ಸಬಲೀಕರಣ ಹಾಗೂ ರಾಜಕೀಯ ಪ್ರಾತಿನಿಧ್ಯವೂ ಇರಬೇಕು ಎಂಬುದು ಈ ಬೇಡಿಕೆಯಾಗಿದೆ.

- ಆರ್ಥಿಕ ಸಬಲೀಕರಣ, ರಾಜಕೀಯ ಪ್ರಾತಿನಿಧ್ಯಕ್ಕೂ ಒಳಮೀಸಲಾತಿ
- ಆಂಧ್ರ, ತೆಲಂಗಾಣ ಮಾದರಿ ಕರ್ನಾಟಕದಲ್ಲೂ ಮರುಸೃಷ್ಟಿಯಾಗಬೇಕು

ಆಂಧ್ರಪ್ರದೇಶ, ತೆಲಂಗಾಣಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿರುವ ಒಳಮೀಸಲಾತಿ ಮಾದರಿ ಕರ್ನಾಟಕದಲ್ಲೂ ಮರುಸೃಷ್ಟಿ ಆಗಬೇಕೆಂಬುದು ಪರಿಶಿಷ್ಟ ಎಡ ಸಮುದಾಯದ ಪ್ರಮುಖ ಆಗ್ರಹ. ನೇಮಕಾತಿಯಲ್ಲಷ್ಟೇ ಅಲ್ಲದೆ, ರಾಜಕೀಯ ಹಾಗೂ ಶೈಕ್ಷಣಿಕ ಮೀಸಲಾತಿ ಮತ್ತು ಸರ್ಕಾರದ ಅನುದಾನ ಹಂಚಿಕೆಯಲ್ಲೂ ಒಳಮೀಸಲಾತಿಯನ್ನು ಸಮಗ್ರ ಮಾನದಂಡವನ್ನಾಗಿ ಅಳವಡಿಸಿಕೊಳ್ಳಬೇಕೆಂಬ ಆಗ್ರಹ ಕೇಳಿಬಂದಿದೆ.

ವಿಶೇಷವಾಗಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಬಿಡುಗಡೆಯಾಗುವ ಅನುದಾನದ ಹಂಚಿಕೆ ಜಿಲ್ಲಾವಾರು ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿರಬೇಕೆಂಬ ಬೇಡಿಕೆ ಇದೆ. ಎಡಗೈ ಹಾಗೂ ಬಲಗೈ ಸಮುದಾಯಗಳ ವಾಸ್ತವ ಜನಸಂಖ್ಯೆ ಪರಿಗಣಿಸಿ, ಅನುದಾನದ ಪ್ರತಿ ಹನಿಯೂ ತಳಮಟ್ಟದ ಜನರಿಗೆ ತಲುಪುವಂತಾಗಬೇಕು ಎಂಬುದು ಈ ಸಮುದಾಯಗಳ ಕೋರಿಕೆ.

**ಸಮಾನ ಸ್ಥಾನ ನಿರ್ಧಾರವಾಗಲಿ**

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಒಳಮೀಸಲು ಜಾರಿಯಾದರೆ ಶೋಷಿತ ಸಮುದಾಯಗಳಿಗೆ ಬಲವಾದ ಪ್ರಾತಿನಿಧ್ಯ ದೊರೆಯಲಿದೆ. ಬಲಾಢ್ಯರ ನಡುವೆ ಅಸ್ತಿತ್ವ ಕಂಡುಕೊಳ್ಳಲು ಹವಣಿಸುತ್ತಿರುವ ಸಮುದಾಯಗಳಿಗೆ, ಈ ಮೀಸಲಾತಿಯು ಆಶಾಕಿರಣವಾಗಲಿದೆ ಎಂಬುದು ವಿಶ್ಲೇಷಕರ ಅಭಿಪ್ರಾಯ.

ಈಗಾಗಲೇ ಎಡ, ಬಲ, ಇತರ ಪರಿಶಿಷ್ಟ ಸಮುದಾಯಕ್ಕೆ ಅವಕಾಶ ನೀಡಲಾಗುತ್ತಿದೆ. ಇದನ್ನು ಹೊರತುಪಡಿಸಿ ನಿರ್ದಿಷ್ಟವಾಗಿ ಮೀಸಲು ಪ್ರಕಾರವೇ ಸಮಾನವಾಗಿ ಸ್ಥಾನ ಕೊಡಬೇಕೆಂಬ ನಿರ್ಧಾರವಾದರೆ ಹೆಚ್ಚು ಅನುಕೂಲವಾಗಲಿದೆ. ನ್ಯಾ. ನಾಗಮೋಹನದಾಸ್ ವರದಿ ಹಾಗೂ ಸದಾಶಿವ ಆಯೋಗದ ಶಿಫಾರಸುಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂಬುದು ದಲಿತ ಸಂಘಟನೆಗಳ ಪ್ರಬಲ ವಾದವಾಗಿದೆ.

**ಕಲ್ಯಾಣ ಯೋಜನೆಗಳಿಗೂ ಅನ್ವಯಿಸಲಿ**

ಸರ್ಕಾರ ಅನುದಾನ ಹಂಚಿಕೆಯ ಪ್ರಕ್ರಿಯೆಯಲ್ಲಿ ನಿವೇಶನ ವಿತರಣೆ ಮತ್ತು ಮನೆ ನಿರ್ಮಾಣದಂತಹ ಕಲ್ಯಾಣ ಯೋಜನೆಗಳಿಗೂ ಒಳಮೀಸಲಾತಿ ಅನ್ವಯಿಸಬೇಕು. ಇದು ಬಡತನ ರೇಖೆಗಿಂತ ಕೆಳಗಿರುವ ಸಮುದಾಯದಕ್ಕೆ ಆರ್ಥಿಕ ನೆರವು ಒದಗಿಸಲು ಪೂರಕವಾಗಲಿದೆ ಎಂದು ಸಮುದಾಯದ ಮುಖಂಡರು ಸರ್ಕಾರಕ್ಕೆ ಪತ್ರ ಮುಖೇನ ಮನವಿ ಮಾಡಿದ್ದಾರೆ. ಒಳ ಮೀಸಲು ವಿಷಯದಲ್ಲಿ ಸರ್ಕಾರದ ನಿರ್ಧಾರ ಬೆಂಬಲಿಸುತ್ತೇವೆ. ಆದರೆ, ರೋಸ್ಟರ್ ಬಿಂದುವಿನಲ್ಲಿ ಯಾವ ರೀತಿಯ ಮಾರ್ಪಾಟು ಮಾಡುತ್ತಾರೆಂಬ ಕುತೂಹಲವಿದೆ. ರೋಸ್ಟರ್ ಬಿಂದುವಿನಲ್ಲಿ ಪಾರದರ್ಶಕತೆ ಇಲ್ಲದಿದ್ದರೆ ಸಮುದಾಯಕ್ಕೆ ನಿಜವಾದ ಲಾಭ ದೊರೆಯುವುದಿಲ್ಲ ಎಂದು ಮಾಜಿ ಸಚಿವ ಆಂಜನೇಯ ಅಭಿಪ್ರಾಯಪಟ್ಟಿದ್ದಾರೆ.

# ಸಚಿವ ಡಿ.ಸುಧಾಕರ್ ಆರೋಗ್ಯ ಪರಿಸ್ಥಿತಿ ಗಂಭೀರ

## ಸರ್ಕಾರ ಏನನ್ನೂ ಮುಚ್ಚಿಟ್ಟಿಲ್ಲ: ಕೇಂದ್ರ ಸಚಿವ ಎಚ್‌ಡಿಕೆ ಆರೋಪಕ್ಕೆ ಶಾಸಕ ರಂಗನಾಥ್ ಪ್ರತಿಕ್ರಿಯೆ

**ಬೆಂಗಳೂರು, ಏ.27:** ಸಚಿವ ಡಿ.ಸುಧಾಕರ್ ಆರೋಗ್ಯದಲ್ಲಿ ಕಳವಳ ಇದೆ. ಕಳೆದ ನಾಲ್ಕು ವಾರಗಳಿಂದಲೂ ಕಂಡು ಬರುತ್ತಿರುವ ವಿಚಾರಗಳು ಗಂಭೀರ ಪರಿಸ್ಥಿತಿಯನ್ನು ಸೂಚಿಸುತ್ತವೆ ಎಂದು ವೈದ್ಯರೂ ಆಗಿರುವ ಕುಣಿಗಲ್ ಶಾಸಕ ಎಚ್.ಡಿ.ರಂಗನಾಥ್ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವರ ಆರೋಗ್ಯ ಪರಿಸ್ಥಿತಿ ಕುರಿತು ಸಾರ್ವಜನಿಕ ಮಾಹಿತಿ ನೀಡುವುದು ಕುಟುಂಬ ಹಾಗೂ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಯ ವೈದ್ಯರ ಜವಾಬ್ದಾರಿಯಾಗಿದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಆರೋಪದಂತೆ ಸರ್ಕಾರ ಏನನ್ನೂ ಮುಚ್ಚಿಟ್ಟಿಲ್ಲ ಎಂದರು.

ಸುಧಾಕರ್ ಅವರಿಗೆ ಪೋಲೀಯೋದಿಂದ ಎಡಗಾಲು ಸಮಸ್ಯೆ ಇತ್ತು. ಬಲಗಾಲ ಮೇಲೆ ಒತ್ತಡ ಉಂಟಾಗಿ ಮೊಣಕಾಲು ನೋವು ಹೆಚ್ಚಾಗಿತ್ತು. ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಎರಡು ಮೂರು ಕಡೆ ಶಿಫಾರಸು ಬಂದಿದ್ದವು. ನನ್ನನ್ನು ಭೇಟಿ ಮಾಡಿ ಸಲಹೆ ಕೇಳಿದ್ದರು. ಸ್ವಲ್ಪ ದಿನ ಕಾಯುವಂತೆ ಹೇಳಿದ್ದೆ. ಈ ನಡುವೆ ಮಣಿಪಾಲ್ ಆಸ್ಪತ್ರೆಗೆ ಹೋಗಿ ಮಂಡಿ ಬದಲು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ.

ಆರಂಭದಲ್ಲಿ ಎರಡು ದಿನ ಚೆನ್ನಾಗಿದ್ದರು. ಇದ್ದಕ್ಕಿದ್ದಂತೆ ಆಕ್ಸಿಜನ್ ಸ್ಯಾಚ್ಯುರೇಷನ್ ಕಡಿಮೆಯಾಗಿತ್ತು. ಕೃತಕ ಆಮ್ಲಜನಕ ನೀಡಲಾಗಿತ್ತು. ಆರು ಗಂಟೆಯಾದರೂ ಸಾಮಾನ್ಯ ಸ್ಥಿತಿಗೆ ಬರದ ಹಿನ್ನೆಲೆಯಲ್ಲಿ ವೆಂಟಿಲೇಟರ್‌ಗೆ ಹಾಕಿಲಾಗಿತ್ತು. ಅಲ್ಲಿಯೂ ಸಾಮರ್ಥ್ಯದಷ್ಟು ಆಮ್ಲಜನಕ ಸೇವನೆ ಸಾಧ್ಯವಾಗದ ಹಿನ್ನೆಲೆಯಲ್ಲಿ ಶ್ವಾಸಕೋಶ ಮತ್ತು ಹೃದಯಕ್ಕೆ ಬೆಂಬಲವಾಗುವ ಎಕ್ಮೋ ಎಂಬ ಕೃತಕ ಯಂತ್ರ ಹಾಕಲಾಗಿದೆ. ನಾಲ್ಕು ವಾರವಾದರೂ ಚೇತರಿಕೆ ಕಂಡು ಬಂದಿಲ್ಲ ಎಂದರು.

ರೆಸ್ಪಿರೇಟರಿ ಡಿಸ್ಟ್ರೆಸ್ ಸಿಂಡ್ರೋಮ್ (ಆರ್‌ಡಿಎಸ್) ಸೋಂಕಿನಿಂದ ಶ್ವಾಸಕೋಶ ಹಾನಿಯಾಗಿದೆ. ಚಿಕಿತ್ಸೆಯಿಂದ ಅವರು ಚೇತರಿಸಿಕೊಳ್ಳುತ್ತಿಲ್ಲ. ಸ್ಥಿತಿ ಗಂಭೀರವಾಗಿದೆ. ಆರೋಗ್ಯ ಸ್ಥಿತಿಗತಿಯ ಬಗ್ಗೆ ಸಾರ್ವಜನಿಕವಾಗಿ ಮಾಹಿತಿ ನೀಡಬೇಕಾದರೆ ಕುಟುಂಬದ ಅನುಮತಿ ಪಡೆಯಬೇಕಿದೆ ಎಂದರು.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರು ಹಲವು ಬಾರಿ ವೈದ್ಯರ ಜೊತೆ ಚರ್ಚೆ ನಡೆಸಿದ್ದಾರೆ. ಶ್ವಾಸಕೋಶ ಕಸಿ ಶಸ್ತ್ರಚಿಕಿತ್ಸೆಯ ಬಗ್ಗೆಯೂ ಚರ್ಚೆಗಳಾಗಿವೆ. ಈಗಾಗಲೇ ಗರಿಷ್ಠ ಹಂತ ದಾಟಿರುವುದರಿಂದ ಶ್ವಾಸಕೋಶ ಕಸಿ ಅಷ್ಟು ಅನುಕೂಲವಲ್ಲ ಎಂಬ ಸಲಹೆಗಳು ಕೇಳಿ ಬಂದಿವೆ. ಸರ್ಕಾರ ಸಚಿವರನ್ನು ಎಲೆಕ್ಟ್ರಾನಿಕ್ ಸಿಟಿಯ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿ ಎಲ್ಲಾ ರೀತಿಯ ತಯಾರಿಗಳನ್ನು ನಡೆಸಿದೆ. ಯಾವುದನ್ನೂ ಮರೆ ಮಾಚುತ್ತಿಲ್ಲ. ಪ್ರಮಾಣಿತ ಕ್ರಮಗಳ ಅನುಸಾರವೇ ಎಲ್ಲವನ್ನು ಪಾಲನೆ ಮಾಡಲಾಗುತ್ತಿದೆ ಎಂದು ಹೇಳಿದರು.

# ಉಮರ್ ಖಾಲಿದ್ ಕಾರ್ಯಕ್ರಮಕ್ಕೆ ಅನುಮತಿ ಬೇಡ: ಸಂಸದ ಮೋಹನ್ ಮನವಿ

**ಬೆಂಗಳೂರು, ಏ.27:** ಭಯೋತ್ಪಾದನೆ ಯಂತಹ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಉಮರ್ ಖಾಲಿದ್‌ನಂತವರನ್ನು ವೈಭವೀಕರಿಸುವ ಕಾರ್ಯಕ್ರಮಕ್ಕೆ ಅನುಮತಿ ನೀಡದಂತೆ ಬಿಜೆಪಿ ಸಂಸದ ಪಿ.ಸಿ. ಮೋಹನ್ ನೇತೃತ್ವದ ನಿಯೋಗ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದೆ. ನ್ಯಾಯಕ್ಕಾಗಿ ಅಖಿಲ ಭಾರತ ವಕೀಲರ ಸಂಘ ಹಾಗೂ ನಾಗರಿಕ ಸ್ವಾತಂತ್ರ್ಯಕ್ಕಾಗಿ ಪೀಪಲ್ಸ್ ಯೂನಿಯನ್ ಹಾಗೂ ಬಹುತ್ವ ಕರ್ನಾಟಕ ಸಂಘಟನೆಗಳಿಂದ ಏ.28ರಂದು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ದೇಶದಲ್ಲೆಡೆ ಕೇಂದ್ರ ಸರ್ಕಾರ ನಕ್ಸಲರನ್ನು ಬಗ್ಗುಬಡಿಯುತ್ತಿದೆ. ಆದರೆ ನಗರ ನಕ್ಸಲರು ಮಾತ್ರ ಇನ್ನೂ ಸಕ್ರಿಯವಾಗಿದ್ದು, ದೇಶದ್ರೋಹಿಗಳಿಗೆ ಪರೋಕ್ಷವಾಗಿ ಬೆಂಬಲಿಸುವ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ಉಮರ್ ಖಾಲಿದ್‌ಗೆ ಕಳೆದ ಮೂರು ವರ್ಷದಿಂದ ನ್ಯಾಯಾಲಯಗಳು ಜಾಮೀನು ನೀಡಲು ನಿರಾಕರಿಸಿರುವುದು ಆತನ ಅಪರಾಧಿ ಚಟುವಟಿಕೆಗಳಿಗೆ ಸಾಕ್ಷಿಯಾಗಿದೆ. ಆತನನ್ನು ವೈಭವೀಕರಿಸುವುದು ಅಪರಾಧಿಗಳಿಗೆ ಉತ್ತೇಜನ ಕೊಡುವ ದುಷ್ಕೃತ್ಯವಾಗುತ್ತದೆ. ಇಂತಹ ಕಾರ್ಯಕ್ರಮವನ್ನು ನಮ್ಮ ನಗರದಲ್ಲಿ ನಡೆಯುತ್ತಿರುವುದು ಆಘಾತಕಾರಿ ಸಂಗತಿಯಾಗಿದೆ ಎಂದು ಬಿಜೆಪಿ ನಿಯೋಗ ಹೇಳಿದೆ.

ಈಗಾಗಲೇ ನಗರದ ಗೋಡೆಗಳ ಮೇಲೆ ಉಮರ್ ಖಾಲಿದ್ ಬೆಂಬಲಿಸಿ ಗೋಡೆಬರಹಗಳನ್ನು ಬರೆಯುತ್ತಿರುವುದು, ಇವರ ಜಾಲ ಹರಡುತ್ತಿರುವುದು ಅತ್ಯಂತ ಆತಂಕದ ಸಂಗತಿಯಾಗಿದೆ. ನಗರದ ಶಾಂತಿ ಕಾಪಾಡುವ ಹಿತದೃಷ್ಟಿಯಿಂದ ಇವರ ವಿಚಾರ ಸಂಕಿರಣ ನಡೆಸಲು ನೀಡಿರುವ ಅನುಮತಿಯನ್ನು ಹಿಂದಕ್ಕೆ ಪಡೆಯಬೇಕು. ಈ ಕಾರ್ಯಕ್ರಮ ನಡೆದರೆ, ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗವಾದರೆ ಬಿಜೆಪಿಯು ಹೊಣೆಯಲ್ಲ ಎಂದು ಪತ್ರದ ಮೂಲಕ ಮನವಿ ಸಲ್ಲಿಸಲಾಗಿದೆ.

ಉಮರ್ ಖಾಲಿದ್ ಒಬ್ಬ ದೇಶದ್ರೋಹಿ. ಇಂದಿಗೂ ಜೈಲಿನಲ್ಲಿರುವ ಆತನನ್ನು ವೈಭವೀಕರಿಸುವ ಕಾರ್ಯಕ್ರಮ ನಾಳೆ ಬೆಂಗಳೂರಿನಲ್ಲಿ ನಡೆಯುತ್ತಿದೆ. ಈ ಕಾರ್ಯಕ್ರಮಕ್ಕೆ ಅನುಮತಿ ಕೊಡದಂತೆ ಪೊಲೀಸ್ ಆಯುಕ್ತರಿಗೆ ಮನವಿ ಮಾಡಿದ್ದೇವೆ. ರಾಜ್ಯ ಸರ್ಕಾರ ಕೂಡ ಇಂತಹವರ ಬಗ್ಗೆ ಮೃದು ಧೋರಣೆ ಹೊಂದಿದೆ. ಹಾಗಾಗಿ ಇಂತಹವರು ಬಂದು ಇಲ್ಲಿ ಈ ರೀತಿಯ ಕಾರ್ಯಕ್ರಮ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ ಇಂತಹ ಕಾರ್ಯಕ್ರಮಕ್ಕೆ ಅನುಮತಿ ಕೊಡುವುದಿಲ್ಲ. ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ದೇಶದ್ರೋಹಿಗಳನ್ನು ವೈಭವೀಕರಿಸುವ ಕೆಲಸಕ್ಕೆ ಉತ್ತೇಜಿಸುತ್ತಿದೆ. ಈಗಾಗಲೇ ಗಾಂಧಿನಗರದಲ್ಲಿ ಗೋಡೆಬರಹಗಳನ್ನು ಕೂಡ ಬರೆದಿದ್ದಾರೆ. ಕರ್ನಾಟಕ ಸರ್ಕಾರ ಕಾರ್ಯಕ್ರಮಕ್ಕೆ ಅನುಮತಿ ಕೊಡಬಾರದು ಎಂದು ಒತ್ತಾಯಿಸುತ್ತಿದ್ದು, ಕ್ರಮ ಜರುಗಿಸುವ ಭರವಸೆಯನ್ನು ಪೊಲೀಸ್ ಆಯುಕ್ತರು ನೀಡಿದ್ದಾರೆ' ಎಂದು ಸಂಸದ ಪಿ.ಸಿ.ಮೋಹನ್ ತಿಳಿಸಿದರು.

### ಯುಎಪಿಎ ಅಡಿ ಬಂಧಿತರ ಕುರಿತ ಪುಸ್ತಕ ಬಿಡುಗಡೆಗೆ ವಿರೋಧ: ರವಿಕುಮಾರ್

ದೆಹಲಿ ಗಲಭೆ ಪ್ರಕರಣದಲ್ಲಿ ಯುಎಪಿಎ ಅಡಿಯಲ್ಲಿ ಬಂಧಿತನಾಗಿರುವ ಉಮರ್ ಖಾಲಿದ್ ಹಾಗೂ ಶಾರ್ಜಿಲ್ ಇಮಾಮ್ ಕುರಿತ ಪುಸ್ತಕ ಬಿಡುಗಡೆಗೆ ಭಾರತೀಯ ಜನತಾ ಪಾರ್ಟಿಯ ವಿರೋಧವಿದೆ. ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ ಇದಕ್ಕೆ ಅವಕಾಶ ಕೊಡಬಾರದು. ಒಂದು ವೇಳೆ ಅವಕಾಶ ನೀಡಿದರೆ ಬಿಜೆಪಿ ಖಂಡಿಸಲಿದೆ ಎಂದು ವಿಧಾನ ಪರಿಷತ್ತಿನಲ್ಲಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್ ರವಿಕುಮಾರ್ ಹೇಳಿದ್ದಾರೆ. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 2020ರ ಫೆಬ್ರವರಿಯಲ್ಲಿ ನಡೆದ ದೆಹಲಿ ಗಲಭೆ ಸಂಬಂಧ ಸುಪ್ರೀಂ ಇವರಿಬ್ಬರ ಜಾಮೀನು ಅರ್ಜಿಯನ್ನು ವಜಾಗೊಳಿಸಿದೆ. ಶಾರ್ಜೀಲ್ ಇಮಾಮ್ ನನ್ನು ಸಿಎಎ ಮತ್ತು ಎನ್‌ಆರ್ಸಿ ವಿರೋಧಿ ಪ್ರತಿಭಟನೆಗಳ ಸಂದರ್ಭದಲ್ಲಿ ಮಾಡಿದ ಭಾಷಣಗಳಿಗಾಗಿ ಬಂಧಿಸಲಾಗಿದೆ. ಭಯೋತ್ಪಾದಕ ಹಾಗೂ ದೇಶದ್ರೋಹಿಗಳನ್ನು ಕುರಿತ ಪುಸ್ತಕ ಬಿಡುಗಡೆ ಮಾಡುವ ಅವಶ್ಯಕತೆ ಏನಿತ್ತು ಎಂದು ಪ್ರಶ್ನಿಸಿದರು. ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ ನಡೆಯುತ್ತಿರುವ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ನಟ ಪ್ರಕಾಶ್ ರೈ, ಇತಿಹಾಸಕಾರರಾದ ರಾಮಚಂದ್ರ ಗುಹಾ ಹಾಗೂ ಜಾನಕಿ ನಾಯರ್ ಭಾಗವಹಿಸುತ್ತಿದ್ದಾರೆ. ಇದಕ್ಕೆ ಯಾವುದೇ ರೀತಿ ಅವಕಾಶ ಸಿಗಬಾರದು. ಸರ್ಕಾರ ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.




ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿಯ ಎರಡನೇ ಘಟಿಕೋತ್ಸವದಲ್ಲಿ ಸೋಮವಾರ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು ಪ್ರಮಾಣಪತ್ರ ಪ್ರದಾನ ಮಾಡಿದರು.

# ಗ್ರಾ.ಪಂ.ನಿಂದ ಪಾಲಿಕೆ ಚುನಾವಣೆವರೆಗೆ ಸ್ಪರ್ಧಿಸಿ: ಯುವಕರಿಗೆ ಸಂಗಮೇಶ್ ಕರೆ

**ಬೆಂಗಳೂರು, ಏ.27:** ರಾಜ್ಯದ ಯುವಕರು ಗ್ರಾಮ ಪಂಚಾಯತ್‌ನಿಂದ ಮಹಾನಗರ ಪಾಲಿಕೆವರೆಗೆ ಎಲ್ಲಾ ಚುನಾವಣೆಗಳಿಗೆ ಸ್ಪರ್ಧಿಸಲು ಸಜ್ಜಾಗಬೇಕು ಎಂದು ರಾಜ್ಯ ಯುವಸಮೂಹದ ಅಧ್ಯಕ್ಷ .ಎಸ್. ಸಂಗಮೇಶ್ ಕರೆ ನೀಡಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಎಲ್ಲೆಡೆ ಯುವಧ್ವನಿ ಕೇಳಿಸಬೇಕು. ಈ ಬಾರಿ ಯುವಜನಾಂಗ ಸ್ಪರ್ಧಿಸಬೇಕು, ಗೆಲ್ಲಬೇಕು, ಆಡಳಿತ ನಡೆಸಬೇಕು. ರಾಜ್ಯ ಮತ್ತು ದೇಶದ ಭವಿಷ್ಯ ನಿರ್ಮಾಣದಲ್ಲಿ ಯುವ ಶಕ್ತಿಯ ಪಾತ್ರ ನಿರ್ಣಾಯಕ ಎಂದು ಹೇಳಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಕಾನ್ಸಿರಾಂ ಅವರು ತೋರಿಸಿದ ದಾರಿಯಲ್ಲಿ ಸಾಗಬೇಕು. ರಾಜಕೀಯವೇ ಸಾಮಾಜಿಕ ನ್ಯಾಯ ಸಾಧಿಸಲು ಅತ್ಯಂತ ಪರಿಣಾಮಕಾರಿ ಸಾಧನವೆಂದು ಯುವ ಸಮೂಹ ಅರ್ಥಮಾಡಿಕೊಳ್ಳಬೇಕು.



ಯುವಜನಾಂಗ ಪ್ರೇಕ್ಷಕರಾಗಿರುವ ಕಾಲ ಮುಗಿದಿದೆ. ನಿರ್ಧಾರ ತೆಗೆದುಕೊಳ್ಳುವ ನಾಯಕರಾಗುವ ಕಾಲ ಬಂದಿದೆ, ಎಂದು ತಿಳಿಸಿದ್ದಾರೆ.

ಕಳೆದ 6 ತಿಂಗಳಿಂದ ದೆಹಲಿ ಸೇರಿದಂತೆ ವಿವಿಧ ಪಕ್ಷಗಳ ನಾಯಕರ ಜೊತೆ ಚರ್ಚಿಸಿದ್ದೇನೆ. ಸಂಘಟನೆ ಇಲ್ಲದಿದ್ದರೆ ಸ್ಥಾನವಿಲ್ಲ. ಮತಬಲ ಇಲ್ಲದಿದ್ದರೆ ಮಾತಿಗೂ ಬೆಲೆ ಇಲ್ಲ. ನಿಮ್ಮ ವಿಶ್ವಾಸದ ಹೆಜ್ಜೆ ನಿಮ್ಮ ಭವಿಷ್ಯವನ್ನು ರೂಪಿಸುತ್ತದೆ. ಧೈರ್ಯದಿಂದ ಮುಂದೆ ಬನ್ನಿ. ನೀವು ಯಾವ ದಾರಿಯನ್ನು ಆಯ್ಕೆ ಮಾಡಿಕೊಂಡರೂ, ನಿಮ್ಮ ಹಿಂದೆ ಸಂಘಟನೆ ಸದಾ ಇರುತ್ತದೆ ಎಂದಿದ್ದಾರೆ.

ಅನೇಕ ಮಂದಿ ಬಿಜೆಪಿ ಹಾಗೂ ಕಾಂಗ್ರೆಸ್ ಕುರಿತು ಅಸಮಾಧಾನ ಹೊಂದಿದ್ದಾರೆ. ಹೀಗಾಗಿ ನಿಮ್ಮ ಮೌಲ್ಯಗಳಿಗೆ ಹೊಂದುವ ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳಿ. ಜೆಡಿಎಸ್, ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಸೇರಿದಂತೆ ವಿವಿಧ ಪರ್ಯಾಯ ರಾಜಕೀಯ ವೇದಿಕೆಗಳಲ್ಲಿ ತಮ್ಮ ಆದರ್ಶಗಳಿಗೆ ಹತ್ತಿರವಾದ ವೇದಿಕೆಯಲ್ಲಿ ಸೇರಿ ಸಂಘಟಿತ ಶಕ್ತಿಯಾಗಿ ಹೊರಹೊಮ್ಮಬೇಕು ಎಂದು ಸಲಹೆ ನೀಡಿದ್ದಾರೆ.

# ಸಿಇಟಿ ಕೀ ಉತ್ತರ ಪ್ರಕಟ: ಆಕ್ಷೇಪಣೆ ಸಲ್ಲಿಸಲು ಏ.30 ಕೊನೆಯ ದಿನ

**ಬೆಂಗಳೂರು, ಏ.27:** ಕಳೆದ ವಾರ ನಡೆದಿದ್ದ ಪ್ರಸಕ್ತ ಸಾಲಿನ ಸಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ)ಯ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಕೀ ಉತ್ತರಗಳಿಗೆ ಆಕ್ಷೇಪಣೆಗಳು ಏನಾದರೂ ಇದ್ದರೆ ಏ.30ರೊಳಗೆ ಸಲ್ಲಿಸಬೇಕು.

ಇದಕ್ಕೆ ಆನ್‌ಲೈನ್ ಲಿಂಕ್ ಕೂಡ ಬಿಡುಗಡೆ ಮಾಡಿದ್ದು, ಆಕ್ಷೇಪಣೆಗಳ ಜೊತೆಗೆ ಪ್ರಶ್ನೆ ಸಂಖ್ಯೆ, ವರ್ಷನ್ ಕೋಡ್ ಇತ್ಯಾದಿ ಮಾಹಿತಿಯನ್ನು ನಿಖರವಾಗಿ ದಾಖಲಿಸಬೇಕು ಎಂದು ಕೆಇಎ ತಿಳಿಸಿದೆ. ಅಪೂರ್ಣ ಮಾಹಿತಿಯ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ. ಈ ವಿಚಾರದಲ್ಲಿ ವಿಷಯ ತಜ್ಞರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಕೆಇಎ ಮಾಹಿತಿ ನೀಡಿದೆ. ಅಭ್ಯರ್ಥಿಗಳು kamataka.gov.in 305 KCET 2026 ಉತ್ತರ ಕೀ ಪಿಡಿಎಫ್ ಅನ್ನು ಪಡೆಯಬಹುದು ಅಲ್ಲದೆ, ಅವರು ಏಪ್ರಿಲ್ 30 ರವರೆಗೆ ಕೆಸಿಇಟಿ 2026 ಉತ್ತರ ಕೀಗೆ ಆಕ್ಷೇಪಣೆ ಸಲ್ಲಿಸಬಹುದು.

ಕೆಸಿಇಟಿ 2026 ಫಲಿತಾಂಶವನ್ನು ಮೇ 2026 ರಲ್ಲಿ ಘೋಷಿಸಲಾಗುತ್ತದೆ. ಪ್ರಾಧಿಕಾರವು ಏಪ್ರಿಲ್ 23 ಮತ್ತು 24 ರಂದು ಪರೀಕ್ಷೆಯನ್ನು ನಡೆಸಿತ್ತು. ಆದರೆ ಕನ್ನಡ ಪರೀಕ್ಷೆಯು ಏಪ್ರಿಲ್ 22 ರಂದು ನಡೆದಿತ್ತು.

# ಸಿಎಂ ವೀಕ್ ಆಗಿದ್ದಾರೆಂದು ಯಾರು ಹೇಳಿದ್ದು?

## ಆಡಳಿತ ಚೆನ್ನಾಗಿ ಕೊಡ್ತಿರೋದು ಗೊತ್ತಾಗ್ತಿಲ್ಲವೇ: ಯತೀಂದ್ರ



**ರಾಯಚೂರು, ಏ. 27:** ಮೌನ ವಹಿಸಿ ಆಡಳಿತ ನಡೆಸುತ್ತಿರುವ ಮಾತ್ರಕ್ಕೆ ಸಿಎಂ ದುರ್ಬಲ ರಾಗಿದ್ದಾರೆ ಅಂತ ಯಾರು ಹೇಳ್ತಾರೆ? ಏನೂ ಕಾರಣ ಅದಕ್ಕೆ? ಸಿಎಂ ಆಡಳಿತ ಚೆನ್ನಾಗಿ ಕೊಡ್ತಿದ್ದಾರೆ. ಜನರಿಗೆ ಏನು ಮಾತು ಕೊಟ್ಟಿದ್ರು, ಅದನ್ನು ಉಳಿಸಿದ್ದಾರೆ. ಒಳಮೀಸಲನ್ನು ಪ್ರಣಾಳಿಕೆಯಲ್ಲಿ ಕೊಟ್ಟಂತೆ ಈಡೇರಿಸಿದ್ದೇವೆ. ಹಾಗಾಗಿ ಸಿಎಂ ಯಾವುದೇ ಕಾರಣಕ್ಕೂ ನಿಶಕ್ತರಾಗಿಲ್ಲ. ಅವರು ಯಾರಿಗೂ ಹೆದರಿಲ್ಲ. ಹೆದರುವ ಯಾವ ಕೆಲಸವನ್ನೂ ಅವರು ಮಾಡಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ನಗರಕ್ಕೆ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿರುವ ಹಿನ್ನೆಲೆಯಲ್ಲಿ ಆಗಮಿಸಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ರಾಜಕೀಯ ಬೆಳವಣಿಗೆಯಿಂದ ವೀಕ್ ಆಗಿದ್ದಾರೆ ಎಂಬ ಪ್ರತಿಪಕ್ಷ ನಾಯಕರು ಇತ್ತೀಚೆಗೆ ನೀಡಿದ ಹೇಳಿಕೆಗೆ ತಿರುಗೇಟು ನೀಡಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ದೆಹಲಿ ಭೇಟಿ: ಡಿಸಿಎಂ ಡಿ.ಕೆ. ಶಿವಕುಮಾರ್ ದೆಹಲಿ ಭೇಟಿ ಕುರಿತು ಪ್ರತಿಕ್ರಿಯಿಸಿ, ಪ್ರತಿಯೊಂದು ಪಕ್ಷದಲ್ಲಿ ನಾಯಕರು ಹೈಕಮಾಂಡ್ ಭೇಟಿ ಮಾಡೇ ಮಾಡ್ತಾರೆ.

ಅವರ ಸ್ವಂತ ಹಿತಾಸಕ್ತಿ ಇರುತ್ತದೆ. ನಮ್ಮ ಸರಕಾರದಲ್ಲಿ ಹೊಸದಾಗಿ ನಡೀತಿಲ್ಲ. ಹಿಂದಿನ ಬಿಜೆಪಿ ಸರಕಾರದಲ್ಲಿ ಇರಲಿಲ್ವಾ, ಹಿಂದಿನ ಎಲ್ಲ ಸರಕಾರದಲ್ಲೂ ಆಗಿರುತ್ತದೆ. ನಮ್ಮ ಸರಕಾರ ಅದರಿಂದ ಹೊರತಾಗಿಲ್ಲ. ಅದು ಮಾಮೂಲು ವಿಷಯ. ಅದಕ್ಕೆ ಹೆಚ್ಚಿನ ಮಹತ್ವ ಕೊಡೋ ಅವಶ್ಯಕತೆ ಇಲ್ಲ ಎಂದರು.

**ಸಚಿವ ಸಂಪುಟ ವಿಸ್ತರಣೆ :** ಉಪಚುನಾವಣೆ ಬಳಿಕ ರಾಜ್ಯ ರಾಜಕಾರಣದಲ್ಲಿ ಬದಲಾವಣೆ ವಿಚಾರವಾಗಿ ಮಾತನಾಡಿ ಯಾರು ಆ ಥರ ಹೇಳಿದ್ದಾರೆ ಗೊತ್ತಿಲ್ಲ. ಅವನ್ನೇ ಕೇಳಿ, ಈ ಬಗ್ಗೆ ನನಗೆ ಗೊತ್ತಿಲ್ಲ ಎಂದರು. ಸಿಎಂ ಬದಲಾವಣೆ ವಿಚಾರವಾಗಿ, "ಸಿಎಂ ಈಗಾಗಲೇ ಅಸೆಂಬ್ಲಿಯಲ್ಲಿಈ ಬಗ್ಗೆ ಮಾತನಾಡಿದ್ದಾರೆ. ಹೀಗಾಗಿ ಆ ಬಗ್ಗೆ ಹೆಚ್ಚಿನ ವ್ಯಾಖ್ಯಾನ ಮಾಡೋಕೆ ಆಗಲ್ಲ ಎಂದರು.

ಸಚಿವ ಸಂಪುಟ ವಿಸ್ತರಣೆ ಕುರಿತು ಮಾತನಾಡಿ, ಎರಡೂವರೆ ವರ್ಷ ಮೇಲಾಯ್ತು. ಎಲ್ಲಶಾಸಕರಿಗೆ ಮಂತ್ರಿ ಆಗಬೇಕು ಅನ್ನುವುದು ಇರುತ್ತೆ. ಈ ಭಾಗದ ಶಾಸಕ ದದ್ದಲ್ ಸೇರಿ ಎಲ್ಲರೂ ಅರ್ಹರಿದ್ದಾರೆ ಎಂದರು.

ಕುರುಬ ಸಮುದಾಯದ ನಾಯಕರಿಗೆ ಹೆಚ್ಚಿನ ಆದ್ಯತೆ ಕೊಡಬೇಕು ಎಂಬ ಬೇಡಿಕೆ ಬಗ್ಗೆ, ಎಲ್ಲೆಲ್ಲಿ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೋ ಅಲ್ಲಿ ನಾಯಕರಿಗೆ ಪ್ರಾತಿನಿಧ್ಯ ಕೊಡಬೇಕು. ಅದು ಆಗಬೇಕು. ಇದನ್ನು ಸಿಎಂ ಗಮನಕ್ಕೆ ತರುತ್ತೇನೆ ಎಂದು ಹೇಳಿದರು.

# ಬಸವಕಲ್ಯಾಣದಲ್ಲಿ ಸಾವಿರ ವರ್ಷ ಹಳೆಯ ಐದು ತಲೆಯ ನಾಗ, ಶಿವಲಿಂಗ ಪತ್ತೆ: ಶೈವಪಂಥದ ಸಂಕೇತ



ಬಸವಕಲ್ಯಾಣ, ಏ. 27: ವಿಶ್ವಕ್ಕೆ ಸಮಾನತೆಯ ಸಂದೇಶ ಸಾರಿದ ವಿಶ್ವಗುರು ಬಸವಣ್ಣನವರ ಕರ್ಮಭೂಮಿ ಬಸವಕಲ್ಯಾಣ ಸಮೀಪವಿರುವ ನಾರಾಯಣಪುರ ಗ್ರಾಮವು ಈಗ ಪುರಾತತ್ವ ಇಲಾಖೆಯ ಗಮನ ಸೆಳೆಯುತ್ತಿದೆ.

ಇಲ್ಲಿ ಇತ್ತೀಚೆಗೆ ಕಂಡುಬಂದಿರುವ ಅವಶೇಷಗಳು ಈ ಭಾಗದ ಐತಿಹಾಸಿಕ ಹಿನ್ನೆಲೆಗೆ ಸಾಕ್ಷಿಯಾಗಿವೆ. ಬಸವಕಲ್ಯಾಣ ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ ಶತಮಾನಗಳ ಹಿಂದಿನ ಐತಿಹಾಸಿಕ ಅವಶೇಷಗಳು ಪತ್ತೆಯಾಗಿರುವುದು ಇತಿಹಾಸ ಪ್ರೇಮಿಗಳಲ್ಲಿ ಮತ್ತು ಸಂಶೋಧಕರಲ್ಲಿ ತೀವ್ರ ಕುತೂಹಲ ಮೂಡಿಸಿದೆ. ಪ್ರಾಚೀನ ಕಾಲದ ಕೆತ್ತನೆಯಿಂದ ಕೂಡಿದ ಕಲ್ಲಿನ ವಿಗ್ರಹಗಳು ಮತ್ತು ದೇವಸ್ಥಾನದ ವಾಸ್ತುಶಿಲ್ಪದ ಭಾಗಗಳು ಬೆಳಕಿಗೆ ಬಂದಿವೆ.

ಐತಿಹಾಸಿಕ ಹಿನ್ನೆಲೆಯುಳ್ಳ ಈ ಗ್ರಾಮದ ಭವಾನಿ ದೇವಸ್ಥಾನದ ಹಿಂಭಾಗದಲ್ಲಿ ಹಿಂದೂ ಸಮಾವೇಶ ಕಾರ್ಯಕ್ರಮಕ್ಕಾಗಿ ಊಟ ವ್ಯವಸ್ಥೆ (ಅಡುಗೆ) ಮಾಡಲು ಜಾಗ ಸ್ವಚ್ಛತೆ ಮಾಡುವಾಗ ಪುರಾತನ ಐದು ಹೆಡೆಯ ನಾಗಮೂರ್ತಿ, ಶಿವಲಿಂಗ, ಶಿಲಾಶಾಸನ, ಹಾಗೂ ಸರ್ಪ ರೂಪದ ಶಿಲ್ಪ ಇತರೆ ಅವಶೇಷಗಳು ಕಂಡು ಬಂದಿವೆ. ಹಳೆಯ ಕನ್ನಡ ಅಥವಾ ಸಂಸ್ಕೃತ ಲಿಪಿಯಲ್ಲಿರುವ ಶಾಸನಗಳ ತುಣುಕುಗಳು ಪತ್ತೆಯಾಗಿದ್ದು, ಇವುಗಳ ಅಧ್ಯಯನದಿಂದ ಅಂದಿನ ರಾಜವಂಶಗಳ ಬಗ್ಗೆ ಮಾಹಿತಿ ಸಿಗುವ ಸಾಧ್ಯತೆಯಿದೆ.

ಯುದ್ಧದಲ್ಲಿ ವೀರಮರಣ ಹೊಂದಿದವರ ನೆನಪಿಗಾಗಿ ಸ್ಥಾಪಿಸಲಾದ ವೀರಗಲ್ಲುಗಳು ಇಲ್ಲಿಯ ಶೌರ್ಯದ ಇತಿಹಾಸ ಸಾರುವಂತಿದೆ ಎನ್ನುತ್ತಾರೆ ಗ್ರಾಮಸ್ಥರು. ಅಈ ಅವಶೇಷಗಳು ಮುಖ್ಯವಾಗಿ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಅಥವಾ ಅದಕ್ಕೂ ಹಿಂದಿನ ಕಾಲಕ್ಕೆ ಸೇರಿರಬಹುದು ಎಂದು ಅಂದಾಜಿಸಲಾಗಿದೆ. ಬಸವಕಲ್ಯಾಣವು ಆ ಕಾಲದ ರಾಜಧಾನಿಯಾಗಿದ್ದರಿಂದ ನಾರಾಯಣಪುರವು ಪ್ರಮುಖ ಆಡಳಿತಾತ್ಮಕ ಅಥವಾ ಧಾರ್ಮಿಕ ಕೇಂದ್ರವಾಗಿತ್ತು ಎಂಬುದಕ್ಕೆ ಈ ಅವಶೇಷಗಳು ಪುಷ್ಟಿ ನೀಡುತ್ತವೆ.

**ಹಿಂದೆಯೂ ಅವಶೇಷಗಳು ಪತ್ತೆ**


ಕಳೆದ ಸುಮಾರು 7–8 ವರ್ಷಗಳ ಹಿಂದೆ ಗ್ರಾಮದಲ್ಲಿ ಐತಿಹಾಸಿಕ ಅವಶೇಷಗಳು ಕಂಡುಬಂದಿವೆ. ವಿಷ್ಣುವಿನ ವಿಗ್ರಹ, ಕಾಳಿಕಾ ಮಾತಾ ವಿಗ್ರಹಗಳು ಪತ್ತೆಯಾಗಿವೆ. ನಾರಾಯಣಪುರ ಗ್ರಾಮದಲ್ಲಿ 108 ದೇವಸ್ಥಾನಗಳು ಇರುವ ಪ್ರತೀತಿ ಇದೆ. ನೆಲ ಅಗೆಯುವಾಗ ಅಲ್ಲಲ್ಲಿ ಪುರಾತನ ಶಿಲ್ಪಕಲೆ ಮತ್ತು ವಿಗ್ರಹಗಳು ಪತ್ತೆಯಾಗುತ್ತಿವೆ. ಈಗಾಗಲೇ ಗ್ರಾಮದ ಮಧ್ಯಭಾಗದಲ್ಲಿ ಕಲ್ಯಾಣಿ ಚಾಲುಕ್ಯರು ಕಟ್ಟಿಸಿದ ಐತಿಹಾಸಿಕ ಶಿವನ ದೇವಸ್ಥಾನ ಇದೆ. ನೂತನ ಕಟ್ಟಡ, ಮನೆ ನಿರ್ಮಾಣ ಸಮಯದಲ್ಲಿ ವಿಗ್ರಹಗಳು ಪತ್ತೆಯಾಗುತ್ತಿರುವುದು ವಿಶೇಷ.

**ಘಟನೆಯ ಹಿನ್ನೆಲೆ:** ಸ್ಥಳೀಯವಾಗಿ ಆಯೋಜಿಸಲಾಗಿದ್ದ ಹಿಂದೂ ಸಮಾವೇಶದ ಸಿದ್ಧತೆಗಾಗಿ ಭವಾನಿ ಮಂದಿರದ ಹಿಂಭಾಗದಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ತೆರವುಗೊಳಿಸಿ ಪ್ರದೇಶವನ್ನು ಸ್ವಚ್ಛಗೊಳಿಸಲಾಗುತ್ತಿತ್ತು. ಈ ವೇಳೆ ಭೂಮಿಯ ಅಲ್ಪ ಆಳದಲ್ಲಿ ಕಲ್ಲಿನ ವಿನ್ಯಾಸಗಳು ಕಂಡುಬಂದವು. ಸಂಪೂರ್ಣವಾಗಿ ಮಣ್ಣು ತೆಗೆದಾಗ ಸುಸ್ಥಿತಿಯಲ್ಲಿರುವ ಶಿಲ್ಪಗಳು ದರ್ಶನ ನೀಡಿವೆ. ಅತ್ಯಂತ ಸುಂದರ ಮತ್ತು ಪ್ರಾಚೀನ ಶೈಲಿಯ ಶಿವಲಿಂಗ ಪತ್ತೆಯಾಗಿದೆ. ಶಿವಲಿಂಗದ ಜತೆಗೆ ಐದು ಹೆಡೆಗಳನ್ನು ಹೊಂದಿರುವ ನಾಗರಹಾವಿನ ಶಿಲ್ಪವು ಪತ್ತೆಯಾಗಿದೆ. ಹಿಂದೂ ಧರ್ಮದಲ್ಲಿ ಪಂಚಮುಖ ನಾಗರಹಾವಿಗೆ ವಿಶೇಷ ಧಾರ್ಮಿಕ ಮಹತ್ವವಿದ್ದು, ನಾಗಾರಾಧನೆಯ ಸಂಕೇತ ಇದಾಗಿದೆ.

**ಸಂಶೋಧನೆಗೆ ಒತ್ತಾಯ :** ಈ ಸುದ್ದಿ ತಿಳಿಯುತ್ತಿದ್ದಂತೆಯೇ ನೂರಾರು ಭಕ್ತರು ಮತ್ತು ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿ ಪುರಾತನ ಶಾಸನ, ವಿಗ್ರಹಗಳನ್ನು ವೀಕ್ಷಿಸುತ್ತಿದ್ದಾರೆ. ಈ ಜಾಗದಲ್ಲಿ ಹಿಂದೆ ದೊಡ್ಡದೊಂದು ಶಿವ ದೇವಾಲಯವಿರಬಹುದು ಎಂಬ ಶಂಕೆ ವ್ಯಕ್ತವಾಗಿದ್ದು, ಪುರಾತತ್ವ ಇಲಾಖೆಯು ಈ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಈ ಸಂಶೋಧನೆಯು ಬಸವಕಲ್ಯಾಣವು ಕೇವಲ ಶರಣರ ನಾಡು ಮಾತ್ರವಲ್ಲದೆ ಅದಕ್ಕೂ ಪೂರ್ವದಲ್ಲಿ ಪ್ರಬಲವಾದ ಶೈವಪಂಥದ ಕೇಂದ್ರವಾಗಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಇಲ್ಲಿ ಪತ್ತೆಯಾದ ಶಿಲ್ಪಗಳ ಶೈಲಿಯ 800 ರಿಂದ 1000 ವರ್ಷಗಳಷ್ಟು ಹಳೆಯದು ಎಂದು ಅಂದಾಜಿಸಲಾಗಿದೆ. ಗ್ರಾಮದಲ್ಲಿ ಇನ್ನಷ್ಟು ಶಿಲಾಶಾಸನಗಳು, ಮೂರ್ತಿಗಳು ಪತ್ತೆಯಾಗುವ ಶಂಕೆ ಇದೆ ಎಂದು ತಿಳಿಸಿದ್ದಾರೆ.

ನಾರಾಯಣಪುರದಲ್ಲಿ ಪತ್ತೆಯಾದ ಈ ಅವಶೇಷಗಳನ್ನು ಸಂರಕ್ಷಿಸದಿದ್ದರೆ ಕಾಲಕ್ರಮೇಣ ಇವು ನಾಶವಾಗುವ ಭೀತಿ ಇದೆ. ಸರಕಾರ ಮತ್ತು ಪುರಾತತ್ವ ಇಲಾಖೆ ಕೂಡಲೇ ಇಲ್ಲಿ ವೈಜ್ಞಾನಿಕ ಉತ್ಖನನ ನಡೆಸಬೇಕು ಎಂದಿದ್ದಾರೆ ಸ್ಥಳೀಯ ಇತಿಹಾಸ ಆಸಕ್ತರು.

# 'ಎ' ವರ್ಗದ ದೇವಸ್ಥಾನಗಳ ಪೈಕಿ ಮೈಲಾರ ಮಲ್ಲಣ್ಣ ಆದಾಯದಲ್ಲಿ ನಂ.1



ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಖಾನಾಪುರ ಮೈಲಾರಲಿಂಗೇಶ್ವರ್ ದೇವಸ್ಥಾನ.

ಬೀದರ್, ಏ.27: ನಾಡಿನಾದ್ಯಂತ ಕೋಟ್ಯಂತರ ಭಕ್ತರನ್ನು ಹೊಂದಿರುವ, ದಕ್ಷಿಣ ಕಾಶಿ ಖ್ಯಾತಿಯ ಭಾಲ್ಕಿ ತಾಲೂಕಿನ ಖಾನಾಪುರ ಮೈಲಾರ ಮಲ್ಲಣ್ಣ (ಖಂಡೋಬಾ) ಮಂದಿರವು ಕಳೆದ ಮೂರು ವರ್ಷಗಳ ಅವಧಿಯಲ್ಲಿ (2022–23 ಹಾಗೂ 2024–25ರಲ್ಲಿ) ಅತ್ಯಧಿಕ ಅಂದರೆ 7.20 ಕೋಟಿ ರೂ. ಆದಾಯ ದಾಖಲಿಸಿದೆ.

ಅತ್ಯಂತ ಪುರಾತನ ಇತಿಹಾಸ: ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಜಿಲ್ಲೆಯ ಎ ವರ್ಗದ ದೇವಸ್ಥಾನಗಳ ಪೈಕಿ ಆದಾಯದಲ್ಲಿ ಮೊದಲ ಸ್ಥಾನದಲ್ಲಿದೆ. 2022–23 ರಲ್ಲಿ 1.95 ಕೋಟಿ ಆದಾಯ ಹೊಂದಿದ್ದ ಮಂದಿರವು, 2023–24ರಲ್ಲಿ2.57 ಕೋಟಿ ಹಾಗೂ 2024–25 ರಲ್ಲಿ 2.68 ಕೋಟಿಗೂ ಅಧಿಕ ಆದಾಯವನ್ನು ದಾಖಲಿಸಿದೆ. ಅತ್ಯಂತ ಪುರಾತನ ಇತಿಹಾಸವನ್ನು ಹೊಂದಿರುವ ಈ ಮಂದಿರವು ಹಚ್ಚ ಹಸಿರಿನ ನಿಸರ್ಗದ ರಮ್ಯ ಪರಿಸರದಲ್ಲಿದ್ದು, ವರ್ಷವಿಡೀ ಮಂದಿರಕ್ಕೆ ಕರ್ನಾಟಕವಷ್ಟೆ? ಅಲ್ಲದೆ, ನಾನಾ ರಾಜ್ಯಗಳ ಕೋಟ್ಯಂತರ ಭಕ್ತರು ಆಗಮಿಸಿ ದೇವರ ದರ್ಶನ ಪಡೆಯುತ್ತಾರೆ.

ಮೈಲಾರ ಜಾತ್ರೆ: ಪ್ರತಿ ವರ್ಷ ಡಿಸೆಂಬರ್ ಹಾಗೂ ಜನವರಿ ತಿಂಗಳ ಚಟ್ಟಿ ಅಮವಾಸ್ಯೆಯಿಂದ ಆರಂಭವಾಗುವ ಮೈಲಾರ ಜಾತ್ರೆಯು ಎಳ್ಳಮವಾಸ್ಯೆವರೆಗೆ ಒಂದು ತಿಂಗಳ ಕಾಲ ಅದ್ಧೂರಿಯಾಗಿ ನಡೆಯುತ್ತದೆ. ನಾಡಿನ ಆರಾಧ್ಯ ದೆ?ವವೂ ಆಗಿರುವ ಮಲ್ಲಣ್ಣನಿಗೆ ಭಕ್ತರು ಹರಕೆ ಹೊತ್ತು, ಮಂದಿರಕ್ಕೆ ಆಗಮಿಸಿ ಭಂಡಾರ ಹಾರಿಸುತ್ತಾರೆ. ಜತೆಗೆ, ಅವರವರ ಭಕ್ತಿಗೆ ಅನುಸಾರವಾಗಿ ಮಂದಿರದ ಹುಂಡಿಗೆ ಕಾಣಿಕೆ ಹಾಕುತ್ತಾರೆ.

ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ ಸೇರಿ ನಾನಾ ಜಿಲ್ಲೆಗಳ ಹಾಗೂ ನೆರೆಯ ತೆಲಂಗಾಣ, ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳ ಭಕ್ತರು ಪ್ರತಿ ಭಾನುವಾರ ಮಂದಿರಕ್ಕೆ ಬರುತ್ತಾರೆ. ಭಾನುವಾರ ಮಲ್ಲಣ್ಣನ ದಿನವಾದ್ದರಿಂದ ಅಂದು ಹೆಚ್ಚಿನ ಭಕ್ತರು ಆಗಮಿಸಿ, ದೇವರ ದರ್ಶನ ಪಡೆಯುತ್ತಾರೆ. ಪ್ರತಿ ಭಾನುವಾರ ಮೈಲಾರದಲ್ಲಿ ಜಾನುವಾರು, ಕುರಿಗಳ ಜಾತ್ರೆಯೂ ನಡೆಯುತ್ತದೆ.

# ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಸಿದ ಘಟನೆಗೆ ಬ್ರಾಹ್ಮಣ ಮಹಾಸಂಘ ಖಂಡನೆ

**ಬೀದರ್, ಏ. 27:** ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಸಂದರ್ಭದಲ್ಲಿ ಮತ್ತೆ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಯ ಜನಿವಾರ (ಯಜ್ಞೋಪವೀತ) ತೆಗೆಸಿದ ಘಟನೆ ತೀವ್ರ ಖಂಡನೀಯವಾಗಿದೆ. ಸರ್ಕಾರ ಪರೀಕ್ಷೆ ಕುರಿತು ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸ್ಪಷ್ಟ ಆದೇಶ ನೀಡಿದ್ದರು ಇಂಥ ಘಟನೆಗಳು ನಡೆಯುತ್ತಿವೆ ಎಂದರೆ, ಇದು ದುರುದ್ದೇಶಪೂರ್ವಕ ಎಂಬುದು ಸ್ಪಷ್ಟವಾಗುತ್ತಗದೆ. ಇಂಥ ಸಿಬ್ಬಂದಿಗಳನ್ನು ಶಾಶ್ವತವಾಗಿ ಕೆಲಸದಿಂದ ವಜಾಗೊಳಿಸಬೇಕು ಎಂದು ಅಖಿಲ ಭಾರತ ಬ್ರಾಹ್ಮಣ ಮಹಾಸಂಘದ ಜಿಲ್ಲಾಧ್ಯಕ್ಷ ರಮೇಶ್ ಕುಲಕರ್ಣಿ ಅವರು ತಿಳಿಸಿದ್ದಾರೆ.


ಉಪನಯನ ಸಂಸ್ಕಾರದಲ್ಲಿ ಧರಿಸುವ ಈ ಜನಿವಾರವು ಬ್ರಾಹ್ಮಣರ ಧಾರ್ಮಿಕ ಗುರುತು, ಸಂಸ್ಕೃತಿ ಹಾಗೂ ಆತ್ಮಗೌರವದ ಪ್ರತೀಕವಾಗಿದೆ. ಈ ವರ್ಷ ಬೆಂಗಳೂರು ನಗರದ ಮಡಿವಾಳ ಪ್ರದೇಶದಲ್ಲಿರುವ ಕೃಪಾನಿಧಿ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ, ವಿದ್ಯಾರ್ಥಿಗೆ ಜನಿವಾರ ತೆಗೆದುಹಾಕುವಂತೆ ಬಲವಂತ ಮಾಡಲಾಗಿದೆ.

ತೆಗೆದಿಲ್ಲದಿದ್ದರೆ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿರುವುದು ಅತ್ಯಂತ ದುಃಖಕರ ಮತ್ತು ಸಂವಿಧಾನಾತ್ಮಕ ಹಕ್ಕುಗಳ ಉಲ್ಲಂಘನೆ ಆಗಿದೆ. ವಿದ್ಯಾರ್ಥಿಯ ಧಾರ್ಮಿಕ ಆಚರಣೆಗಳಿಗೆ ಗೌರವ ನೀಡದೇ ಈ ರೀತಿಯ ನಿರ್ಬಂಧ ಹೇರುವುದು ಸಮಂಜಸವಲ್ಲ. ಪ್ರತಿಯೊಬ್ಬರಿಗೂ ಅವರವರ ಧರ್ಮಾನುಸಾರಿ ಧರಿಸಬೇಕಾದವು ಗಳನ್ನು ಧರಿಸುತ್ತರೆ. ಆದರೆ ಅವುಗಳನ್ನು ಕಿತ್ತೆಸೆಯುವುದು ಮತಾಂಧ ಶಕ್ತಿಗಳ ಅಟ್ಟಹಸವಾಗಿದೆ ಎಂದು ಅವರು ಹೇಳಿಕೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷವೂ ಬೀದರ್ ಜಿಲ್ಲೆಯಲ್ಲಿ ಇದೇ ರೀತಿಯ ಘಟನೆ ನಡೆದಿತ್ತು. ಸರ್ಕಾರ ಹಾಗೂ ಪರೀಕ್ಷಾ ಮಂಡಳಿ ಇಂತಹ ಘಟನೆಗಳನ್ನು ತಡೆಯಲು ಯಾವುದೇ ಕ್ರಮ ಕೈಗೊಂಡಿಲ್ಲವೆಂಬುದು ಸ್ಪಷ್ಟವಾಗುತ್ತಿದೆ. ಪ್ರತಿ ವರ್ಷವೂ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಆಟವಾಡುತ್ತಿರುವುದು ಅತ್ಯಂತ ವಿಷಾದಕರ ವಿಷಯ.

ಜನಿವಾರವು ಕೇವಲ ಒಂದು ದಾರವಲ್ಲ – ಅದು ಬ್ರಾಹ್ಮಣರ ಜೀವನಶೈಲಿ, ಆಚರಣೆ ಮತ್ತು ಸಂಸ್ಕೃತಿಯ ಅವಿಭಾಜ್ಯ ಅಂಗ. ಅದನ್ನು ತೆಗೆಸುವುದು ಅವರ ಧಾರ್ಮಿಕ ಹಕ್ಕುಗಳ ಮೇಲೆ ನೇರ ಹಲ್ಲೆಯಾಗಿದೆ. ವಿದ್ಯಾರ್ಥಿಗೆ ಮಾನಸಿಕ ಒತ್ತಡ ಉಂಟುಮಾಡಿ, ಪರೀಕ್ಷೆಯಿಂದ ವಂಚಿಸುವುದು ಅನ್ಯಾಯವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂತಹ ಘಟನೆ ಕೇವಲ ಒಂದು ವಿದ್ಯಾರ್ಥಿಯ ಅವಮಾನವಲ್ಲ. ಇದು ಸಂಪೂರ್ಣ ಬ್ರಾಹ್ಮಣ ಸಮುದಾಯದ ಆತ್ಮಗೌರವಕ್ಕೆ ಬಿದ್ದಿರುವ ಗಂಭೀರ ಗಾಯ. ಧರ್ಮ, ಸಂಸ್ಕೃತಿ ಮತ್ತು ಪರಂಪರೆಯನ್ನು ಅವಮಾನಿಸುವ ಈ ರೀತಿಯ ವರ್ತನೆ ಅಸಹ್ಯಕರ ಮತ್ತು ಅಸಹನೀಯ. ನಮ್ಮ ಸಂಸ್ಕಾರಗಳ ಮೇಲೆ ಕೈಹಾಕುವುದು ನಮ್ಮ ಅಸ್ತಿತ್ವದ ಮೇಲೆ ದಾಳಿ ಮಾಡಿದಂತೆಯೇ. ಇದು ಕೇವಲ ನಿರ್ಲಕ್ಷ್ಯವಲ್ಲ – ಇದು ನಮ್ಮ ಧಾರ್ಮಿಕ ಹಕ್ಕುಗಳ ನಿರ್ಲಜ್ಜ ಉಲ್ಲಂಘನೆ ಎಂದು ಅವರು ಕಿಡಿಕಾರಿದ್ದಾರೆ.



ರಮೇಶ ಕುಲಕರ್ಣಿ

ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗೆ "ಜನಿವಾರ ತೆಗೆದಿಲ್ಲದಿದ್ದರೆ ಪರೀಕ್ಷೆಗೆ ಅವಕಾಶ ಇಲ್ಲ" ಎಂದು ಬೆದರಿಕೆ ಹಾಕಿರುವುದು ಮಾನವೀಯತೆ, ನ್ಯಾಯ ಮತ್ತು ಸಂವಿಧಾನದ ಮೂಲಭೂತ ಮೌಲ್ಯಗಳನ್ನೇ ತುಳಿದಂತಾಗಿದೆ. ಒಂದು ವಿದ್ಯಾರ್ಥಿಯ ಕನಸು, ಪರಿಶ್ರಮ ಮತ್ತು ಭವಿಷ್ಯವನ್ನು ಈ ರೀತಿಯಾಗಿ ತುಳಿಯುವುದು ಯಾವ ರೀತಿಯ ವ್ಯವಸ್ಥೆ? ಇದು ನಮ್ಮ ಸಮಾಜದ ಸಂವೇದನಾಶೀಲತೆಯ ಮೇಲೆ ಪ್ರಶ್ನಾರ್ಹ ಚಿಹ್ನೆ ಮೂಡಿಸುತ್ತದೆ. ಘಟನೆ ಖಂಡನಾರ್ಹ ಎಂದು ಅವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರವು ಜನಿವಾರ ತೆಗೆಸಿದ ಕಾರಣದಿಂದ ಪರೀಕ್ಷೆ ಬರೆಯಲು ಅವಕಾಶ ಕಳೆದುಕೊಂಡ ವಿದ್ಯಾರ್ಥಿಗೆ ನ್ಯಾಯ ಒದಗಿಸಬೇಕು ಮತ್ತು ಅಗತ್ಯ ಪರಿಹಾರ ನೀಡಬೇಕು. ಘಟನೆಗೆ ಕಾರಣರಾದ ಕಾಲೇಜಿನ ಮಾನ್ಯತೆ ರದ್ದುಗೊಳಿಸಿ, ತಪ್ಪಿತಸ್ಥ ಸಿಬ್ಬಂದಿಯನ್ನು ತಕ್ಷಣ ವಜಾಗೊಳಿಸಬೇಕು. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಬೇಕು. ವಿದ್ಯಾರ್ಥಿಗಳ ಧಾರ್ಮಿಕ ಆಚಿಯರಣೆಗಳಿಗೆ ಗೌರವ ನೀಡುವಂತೆ ಪರೀಕ್ಷಾ ಕೇಂದ್ರಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು. ಇದರ ಜೊತೆಗೆ, ಇಂತಹ ಘಟನೆಗಳನ್ನು ಮರುಕಳಿಸಿದರೆ ಬ್ರಾಹ್ಮಣ ಸಮುದಾಯವು ಮೌನವಾಗಿರುವುದಿಲ್ಲ ಎಂದು ಅವರು ಎಚ್ಚರಿಸಿದ್ದಾರೆ.

ನಮ್ಮ ಧರ್ಮ, ಸಂಸ್ಕೃತಿ ಮತ್ತು ಆತ್ಮಗೌರವದ ರಕ್ಷಣೆಗೆ ನಾವು ಕಾನೂನುಬದ್ಧ ಹಾಗೂ ಪ್ರಜಾಸತ್ತಾತ್ಮಕ ಹೋರಾಟ ನಡೆಸಲು ಸಿದ್ಧರಾಗಿದ್ದೇವೆ. ಇದು ಎಚ್ಚರಿಕೆ ಮಾತ್ರವಲ್ಲ ನಮ್ಮ ಹಕ್ಕುಗಳಿಗಾಗಿ ನಿಲ್ಲುವ ಸಂಕಲ್ಪ. ಬ್ರಾಹ್ಮಣ ಸಮುದಾಯವು ಸದಾ ಸಂಸ್ಕಾರ, ಜ್ಞಾನ ಮತ್ತು ಮೌಲ್ಯಗಳ ಪ್ರತೀಕವಾಗಿದೆ. ನಮ್ಮ ಧಾರ್ಮಿಕ ಆಚರಣೆ ಮತ್ತು ಆತ್ಮಗೌರವಕ್ಕೆ ಧಕ್ಕೆ ಉಂಟುಮಾಡುವ ಯಾವುದೇ ಕ್ರಮವನ್ನು ನಾವು ಸಹಿಸುವುದಿಲ್ಲ. ನಮ್ಮ ಸಹನೆಯನ್ನೇ ದೌರ್ಬಲ್ಯ ಎಂದು ಯಾರೂ ಭಾವಿಸಬಾರದು – ಅಗತ್ಯವಾದರೆ ನಾವು ನ್ಯಾಯಕ್ಕಾಗಿ ಗಟ್ಟಿಯಾಗಿ ಧ್ವನಿ ಎತ್ತುತ್ತೇವೆ ಎಂದು ಅವರು ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

# ಡಾ.ಅಂಬೇಡ್ಕರ್ ಕುರಿತು ಆಳ ಅಧ್ಯಯನಕ್ಕೆ ಪ್ರೋತ್ಸಾಹ ಅಗತ್ಯ: ವಿಲಾಸ ಗೌತಮ್




ಕಲಬುರಗಿ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಛಲವಾದಿ ಸಮಾಜದಿಂದ ಡಾ.ಬಿ.ಆರ್ ಅಂಬೇಡ್ಕರ್ ಜಯಂತ್ಯೋತ್ಸವದ ಅಂಗವಾಗಿ ಏರ್ಪಡಿಸಲಾದ ಪ್ರಬಂಧ ಸ್ಪರ್ಧೆ ಕಾರ್ಯಕ್ರಮವನ್ನು ನಗರತ ಆಶ್ರಯ ಸಮಿತಿ ಸದಸ್ಯ ವಿಲಾಸ ಗೌತಂ ಉದ್ಘಾಟಿಸಿದರು.

ಕಲಬುರಗಿ, ಏ. 27: ಡಾ.ಬಿ.ಆರ್ ಅಂಬೇಡ್ಕರ್ ಅವರ ವಿಚಾರಧಾರೆಗಳ ಕುರಿತಾದ ಪ್ರಬಂಧ ಸ್ಪರ್ಧೆಯು ಸಾಮಾಜಿಕ ಸಮಾನತೆ, ಶಿಕ್ಷಣ ಮತ್ತು ಸಂವಿಧಾನದ ಮಹತ್ವದ ಕುರಿತು ವಿದ್ಯಾರ್ಥಿಗಳಲ್ಲಿ ಆಳವಾದ ಅಧ್ಯಯನಕ್ಕೆ ಪ್ರೋತ್ಸಾಹ ನೀಡಲಿದೆ ಎಂದು ನಗರ ಆಶ್ರಯ ಸಮಿತಿ ಸದಸ್ಯ ವಿಲಾಸ ಗೌತಂ ಹೇಳಿದರು.


ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಛಲವಾದಿ ಸಮಾಜದಿಂದ ಡಾ.ಬಿ.ಆರ್ ಅಂಬೇಡ್ಕರ್ ಜಯಂತ್ಯೋತ್ಸವದ ಅಂಗವಾಗಿ ಏರ್ಪಡಿಸಲಾದ ಪ್ರಬಂಧ ಸ್ಪರ್ಧೆಯಲ್ಲಿ ಮಾತನಾಡಿದ ಅವರು, ತಾಲೂಕು ಛಲವಾದಿ ಸಮಾಜದವರು ಆಯೋಜನೆ ಮಾಡಿದ್ದು, ಡಾ.ಅಂಬೇಡ್ಕರ್ ಅವರ ಜೀವನ, ಸಂವಿಧಾನ ಶಿಲ್ಪಿಯಾಗಿ ಅವರ ಕೊಡುಗೆ, ಅಸ್ಪೃಶ್ಯತೆ ನಿರ್ಮೂಲನೆ, ಶೋಷಿತರ ಸಬಲೀಕರಣಕ್ಕಾಗಿ ನಡೆಸಲಾದ ಅವರ ಶ್ರಮದ ಕುರಿತು ಆಗಾಗ ಇಂತಹ ಸ್ಪರ್ಧೆಗಳು ನಿರಂತರವಾಗಿ ನಡೆಯುತ್ತಿರಬೇಕು ಹಾಗೂ ಪಠ್ಯದ ಜೊತೆಗೆ ಜಗತ್ತಿನ ಪ್ರಚಲಿತ ವಿದ್ಯಮಾನಗಳ ತಿಳುವಳಿಕೆ, ದಾರ್ಶನಿಕರ, ಮಹಾನ್ ವ್ಯಕ್ತಿಗಳ, ಸ್ವಾತಂತ್ರ್ಯ ಹೋರಾಟಗಾರರ ಕುರಿತು ಅಧ್ಯಯನ ಮಾಡುವುದು ಅತ್ಯಂತ ಅವಶ್ಯಕ ಎಂದು ಹೇಳಿದರು.

ಪಂಚ ಗ್ಯಾರಂಟಿಗಳ ಅನುಷ್ಠಾನ ಸಮಿತಿ ಸದಸ್ಯ ಶ್ರೀನಿವಾಸ ಸಂಗಾವಿ ಮಾತನಾಡಿ, ವರ್ಷದಲ್ಲಿ ಒಂದು ದಿನದ ಜಯಂತಿ ಮತ್ತು ವಾಟ್ಸಪ್ ಸ್ಟೇಟಸ್‌ಗೆ ನಾವು ಅಂಬೇಡ್ಕರ್ ಅವರನ್ನು ಸೀಮಿತಗೊಳಿಸಿದ್ದೇವೆ. ಡಾ.ಬಿ.ಆರ್ ಅಂಬೇಡ್ಕರ್ ಅವರು ತಮ್ಮ ಜೀವನದುದ್ದಕ್ಕೂ ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಯ ವಿರುದ್ಧ ಹೋರಾಟ ನಡೆಸಿದವರು. ಶೋಷಿತರಿಗೆ ನೀರು, ಶಿಕ್ಷಣ, ಘನತೆಯ ಹಕ್ಕನ್ನು ಕೊಡಿಸಲು ಸರ್ವಸ್ವವನ್ನೂ ಅರ್ಪಿಸಿದರು. ದೇಶ ಸೇವೆಗಾಗಿ ತಮ್ಮ ವೃತ್ತಿ ಜೀವನ, ಸುಖ–ಸಂತೋಷಗಳನ್ನು ತ್ಯಜಿಸಿದವರು. ಅಂತಹ ಮಹಾನ್ ಚೇತನದ ಕುರಿತು ನಾವು ಅಧ್ಯಯನ ಮಾಡುವುದು, ಪ್ರಬಂಧ, ಚರ್ಚಾ ಸ್ಪರ್ಧೆಗಳನ್ನು ಆಯೋಜನೆ ಮಾಡುವುದು ಅವಶ್ಯಕವಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ಭಾರತೀಯರಿಗೆ ಡಾ.ಅಂಬೇಡ್ಕರ್‌ರ ಕೊಡುಗೆಗಳು, ಸಂವಿಧಾನ ಭಾರತೀಯರಿಗೆ ಏಕೆ ಬೇಕು, ಮೀಸಲಾತಿ ವರವೋ? ಶಾಪವೋ ಎಂಬ ವಿಷಗಳ ಕುರಿತು ಪ್ರಬಂಧ ಸ್ಪರ್ಧೆ ನಡೆಸಲಾಯಿತು. ಛಲವಾದಿ ಸಮಾಜದ ಹಿರಿಯ ಮುಖಂಡ ಹಣಮಂತ ಸಾಗರ ಪ್ರಬಂಧ ಸ್ಪರ್ಧೆಗೆ ಚಾಲನೆ ನೀಡಿದರು. ಡಾ.ಅಂಬೇಡ್ಕರ್ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಗೌತಮ್ ಹಳ್ಳಿ, ಛಲವಾದಿ ಸಮಾಜದ ತಾಲೂಕು ಅಧ್ಯಕ್ಷ ಶಿವಕುಮಾರ ತೊಟ್ನಳ್ಳಿ, ಕಾಲೇಜಿನ ಉಪನ್ಯಾಸಕರಾದ ಡಾ.ರವೀಂದ್ರ ಕುಂಬಾರ, ಡಾ.ಕೌಸರ್ ಫಾತಿಮಾ, ಡಾ.ಮಲ್ಲಿಕಾರ್ಜುನ, ಪತ್ರಕರ್ತ ಸುಧೀರ ಬಿರಾದಾರ, ಸಾಗರ ಕಲಕಂಬ, ಈಶ್ವರಾಜ ಮಾದ್ವಾರ, ಈಶ್ವರಾಜ ಚಿಂತಪಳ್ಳಿ ಸೇರಿದಂತೆ ಇನ್ನಿತರರಿದ್ದರು.

# ಅಕ್ರಮ ಹೋಂಸ್ಟೇಗಳ ವಿರುದ್ಧ ತಕ್ಷಣ ಕ್ರಮವಾಗಲಿ

**ಅಮೇರಿಕ ಮಹಿಳೆ ಮೇಲಿನ ದೌರ್ಜನ್ಯ ಹಿನ್ನೆಲೆ ಕೊಡಗು ಜಿಲ್ಲಾ ಹೋಂಸ್ಟೇ ಮಾಲೀಕರಿಂದ ಸರ್ಕಾರಕ್ಕೆ ಒತ್ತಾಯ**



ಮಡಿಕೇರಿ, ಏ.27: ಕುಟ್ಟದಲ್ಲಿರುವ ನೋಂದಾಯಿತ ಹೋಂಸ್ಟೇಯಲ್ಲಿ ಅಮೆರಿಕದ ಪ್ರವಾಸಿ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 2,000ಕ್ಕೂ ಹೆಚ್ಚು ಅಕ್ರಮ ಹೋಂಸ್ಟೇಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಕೊಡಗಿನ ಹೋಂಸ್ಟೇ ಮಾಲೀಕರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.


ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಕೊಡಗು ಜಿಲ್ಲಾ ಹೋಂಸ್ಟೇ ಅಸೋಸಿಯೇಷನ್‌ನ ಸದಸ್ಯರು ಪ್ರವಾಸೋದ್ಯಮ ಇಲಾಖೆಯಲ್ಲಿ ಖಾಲಿ ಇರುವ ಉಪ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.ಆಡಳಿತದ ಕೊರತೆಯಿಂದಾಗಿ ಅನೇಕ ಪ್ರವಾಸೋದ್ಯಮ ನಿರ್ವಾಹಕರು ಮಾರ್ಗದರ್ಶನವಿಲ್ಲದೆ ಉಳಿದಿದ್ದಾರೆ. ಈ ವಲಯದಲ್ಲಿ ಕಾನೂನುಬಾಹಿರ ಚಟುವಟಿಕೆಗಳಿಗೆ ಕಾರಣವಾಗಿದೆ ಎಂದು ಸಂಘದ ಅಧ್ಯಕ್ಷೆ ಮೊಂತಿ ಗಣೇಶ್ ಹೇಳಿದರು.

ಜಿಲ್ಲೆಯು ಸಾವಿರಾರು ಹೋಂಸ್ಟೇಗಳು ಮತ್ತು ಹಲವಾರು ರೆಸಾರ್ಟ್‌ಗಳನ್ನು ಹೊಂದಿರುವ ಪ್ರಮುಖ ಪ್ರವಾಸಿ ಕೇಂದ್ರವಾಗಿದೆ. ಆದರೂ, ಉಪ ನಿರ್ದೇಶಕರ ಹುದ್ದೆ ಹಲವಾರು ತಿಂಗಳುಗಳಿಂದ ಖಾಲಿಯಾಗಿದೆ, ಇದು ಸರಿಯಾದ ನಿಯಂತ್ರಣಕ್ಕೆ ಅಡ್ಡಿಯಾಗಿದೆ. ಸಂದರ್ಶಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪೊಲೀಸ್ ಕ್ರಮ ಸೇರಿದಂತೆ ಅಕ್ರಮ ಹೋಂಸ್ಟೇಗಳ ವಿರುದ್ಧ ಕಠಿಣ ಜಾರಿ ಅತ್ಯಗತ್ಯ ಎಂದು ಅವರು ಒತ್ತಿ ಹೇಳಿದರು.

2,470 ಹೋಂಸ್ಟೇಗಳು ಅಧಿಕೃತವಾಗಿ ನೋಂದಾಯಿಸಲ್ಪಟ್ಟಿದ್ದರೂ, 2,000ಕ್ಕೂ ಹೆಚ್ಚು ಹೋಂಸ್ಟೇಗಳು ಅನುಮತಿಯಿಲ್ಲದೆ ಕಾರ್ಯನಿರ್ವಹಿಸುತ್ತಿವೆ ಎಂದು ಸಂಘದ ಸದಸ್ಯ ಕೆ.ಎಂ. ಕುರುಂಬಯ್ಯ ಬಹಿರಂಗಪಡಿಸಿದರು. ಬಸ್ ನಿಲ್ದಾಣಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳ ಬಳಿ ಇರುವ ದಲ್ಲಾಳಿಗಳು ಪ್ರವಾಸಿಗರನ್ನು ದಾರಿ ತಪ್ಪಿಸುತ್ತಿದ್ದಾರೆ. ಕುಟ್ಟಾದ ದೇವಿ ವಿಲ್ಲಾ ಹೋಂಸ್ಟೇಯಲ್ಲಿ ಇತ್ತೀಚೆಗೆ ನಡೆದ ದಾಳಿಯನ್ನು ಖಂಡಿಸಿದ ಗಣೇಶ್, ಈ ಸೌಲಭ್ಯವನ್ನು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಲಾಗಿದೆ. ಪ್ರಕರಣವು ಇನ್ನೂ ತನಿಖೆಯಲ್ಲಿರುವ ಕಾರಣ, ಉಪ ಆಯುಕ್ತರು ಪರವಾನಗಿಯನ್ನು ರದ್ದುಗೊಳಿಸುವ ಬದಲು ಅದನ್ನು ಅಮಾನತುಗೊಳಿಸಬಹುದಿತ್ತು ಎಂದು ವಾದಿಸಿದರು.

ಕೊಡಗು ಎಸ್ಪಿ ಕೆ. ಬಿಂದು ಮಣಿ ಅವರು ಪ್ರವಾಸಿಗರ ಸುರಕ್ಷತಾ ಪ್ರೋಟೋಕಾಲ್‌ಗಳನ್ನು ಬಲಪಡಿಸಲು ಹೋಟೆಲ್‌ಗಳು, ರೆಸಾರ್ಟ್‌ಗಳು, ಹೋಂಸ್ಟೇಗಳು ಮತ್ತು ಟ್ರಾವೆಲ್ ಏಜೆನ್ಸಿಗಳ ಮಾಲೀಕರೊಂದಿಗೆ ಸಭೆ ನಡೆಸಿದರು. ಎಸ್‌ಪಿ ಮಾಲೀಕರಿಗೆ ಕಾನೂನನ್ನು ಪಾಲಿಸುವಂತೆ ಸೂಚಿಸಿದರು ಮತ್ತು ಅವರ ಆವರಣದಲ್ಲಿ ಯಾವುದೇ ಕಾನೂನುಬಾಹಿರ ಅಥವಾ ಕ್ರಿಮಿನಲ್ ಚಟುವಟಿಕೆಗೆ ಅವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಸಿದರು.

# ಸಾಮಾನ್ಯನ ಮದುವೆ ಆಮಂತ್ರಣಕ್ಕೆ ಸ್ಪಂದಿಸಿದ ಪ್ರಧಾನಿ ಮೋದಿ



**ರಾಯಚೂರು, ಏ. 27:** ಜಿಲ್ಲೆಯ ರಾಜೇಶ್ ನಾಯಕ್ ಎಂಬ ಯುವಕನ ಮದುವೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಶುಭಾಶಯ ಪತ್ರ ಕಳುಹಿಸಿದ್ದಾರೆ. ಸಾಮಾನ್ಯ ಪ್ರಜೆಯ ಆಹ್ವಾನಕ್ಕೆ ಸ್ಪಂದಿಸಿದ ಪ್ರಧಾನಿಗಳ ನಡೆಗೆ ವಧೂವರರ ಕುಟುಂಬದವರು ಕೃತಜ್ಞತೆ ವ್ಯಕ್ತಪಡಿಸಿದ್ದು, ಜಿಲ್ಲೆಯಾದ್ಯಂತ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ. ನವಜೋಡಿಯ ಸಂತಸಕ್ಕೆ ಪಾರವೇ ಇಲ್ಲದಂತಾಗಿದೆ. ಹೌದು ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಕಾನಿಹಾಳ ಗ್ರಾಮದ ರಾಜೇಶ್ ನಾಯಕ್ ಅವರು ಪ್ರಧಾನಿ ಮೋದಿಗೆ ಮದುವೆ ಆಹ್ವಾನ ಪತ್ರಿಕೆ ಕಳುಹಿಸಿದ್ದರು. ಈಗ ಪ್ರಧಾನಿ ಕಚೇರಿಯಿಂದ ನವದಂಪತಿಗೆ ಶುಭಾಶಯ ಪತ್ರ ಬಂದಿದೆ. ಪ್ರತಿಯಾಗಿ ಶುಭಾಶಯ ಬರಬಹುದು ಎನ್ನುವ ನಿರೀಕ್ಷೆಯಲ್ಲೇ ಲಗ್ನಪತ್ರಿಕೆಯನ್ನು ಪೋಸ್ಟ್ ಮಾಡಿ, ಪ್ರಧಾನಿ ಮೋದಿ ಅವರಿಗೆ ಆಹ್ವಾನ ನೀಡಿದ್ದರು. ಪತ್ರದಲ್ಲಿ ನಿಮ್ಮ ವಿವಾಹ ಮಹೋತ್ಸವಕ್ಕೆ ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು. ಜೀವನದ ಈ ಶುಭ ಸಂದರ್ಭಕ್ಕೆ ಕಾಲಿಡುತ್ತಿರುವ ನಿಮಗೆ ಮತ್ತು ಸವಿತಾ ಅವರಿಗೆ ಸುಂದರ ಭವಿಷ್ಯಕ್ಕಾಗಿ ಶುಭಾಶೀರ್ವಾದಗಳು. ನಿಮ್ಮಿಬ್ಬರ ಹೃದಯ, ಮನಸ್ಸು ಮತ್ತು ಕ್ರಿಯೆಗಳು ಒಂದಾಗಿರಲಿ. ಜೀವನದ ಏರಿಳಿತಗಳಲ್ಲಿ ಪರಸ್ಪರ ಕೈಹಿಡಿದು, ಕನಸುಗಳನ್ನು ಸಾಕಾರಗೊಳಿಸುತ್ತಾ, ಜವಾಬ್ದಾರಿಗಳನ್ನು ಪ್ರೀತಿಯಿಂದ ನಿಭಾಯಿಸಿ. ಪರಸ್ಪರರ ದೋಷಗಳನ್ನು ಒಪ್ಪಿಕೊಂಡು, ಗುಣಗಳನ್ನು ಗೌರವಿಸುತ್ತಾ ಆದರ್ಶ ದಂಪತಿಗಳಾಗಿ ಬಾಳಿ. ನಿಮ್ಮ ದಾಂಪತ್ಯ ಜೀವನ ಸುದೀರ್ಘ, ಸುಖಮಯ ಮತ್ತು ಸುಂದರವಾಗಿರಲಿ ಎಂದು ಹಾರೈಸಿದ್ದಾರೆ.


# ಅಪಘಾತದಲ್ಲಿ ಗಾಯಗೊಂಡಿದ್ದವರಿಗೆ ಚಿಕಿತ್ಸೆ ಕೊಡಿಸಿ ಮಾನವೀಯತೆ ಮೆರೆದ ಶಾಸಕಿ ನಯನಾ ಮೋಟಮ್ಮ

**ಚಿಕ್ಕಮಗಳೂರು, ಏ.27:** ಜಿಲ್ಲೆಯ ಮೂಡಿಗೆರೆ ತಾಲೂಕಿನ ನಿಡುವಾಳೆ ಬಳಿ ಸಂಭವಿಸಿದ ಭೀಕರ ಕಾರು ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರು ಯುವಕರ ಜೀವ ಉಳಿಸಲು ಶಾಸಕಿ ನಯನಾ ಮೋಟಮ್ಮ ಅವರು ಸಮಯಪ್ರಜ್ಞೆ ಮೆರೆದು ಮಾನವೀಯತೆ ಪ್ರದರ್ಶಿಸಿದ್ದಾರೆ.

ನಿಯಂತ್ರಣ ತಪ್ಪಿದ ಕಾರೊಂದು ರಸ್ತೆ ಪಕ್ಕದ ಮರಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತ್ತು. ಡಿಕ್ಕಿಯ ತೀವ್ರತೆಗೆ ಕಾರಿನಲ್ಲಿದ್ದ ಇಬ್ಬರು ಯುವಕರು ತೀವ್ರ ರಕ್ತಸ್ರಾವಕ್ಕೊಳಗಾಗಿ ಸಾವು–ಬದುಕಿನ ನಡುವೆ ಹೋರಾಡುತ್ತಿದ್ದರು. ಇದೇ ವೇಳೆ ಹೊರನಾಡಿನಿಂದ ಮೂಡಿಗೆರೆ ಕಡೆಗೆ ಪ್ರಯಾಣಿಸುತ್ತಿದ್ದ ಶಾಸಕಿ ನಯನಾ ಮೋಟಮ್ಮ ಅವರು ಕೂಡಲೇ ವಾಹನ ನಿಲ್ಲಿಸಿ, ಒಂದು ಕ್ಷಣವೂ ತಡಮಾಡದೆ ತಮ ಅಂಗರಕ್ಷಕರ ಸಹಾಯದಿಂದ ಗಾಯಾಳುಗಳನ್ನು ತಮ್ಮದೇ ಕಾರಿನಲ್ಲಿ ಕೂರಿಸಿಕೊಂಡು ಬಣಕಲ್‌ನ ಕೃಷ್ಣ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದ್ದಾರೆ. ಗಾಯಾಳುಗಳ ಸ್ಥಿತಿ ಚಿಂತಾಜನಕವಾಗಿದ್ದರಿಂದ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಮಂಗಳೂರಿನ ಆಸ್ಪತ್ರೆಗೆ ರವಾನಿಸಲಾಗಿದೆ. ಸಂಕಷ್ಟದ ಸಮಯದಲ್ಲಿ ಶಾಸಕಿ ತೋರಿದ ಸಮಯಪ್ರಜ್ಞೆ ಮತ್ತು ಮಾನವೀಯ ಗುಣಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ.

# ಬಸವ ಜಯಂತಿ: 2 ಸಾವಿರ ಜನರಿಂದ ಇಷ್ಟಲಿಂಗ ಪೂಜೆ

## ಬಸವಣ್ಣನ ವಿಚಾರಧಾರೆ ಅರಿತರೆ ಮಾತ್ರ ನಿಜಾಚರಣೆ ಸಾಧ್ಯ: ಈಶ್ವರ ಖಂಡ್ರೆ



ಕಲಬುರಗಿ ಜಿಲ್ಲೆಯ ಸೇಡಂ ನಗರದ ಮಾತೃಛಾಯ ಕಾಲೇಜು ಮೈದಾನದಲ್ಲಿ ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ಬಸವ ಜಯಂತೋತ್ಸವ ಸಮಿತಿ ಜಂಟಿಯಾಗಿ ಆಯೋಜಿಸಿದ ಬಸವ ಜಯಂತಿ ನಿಮಿತ್ತ ಸಾಮೂಹಿಕ ಲಿಂಗಪೂಜೆ ಹಾಗೂ ಧರ್ಮಸಭೆಯಲ್ಲಿ ಅಖಿಲ ಭಾರತ ವೀರರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರೂ ಆದ ಸಚಿವ ಈಶ್ವರ ಖಂಡ್ರೆ ಮಾತನಾಡಿದರು. ಸಚಿವ ಡಾ.ಶರಣಪ್ರಕಾಶ ಅವರೂ ಇದ್ದರು.

**ಕಲಬುರಗಿ, ಏ. 27:** ಬಸವಣ್ಣನವರನ್ನು ಕೇವಲ ಜಯಂತಿ ಆಚರಣೆಗೆ ಸೀಮಿತಗೊಳಿಸಬಾರದು. ಅವರ ವಿಚಾರಧಾರೆ ನಾವೆಲ್ಲರು ಅರಿಯಬೇಕಾಗಿದೆ ಎಂದು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸೇಡಂ ನಗರದ ಮಾತೃಛಾಯ ಕಾಲೇಜು ಮೈದಾನದಲ್ಲಿ ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ಬಸವ ಜಯಂತೋತ್ಸವ ಸಮಿತಿ ಜಂಟಿಯಾಗಿ ಆಯೋಜಿಸಿದ ಬಸವ ಜಯಂತಿ ನಿಮಿತ್ತ ಸಾಮೂಹಿಕ ಲಿಂಗಪೂಜೆ ಹಾಗೂ ಧರ್ಮಸಭೆಯಲ್ಲಿ ಭಾಗವಹಿಸಿದ ಅವರು ಮಾತನಾಡಿ, ಸಮಾಜದಲ್ಲಿನ ಪ್ರತಿಯೊಬ್ಬರು ಧರ್ಮದ ಇತಿಹಾಸ ಅರಿತುಕೊಳ್ಳುವದು ಅವಶ್ಯವಾಗಿದ್ದು ನಮ್ಮ ಸಂಸ್ಕೃತಿ ಅರಿತಾಗ ಮಾತ್ರ ನಾವು ಯಶಸ್ವಿ ಜೀವನ ಕಟ್ಟಿಕೊಳ್ಳಲು ಸಾಧ್ಯವಾಗಲಿದೆ ಎಂದರು. ಹಿಂದೆ ಸಮಾಜದಲ್ಲಿ ಅಂಧಕಾರ, ಮೌಢ್ಯ, ಅಸ್ಪೃಶ್ಯತೆ ಇತ್ತು, ಅದನ್ನು ತೊಡೆದುಹಾಕಲು 12ನೇ ಶತಮಾನದಲ್ಲಿ ಬಸವಣ್ಣನವರು ಅವಿರತವಾಗಿ ಶ್ರಮಿಸಿದರು. ಕಲ್ಯಾಣದಲ್ಲಿನ ಅನುಭವ ಮಂಟಪಕ್ಕೆ 770 ಶರಣರನ್ನು ಕರೆತಂದು ಸಮಾನತೆಗಾಗಿ ವಚನ ಕ್ರಾಂತಿ ಮಾಡಿದ್ದರು. ಅಂತಹ ಮಹಾನ ವ್ಯಕ್ತಿಯ ಜಯಂತಿಯನ್ನು ಸೇಡಂ ಜನತೆ ಸಾವಿರಾರು ಸಂಖ್ಯೆಯಲ್ಲಿ ಸೇರುವ ಮೂಲಕ ಸಾಮೂಹಿಕ ಲಿಂಗಪೂಜೆ ಮಾಡಿರುವದು ಅವಿಸ್ಮರಣೀಯ ವಾಗಿಸಿದೆ ಎಂದು ಶ್ಲಾಘಿಸಿದ ಅವರು, ದೇಶದಲ್ಲಿ ಸರ್ವ ಜನರೊಂದಿಗೆ ಉತ್ತಮವಾಗಿ ಇದ್ದು ಕೊಂಡು ಸಾಮಾಜಿಕ ನ್ಯಾಯ ಕೊಟ್ಟಿರುವದು ವೀರಶೈವ ಲಿಂಗಾಯತ ಸಮಾಜ ಎಂದರು.

ಮಾಜಿ ಸಂಸದ ಬಸವರಾಜ ಪಾಟೀಲ್ ಸೇಡಂ ಮಾತನಾಡಿದರು. ಮಾಜಿ ಉಪಸಭಾಪತಿ ಚಂದ್ರಶೇಖರರೆಡ್ಡಿ ದೇಶಮುಖ ಮದನಾ, ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ, ಮಹಾಸಭಾದ ಜಿಲ್ಲಾಧ್ಯಕ್ಷ ಶರಣಕುಮಾರ ಮೋದಿ, ವೀರಶೈವ ಲಿಂಗಾಯತ ಶೈಕ್ಷಣಿಕ ಹಾಗೂ ಕಲ್ಯಾಣ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಶಿವಯ್ಯಸ್ವಾಮಿ ಬಿಬ್ಬಳ್ಳಿ, ಮಹಾತ್ಮ ಬಸವೇಶ್ವರ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಶಿವಕುಮಾರ ಪಾಟೀಲ್ ತೆಲ್ಕೂರ, ವೀರಶೈವ ಮಹಿಳಾ ಫೌಂಡೇಶನ್ ಅಧ್ಯಕ್ಷೆ ಚನ್ನಮ್ಮ ಪಾಟೀಲ್, ಉತ್ಸವ ಸಮಿತಿ ಅಧ್ಯಕ್ಷ ಸಿದ್ದಣ್ಣಗೌಡ ಶೆಟ್ಟಿ, ಡಾ.ಭಾಗ್ಯಶ್ರೀ ಪಾಟೀಲ್, ಸಂತೋಷಿರಾಣಿ ಪಾಟೀಲ್ ತೆಲ್ಕೂರ ಭಾಗವಹಿಸಿದ್ದರು. ಮಹಾಸಭಾದ ತಾಲೂಕು ಅಧ್ಯಕ್ಷ ರಾಜಶೇಖರ ನೀಲಂಗಿ ಅಧ್ಯಕ್ಷತೆ ವಹಿಸಿದ್ದರು. ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ನಂತರ ಪ್ರಥಮ ಬಾರಿಗೆ ಆಗಮಿಸಿದ ಈಶ್ವರ ಖಂಡ್ರೆ ಅವರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು.

ಇದಕ್ಕು ಮೊದಲು ಯುವ ಘಟಕದಿಂದ ಬಸವ ಮುತ್ಥಳಿಯೊಂದಿಗೆ ಬಸವೇಶ್ವರ ವೃತದಿಂದ ಶ್ರೀ ಕೊತ್ತಲ ಬಸವೇಶ್ವರ ದೇವಾಲಯದವರೆಗೆ ಕಾರ್ ಮತ್ತು ಬೈಕ್ ರ್‍ಯಾಲಿ ನಡೆಸಲಾಯಿತು. ಸಂಗಣ್ಣ ಅಲ್ದಿ ಸ್ವಾಗತಿಸಿದರು. ವೀರೇಶ ಹೂಗಾರ ಕಾರ್ಯಕ್ರಮ ನಿರೂಪಣೆ ಮಾಡಿ, ವಂದಿಸಿದರು.



ಕಲಬುರಗಿ ಜಿಲ್ಲೆಯ ಸೇಡಂ ನಗರದಲ್ಲಿ ಆಯೋಜಿಸಿದ ಬಸವ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಎರಡು ಸಾವಿರ ಬಸವಭಕ್ತರು ಸಾಮೂಹಿಕ ಇಷ್ಟಲಿಂಗ ಪೂಜೆ ನೆರವೇರಿಸಿದರು.

### ಮುಂದಿನ ವರ್ಷ ಅನುಭವ ಮಂಟಪ ಲೋಕಾರ್ಪಣೆ

ಮುಂದಿನ ವರ್ಷದಲ್ಲಿ ಬರುವ ಬಸವ ಜಯಂತಿವರೆಗೆ 742ಕೋಟಿ ವೆಚ್ಚದಲ್ಲಿ ಬಸವಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಅನುಭವ ಮಂಟಪವನ್ನು ಲೋಕಾರ್ಪಣೆಗೊಳಿಸಲಾಗುವದು. ಅಲ್ಲಿನ 770 ಕಂಬಗಳಿಗೆ ಶರಣರ ಹೆಸರನ್ನು ಹಾಕಿಸುವ ಮೂಲಕ ಇತಿಹಾಸ ಮರುಸ್ಥಾಪಿಸುವ ಕೆಲಸ ಮಾಡಲಾಗುತ್ತಿದೆ. ಇದರೊಟ್ಟಿಗೆ ಇಷ್ಟಲಿಂಗ ಪೂಜಾ ತರಬೇತಿ ಕೇಂದ್ರವು ಅಲ್ಲಿ ಆರಂಭಿಸಲಾಗುತ್ತಿದೆ.

– ಈಶ್ವರ ಖಂಡ್ರೆ, ರಾಷ್ಟ್ರೀಯ ಅಧ್ಯಕ್ಷರು,
ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ.

### ಅರ್ಥಪೂರ್ಣ ಕಾರ್ಯಕ್ರಮ

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಮಾತನಾಡಿ, ಇದೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ. ಇಂದಿನ ಸಮಾಜದಲ್ಲಿ ಜಾತಿಯ ಭೇದವಿಲ್ಲದೆ ಮನುಷ್ಯನಿಗೆ ಇಷ್ಟಲಿಂಗ ಪೂಜೆಯ ಅವಶ್ಯಕತೆ ಇದೆ. 12ನೇ ಶತಮಾನದಲ್ಲಿನ ವೈಚಾರಿಕ ಕ್ರಾಂತಿ ಸಾಮಾನ್ಯವಾದುದಲ್ಲ, ನುಡಿದಂತೆ ನಡೆದ ಸತ್ಯದ ಶರಣರು ಅನುಭವ ಮಂಟಪದ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದರು. ಅಲ್ಲದೆ ಸಕಲ ಜೀವಾತ್ಮಕ್ಕೆ ಲೇಸನ್ನೆ ಬಯಸಿದವರು. ಸರ್ವರ ಸಹಮತದಿಂದ ಹೊರ ಹೊಮ್ಮಿರುವ ವಚನ ಸಾಹಿತ್ಯ ಸಮಾಜ ತಿದ್ದುವ ಶಕ್ತಿ ಹೊಂದಿದೆ ಎಂದು ತಿಳಿಸಿದರು.

# ಹವಾಮಾನ ಬದಲಾವಣೆಯ ಕ್ರಿಯಾಸಮಿತಿ ಯೋಜನೆ ತರಬೇತಿ




ಕಲಬುರಗಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಪಂ ಮುಖ್ಯ ಯೋಜನಾಧಿಕಾರಿ ಎಸ್.ಎಸ್.ಮಠಪತಿ ಅವರು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ವತಿಯಿಂದ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಕ್ರಿಯಾ ಯೋಜನೆ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

**ಕಲಬುರಗಿ, ಏ. 27:** ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪಿ) ವತಿಯಿಂದ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆ ಕುರಿತ ತರಬೇತಿ ಕಾರ್ಯಕ್ರಮವನ್ನು ಪಂಚಾಯತ್ ಸಭಾಂಗಣದಲ್ಲಿ (ಪ್ರಸ್ತುತ ಕೃಷಿ ಇಲಾಖೆಯ ಸಭಾಂಗಣ) ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಕಲಬುರಗಿ ಮುಖ್ಯ ಯೋಜನಾಧಿಕಾರಿ ಎಸ್.ಎಸ್. ಮಠಪತಿ ಉದ್ಘಾಟಿಸಿ, ಹವಾಮಾನ ಬದಲಾವಣೆ ಯನ್ನು ತಡೆಗಟ್ಟುವಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಪಾತ್ರ ಅತ್ಯಂತ ಮಹತ್ವ ದ್ದಾಗಿದೆ ಎಂದು ಹೇಳಿದರು. ಜಿಲ್ಲೆಯಲ್ಲಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಎಂಪ್ರಿ ಸಂಸ್ಥೆಯ ಸಂಶೋಧನಾ ವಿಜ್ಞಾನಿ ಡಾ. ಪವಿತ್ರಾ ಪಿ. ನಾಯಕ್ ಕರ್ನಾಟಕ ರಾಜ್ಯ ಹವಾಮಾನ ಕ್ರಿಯಾ ಯೋಜನೆಯ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು. ಜಲಸಂಪನ್ಮೂಲ ಇಲಾಖೆಯ ಸಹಾಯ ಅಭಿಯಂತರ ತೇಜಸ್‌ಕುಮಾರ್ ಅವರು ಜಲ ವಲಯಕ್ಕೆ ಸಂಬಂಧಿಸಿದ ಹವಾಮಾನ ಕ್ರಿಯಾ ಚೌಕಟ್ಟಿನ ಕುರಿತು ವಿವರಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಸುಮಾರು 50 ಮಂದಿ ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಶಿಕ್ಷಣ ಸಂಸ್ಥೆಗಳ ಸದಸ್ಯರು ಭಾಗವಹಿಸಿದ್ದರು. ಕಾರ್ಯಕ್ರಮದ ಯಶಸ್ಸಿಗೆ ಎನ್.ಆರ್.ಡಿ.ಎಂ.ಎಸ್ ಅಧಿಕಾರಿ ಭೀಮಸೇನ್ ಹಾಗೂ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ವಿಜಯ್ ಕುಮಾರ್ ಸಹಕಾರ ನೀಡಿದರು. ಎಂಪ್ರಿ ಸಂಸ್ಥೆಯ ರಾಘವೇಂದ್ರ ಎನ್. ಹಾಗೂ ಸಂಶೋಧನಾ ಸಹಾಯಕಿ ಹೇಮಾ ಕಾರ್ಯಕ್ರಮದ ನಿರ್ವಹಣೆಯಲ್ಲಿ ಸಹಕರಿಸಿದರು.

# ಸೀತಾರಾಮ ದೊಡ್ಡ ಆಂಜನೇಯಸ್ವಾಮಿ ರಥೋತ್ಸವ



ಬಳ್ಳಾರಿ ಏ 27: ತಾಲೂಕಿನ ಕುಡಿತಿನಿ ಪಟ್ಟಣದ ಸೀತಾರಾಮ ದೇವರ ಹಾಗೂ ದೊಡ್ಡ ಆಂಜನೇಯಸ್ವಾಮಿ ದೇವರ ರಥೋತ್ಸವ ಭಾನುವಾರ ಸಂಜೆ ಸಡಗರ ಸಂಭ್ರಮದಿಂದ ಜರುಗಿತು.

ದೇವಾಲಯದಲ್ಲಿ ಮೂರ್ತಿಗಳಿಗೆ ಪಂಚಾಮೃತ ಅಭಿಷೇಕ, ಹವನ. ಹಾಗೂ ಸೀತಾರಾಮ ಕಲ್ಯಾಣೋತ್ಸವ ಜರುಗಿತು. ನೂರಾರು ಭಕ್ತರು ಹರಕೆ ಸಲ್ಲಿಸುವುದು ಕಂಡುಬಂತು.

ಸುತ್ತ ಮುತ್ತಲಿನ ಗ್ರಾಮಗಳಾದ ಹೊರಗಿನದೋಣಿ, ತಿಮ್ಮಲಾಪುರ, ಏಳುಬೆಂಚಿ, ತೋರಣಗಲ್ಲು, ತಾಳೂರು ಸೇರಿದಂತೆ ಹಲವು ಹಳ್ಳಿಗಳ ಭಕ್ತ ಜನಸ್ತೋಮ ಭಾಗಿಯಾಗಿದ್ದರು.

# ಗೋ ಸಂರಕ್ಷಣೆ ಕೇವಲ ಧಾರ್ಮಿಕ ಭಾವನೆಗೆ ಸೀಮಿತವಲ್ಲ, ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ರಕ್ಷಣೆ- ಮಾಜಿ ಶಾಸಕ ಸೋಮಶೇಖರರೆಡ್ಡಿ



ಬಳ್ಳಾರಿ ಏ.27: ಗೋಹತ್ಯೆ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಹಾಗೂ ಗೋವಿನ ರಕ್ಷಣೆಗೆ ಸರ್ಕಾರಗಳು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಹಿಂದುಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪಾದಯಾತ್ರೆ ನಡೆಸಲಾಯಿತು.

ಹಿಂದೂ ಧರ್ಮದಲ್ಲಿ ಹಸುವನ್ನು ದೇವರ ಸ್ವರೂಪವಾಗಿ ಕಾಣಲಾಗುತ್ತದೆ. ಆದರೆ ವಿವಿಧೆಡೆ ಗೋಹತ್ಯೆ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಗೋಮಾತೆಯ ರಕ್ಷಣೆಗೆ ವಿಶೇಷ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಜೊತೆಗೆ ಅಕ್ರಮ ಗೋಸಾಗಣೆ ಹಾಗೂ ವಧೆ ತಡೆಯಲು ಸರ್ಕಾರಗಳು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ನಗರದ ಪ್ರಮುಖ ವೃತ್ತದಲ್ಲಿ ಸೇರಿದ್ದ ಹಿಂದುಪರ ಸಂಘಟನೆಗಳ ಕಾರ್ಯಕರ್ತರು ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದರು. ಬಳಿಕ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪಾದಯಾತ್ರೆ ನಡೆಸಿ ತಹಶೀಲ್ದಾರರ ಮೂಲಕ ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ, ಗೋ ಸಂರಕ್ಷಣೆ ಕೇವಲ ಧಾರ್ಮಿಕ ಭಾವನೆಗೆ ಸೀಮಿತವಲ್ಲ, ಅದು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ರಕ್ಷಣೆಯ ವಿಷಯವಾಗಿದೆ ಎಂದರು. ಗೋಹತ್ಯೆ ತಡೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು ಮಾತನಾಡಿ, ಗೋಶಾಲೆಗಳಿಗೆ ಹೆಚ್ಚಿನ ಸೌಲಭ್ಯ, ಅನುದಾನ ಒದಗಿಸಬೇಕು. ಗೋ ರಕ್ಷಣೆಗೆ ವಿಶೇಷ ಕಾರ್ಯಪಡೆ ರಚಿಸಿ ಅಕ್ರಮ ಚಟುವಟಿಕೆಗಳನ್ನು ತಡೆಯಬೇಕು ಎಂದು ಒತ್ತಾಯಿಸಿದರು.

ಮನವಿಯಲ್ಲಿ ಗೋಹತ್ಯೆ ನಿಷೇಧ ಕಾಯ್ದೆಗಳನ್ನು ಕಠಿಣವಾಗಿ ಜಾರಿಗೆ ತರಬೇಕು, ಅಕ್ರಮ ಗೋಸಾಗಣೆ ತಡೆಯಬೇಕು, ಗೋಶಾಲೆಗಳಿಗೆ ನೆರವು ಹೆಚ್ಚಿಸಬೇಕು ಹಾಗೂ ಗೋರಕ್ಷಣೆಗೆ ವಿಶೇಷ ಯೋಜನೆ ರೂಪಿಸಬೇಕು ಎಂದು ಆಗ್ರಹಿಸಲಾಗಿದೆ. ಪ್ರತಿಭಟನೆಯಲ್ಲಿ ಹಿಂದುಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

# ಕಲ್ಯಾಣ ಕರ್ನಾಟಕದ ಕುರುಬ ಸಮುದಾಯದ ರಾಘವೇಂದ್ರ ಹಿಟ್ನಾಳ್‌ಗೆ ಸಚಿವ ಸ್ಥಾನ ನೀಡಿ




**ಬಳ್ಳಾರಿ, ಏ.27.** ಕಲ್ಯಾಣ ಕರ್ನಾಟಕದ ಕುರುಬ ಸಮುದಾಯದವರಾದ ಕೊಪ್ಪಳದಲ್ಲಿ ಮೂರನೇ ಬಾರಿ ಶಾಸಕರಾಗಿರುವ ರಾಘವೇಂದ್ರ ಹಿಟ್ನಾಳ್ ಗೆ ಸಚಿವ ಸ್ಥಾನ ನೀಡಿ ಎಂದು ಬಳ್ಳಾರಿ ಜಿಲ್ಲಾ ಕುರುಬ ಸಮಾಜದ ಮುಖಂಡರು ಕಾಂಗ್ರೆಸ್ ಪಕ್ಷದ ವರಿಷ್ಠರಿಗೆ ಒತ್ತಾಯಿಸಿದ್ದಾರೆ.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಡಾ. ಗಾದಿಲಿಂಗನಗೌಡ, ಅವರು ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ. ನಾವು ಶೇ.90 ರಷ್ಟು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೂ. ನಮ್ಮ ಸಮಾಜಕ್ಕೆ ನ್ಯಾಯಯುತವಾದ ಸ್ಥಾನಮಾನ ದೊರೆಯುತ್ತಿಲ್ಲ ಎಂದು ಆರೋಪಿಸಿದರು.

ಡಿಸಿಸಿ ಅಧ್ಯಕ್ಷರಾಗಿಲ್ಲ. ಜಿಪಂ ಅಧ್ಯಕ್ಷರಾಗಿಲ್ಲ. ಆದರೂ ಈವರೆಗೆ ಸುಮ್ಮನಿರುವುದು ಏಕೆಂದರೆ, ನಮ್ಮ ಸಮಾಜದವರೇ ಸಿಎಂ ಇದ್ದಾರೆಂಬ ಕಾರಣಕ್ಕೆ. ನೀಡುತ್ತಿಲ್ಲ.ಈ ಹಿಂದೆ ಬಳ್ಳಾರಿ ಜಿಲ್ಲೆಯಿಂದ ಹಡಗಲಿಯ ಈ.ಟಿ.ಶಂಬುನಾಥ ಅವರಿಗೆ ಟಿಕಿಟ್ ನೀಡಿ, ಸಚಿವ ಸ್ಥಾನ ನೀಡಿದ್ದು ಬಿಟ್ಟರೆ ನಂತರ ನಮಗೆ ಟಿಕೆಟ್ ನೀಡಿಲ್ಲ.

ಈಗ ನಮ್ಮಬೇಡಿಕೆ ಎಂದರೆ ಕಲ್ಯಾಣ ಕರ್ನಾಟಕದ ಭಾಗಕ್ಕೆ ಒತ್ತುನೀಡಿ. ಸಂಪುಟ ಪುನರ್ ರಚನೆ ಆದರೆ ನಮ್ಮ ಸಮಾಜದವರಾದ ಕೊಪ್ಪಳದ ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೆ ಸಚಿವ ಸ್ಥಾನ ನೀಡಬೇಕು. ಜೊತೆಗೆ ಒಂದು ಎಂಎಲ್‌ಸಿ ಸ್ಥಾನವನ್ನು ನಮ್ಮ ಸಮಾಜದವರಿಗೆ ನೀಡಬೇಕು. ಜೊತೆಗೆ ನಿಗಮ ಮಂಡಳಿಯಲ್ಲೂ ಪಕ್ಷದಲ್ಲಿ ಸಕ್ರೀಯವಾಗಿರುವವ ಇಬ್ಬರಿಗೆ ನೀಡಿ,ಅದರಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆಯನ್ನು ನೀಡಿ ಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ಬೇಣಕಲ್ ಬಸವರಾಜ್ ಗೌಡ, ಬಿ.ಕೆ.ಕೆರಕೋಡಪ್ಪ, ದಮ್ಮೂರು ಸೋಮಪ್ಪ, ಕೆ.ಹೊನ್ನಪ್ಪ, ಗಾದಿಲಿಂಗನಗೌಡ, ಚನ್ನಬಸವರಾಜ್, ಕುಡುತಿನಿ ರಾಮಾಂಜನೇಯ, ಉಮಾಪತಿ, ಓಂಕಾರಪ್ಪ ಗುರುಪಾದ ಮೊದಲಾದವರು ಇದ್ದರು.

# ಕ್ಷೇತ್ರ ವಿಂಗಡಣೆ ಜೊತೆ ಮಹಿಳಾ ಮೀಸಲಾತಿ ಸೇರಿಸಿದ್ದಕ್ಕೆ ಕಾಂಗ್ರೆಸ್ ವಿರೋಧ: ಅನ್ನಪೂರ್ಣ



**ಬಳ್ಳಾರಿ, ಏ.27:** ಸಂಸತ್ ನಲ್ಲಿ ಶೇ 33 ಮಹಿಳಾ ಮೀಸಲಾತಿ ಬಿಲ್ 2023 ರಲ್ಲಿಯೇ ಸಂಸತ್ ನಲ್ಲಿ ಪಾಸ್‌ಆಗಿದೆ. ನಂತರ ಅದನ್ನು ಜಾರಿಗೆ ತರದೇ ಈಗ ತರಾ ತುರಿಯಲ್ಲಿ ಕ್ಷೇತ್ರ ಮರುವಿಂಗಡಣೆ ಜೊತೆಗೆ ಈ ಬಿಲ್ ತಿದ್ದುಪಡಿಗೆ ತಂದಿದ್ದರಿಂದ ಕಾಂಗ್ರೆಸ್ ಹಾಗು ಮಿತ್ರ ಪಕ್ಷಗಳು ವಿರೋಧ ಮಾಡಿದೆಂದು ಸಂಡೂರು ಶಾಸಕಿ ಅನ್ನಪೂರ್ಣ ತುಕಾರಾಂ ಹೇಳಿದ್ದಾರೆ.

ಅವರು ನಗರದಲ್ಲಿನ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಸುದ್ದಿಗೋಷ್ಟಿ ನಡೆಸಿ ಮಾತನಾಡುತ್ತಿದ್ದರು.

ಜನಸಂಖ್ಯಾ ಆಧಾರದ ಮೇಲೆ ಮೀಸಲಾತಿ ತರವ ಹುನ್ನಾರ ಬಿಜೆಪಿಯರದ್ದಾಗಿತ್ತು. ಅದು ಆದರೆ ಉತ್ತರ ಭಾರತದಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಿ, ದಕ್ಷಿಣ ಭಾರತದವರಿಗೆ ಅನ್ಯಾಯವಾಗುತ್ತಿತ್ತು ಅದಕ್ಕೆ ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿದೆ ಎಂದು ಸಮರ್ಥಿಸಿಕೊಂಡರು.

ಈ ಹಿಂದೆ 2014 ರಲ್ಲಿಯೇ ಅಧಿಕಾರಕ್ಕೆ ಬಂದ ಎನ್ ಡಿಎ ಕೂಟ ಈ ವರೆಗೆ ಯಾಕೆ ಮಹಿಳಾ ಮೀಸಲಾತಿಯನ್ನು ತರಲಿಲ್ಲ. ಹೀಗ ಯಾಕೆ ಏಕಾ ಏಕಿ ಮಹಿಳೆಯರ ಮೇಲೆ ಪ್ರೀತಿ ಹೆಚ್ಚಾಯ್ತು ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಟಿಯಲ್ಲಿ, ಜಿಲ್ಲಾ ಅಧ್ಯಕ್ಷೆ ಮಂಜುಳಾ, ನಾಗಮಣಿ ಜಿಂಕಲ್ , ಆಶಾಲತಾ ಸೋಮಪ್ಪ, ರಾಜೇಶ್ವರಿ, ಕಮಲ ಮರಿಸ್ವಾಮಿ, ಮಂಜುಳ, ಶಮೀಮ್ ಜಕ್ಲಿ ಮೊದಲಾದವರು ಇದ್ದರು.

# ಡಾ.ರಾಜಕುಮಾರ್ ಅಂದರೆ ಕನ್ನಡ ಅಸ್ಮಿತೆಯ ಪ್ರತೀಕ: ಶಾಸಕ ಅಲ್ಲಮಪ್ರಭು



ಕಲಬುರಗಿ, ಏ. 27: ಕನ್ನಡ ಚಿತ್ರರಂಗದ ಧ್ರುವತಾರೆ ಡಾ. ರಾಜ್‌ಕುಮಾರ್ ಅವರು ಕೇವಲ ನಟರಾಗಿರದೆ, ಕನ್ನಡ ನೆಲದ ಸಂಸ್ಕೃತಿ ಮತ್ತು ಅಸ್ಮಿತೆಯ ಪ್ರತೀಕವಾಗಿದ್ದಾರೆ ಎಂದು ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದರು.

ಕಲಬುರಗಿ ನಗರದ ಕನ್ನಡ ಭವನ ಆವರಣದ ಸುವರ್ಣ ಸಭಾ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಜಿಲ್ಲಾಡಳಿತ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಡಾ.ರಾಜಕುಮಾರ್ ಅಭಿಮಾನಿಗಳ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಡಾ. ರಾಜಕುಮಾರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಗಾಜನೂರಿನ ಸಣ್ಣ ಹಳ್ಳಿಯಿಂದ ಬಂದು ಜಗದಗಲಕ್ಕೆ ಬೆಳಗಿದ ಅಣ್ಣಾವ್ರ ಸಾಧನೆ ಇಂದಿನ ಪೀಳಿಗೆಗೆ ಮಾದರಿ ಎಂದರು.

ಭಾಷಾ ರಕ್ಷಣೆಗಾಗಿ ನಡೆದ ಗೋಕಾಕ್ ಚಳವಳಿಯ ಮುಂಚೂಣಿ ನಾಯಕರಾಗಿ ಕನ್ನಡದ ಕಿಚ್ಚನ್ನು ಮನೆಮನಗಳಲ್ಲಿ ಹಚ್ಚಿದವರು. ರಾಜ್ ಅಜರಾಮರ ಹಾಗೂ 'ಬಂಗಾರದ ಮನುಷ್ಯ' ನಂತಹ ಚಿತ್ರಗಳ ಮೂಲಕ ಜನಮನ ಗೆದ್ದ ಅವರು ನಾಡು ನುಡಿಗೆ ನೀಇಡದ ಕೊಡುಗೆ ಅನನ್ಯ. ವೀರಪ್ಪನ್ ಅಪಹರಣದಂತಹ ಕಠಿಣ ಕಾಲದಲ್ಲೂ ಅವರು ತೋರಿದ ಧೈರ್ಯ ಅಪ್ರತಿಮ ಎಂದು ತಿಳಿಸಿದರು.

ಇದಕ್ಕು ಮುನ್ನ ಡಾ.ರಾಜ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಬಿ. ಫೌಜಿಯಾ ತರುನ್ನುಮ್ ಅವರು, ಕನ್ನಡ ಚಿತ್ರರಂಗದ ಧ್ರುವತಾರೆ ಡಾ. ರಾಜಕುಮಾರ ಕೇವಲ ನಟರಲ್ಲ, ಅವರು ಕರ್ನಾಟಕದ ಅಸ್ಮಿತೆ. ರಾಜಕುಮಾರ ಅವರ ಭಾಷಾ ಪ್ರೇಮ, ಗೋಕಾಕ್ ಚಳವಳಿಯ ನೇತೃತ್ವ ಹಾಗೂ ಅವರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ ಎಂದರು.

ಚಾಮರಾಜನಗರದಲ್ಲಿ ನಾನು ಸೇವೆ ಸಲ್ಲಿಸುವಾಗ ಅವರ ಕುಟುಂಬ ಮಾಡುತ್ತಿದ್ದ ಗುಪ್ತ ದಾನ ಹಾಗೂ ಶಾಲಾ–ಕಾಲೇಜುಗಳಿಗೆ ನೀಡುತ್ತಿದ್ದ ನೆರವನ್ನು ಹತ್ತಿರದಿಂದ ಕಂಡಿದ್ದೇನೆ. ವೀರಪ್ಪನ್ ಅಪಹರಣ ಹಾಗೂ ಅವರ ನಿಧನದ ಸಂದರ್ಭದಲ್ಲಿ ಜನ ತೋರಿದ ಅಭಿಮಾನ ಅವರ ವ್ಯಕ್ತಿತ್ವಕ್ಕೆ ಸಾಕ್ಷಿ ಎಂದರು.

ಕಲಬುರಗಿ ಜಿಲ್ಲಾ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ಅವರು ಮಾತನಾಡಿ, ಸಾಂಪ್ರದಾಯಿಕ ಶಿಕ್ಷಣವಿಲ್ಲದಿದ್ದರೂ ರಂಗಭೂಮಿಯ ಮೂಲಕ ಬೆಳೆದು, ಅಭಿನಯ ಹಾಗೂ ಗಾಯನದಿಂದ ಕೋಟ್ಯಂತರ ಕನ್ನಡಿಗರ ಮನಗೆದ್ದವರು ಡಾ. ರಾಜಕುಮಾರ್. ಅವರ ಸರಳತೆ ಮತ್ತು ಕಲಾ ಸೇವೆ ಚಿತ್ರರಂಗದ ಇತಿಹಾಸದಲ್ಲಿ ಇಂದಿಗೂ ಅಜರಾಮರವಾಗಿದ್ದಾರೆ ಎಂದರು.

ರಸಮಂಜರಿಗೆ ತಲೆದೂಗಿದ ಕಲಾಭಿಮಾನಿಗಳು: ಸುಖಿ ಮೇಲೋಡಿಸ್ ತಂಡದ ಗಾಯಕರಾದ ಆನಂದ ಪಾಟೀಲ, ಕವಿತಾ ಹಿರೇಮಠ, ಅನ್ನಪೂರ್ಣ ಚವ್ಹಾಣ, ಸಾಗರ ಡಿ. ವಾಗ್ಮರೆ, ರವೀಂದ್ರ ಕುಲಕರ್ಣಿ, ಸಿದ್ರಾಮ ಹಂಚಿನಾಳ ಅವರು ರಾ.ರಾಜ್ ಕುಮಾರ್ ಅಭಿನಯದ ವಿವಿಧ ಚಲನಚಿತ್ರ ಗೀತೆಗಳ ಹಾಡುವ ಮೂಲಕ ಸಔಇಕರನ್ನು ರಂಜಿಸಿದರು. ಎರಡು ಕನಸು ಚಿತ್ರದ "ಎಂದೆಂದು ನಿನ್ನನು ಮರೆತು", "ತಮ್‌ನಮ್ ತಮ್‌ನಮ್" "ಪೂಜಿಸಲೆಂದೆ ಹೂಗಳ ತಂದೆ", ರವಿಚಂದ್ರ ಚಿತ್ರದ "ನಾ ನಿನ್ನ ಆಸೆ ಕಂಡೆ", ಗುರಿ ಚಿತ್ರದ "ಕಲ್ಲಿನ ವೀಣೆಯ ಮೀಟಿದರೇನು", ಹೊಸಬೆಳಕು ಚಿತ್ರದ "ಹೊಸಬೆಳಕು ಮೂಡುತ್ತಿದೆ", ನಾ ನಿನ್ನ ಮರೆಯಲಾರೆ ಚಿತ್ರದ "ನಾ ನಿನ್ನ ಮರೆಯಲಾರೆ", ದೇವತಾಮನುಷ್ಯ ಚಿತ್ರದ "ಹೃದಯದಲ್ಲಿ ಇದೇನಿದು" ಹೀಗೆ ಅನೇಕ ಗೀತೆಗಳು ಕಲಾಭಿಮಾನಿಗಳನ್ನು ತಲೆದೂಗಿಸಿದವು. ಕಲಾವಿದ ಮಧುಸೂಧನ ಮಲ್ಲಾಬಾದಿ ಅವರು ವಿಶೇಷವಾಗಿ ರಾಜ್ ಧ್ವನಿಯಲ್ಲಿ ಹಾಡುವ ಮೂಲಕ ಗಮನ ಸೆಳೆದರು. ಕೊನೆಗೆ "ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು" ಹಾಡಿ ಗಾಯನ ಕಾರ್ಯಕ್ರಮಕ್ಕೆ ಮಂಗಳ ಹಾಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಜಯಕುಮಾರ ತೇಗಲತಿಪ್ಪಿ, ಹಿರಿಯ ಸಾಹಿತಿ ಭೀಮಣ್ಣ ಬೋನಾಳ, ಪತ್ರಕರ್ತ ಭವಾನಿ ಸಿಂಗ್ ಸೇರಿದಂತೆ ಕಸಾಪ ಪದಾಧಿಕಾರಿಗಳು, ಸಾಹಿತಿಗಳು, ಡಾ.ರಾಜ್ ಅಭಿಮಾನಿಗಳ ಸಂಘದ ಪದಾಧಿಕಾರಿಗಳು, ಸಾರ್ವಜನಿಕರು, ವಿ.ಜಿ. ಮಹಿಳಾ ಪದವಿ ಕಾಲೇಜು ಮತ್ತು ಸಿದ್ಧಾರ್ಥ ಕಾನೂನು ಪದವಿ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.


ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಸರ್ವರನ್ನು ಸ್ವಾಗತಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಶಿವರಾಜ ಅಂಡಗಿ ನಿರೂಪಿಸಿ ವಂದಿಸಿದರು.

# ಮೊದಲು ಹಾರ್ಮುಜ್ ದಿಗ್ಬಂಧನ ತೆರವು ಮಾಡಿ, ನಂತರ ಪರಮಾಣು ಬಗ್ಗೆ ಚರ್ಚೆ

**ಟೆಹ್ರಾನ್,ಏ.27:** ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವ ಮತ್ತು ಯುದ್ಧವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಿರುವ ಇರಾನ್ ಅಮೆರಿಕಕ್ಕೆ ಹೊಸ ಪ್ರಸ್ತಾವನೆಯನ್ನು ಮುಂದಿಟ್ಟಿದೆ ಅತ್ಯಂತ ವಿವಾದಾತ್ಮಕ ವಿಷಯಗಳಲ್ಲಿ ಒಂದಾದ – ತನ್ನ ಪರಮಾಣು ಕಾರ್ಯಕ್ರಮವನ್ನು – ತಾತ್ಕಾಲಿಕವಾಗಿ ನಿಲ್ಲಿಸಿದೆ ಎಂದು ಮಾತುಕತೆಗಳ ಬಗ್ಗೆ ಪರಿಚಿತ ಅಧಿಕಾರಿಗಳು ಸೇರಿದಂತೆ. ಪಾಕಿಸ್ತಾನ ಮತ್ತು ಪ್ರಾದೇಶಿಕ ಮಧ್ಯವರ್ತಿಗಳ ಮೂಲಕ ಅಂಗೀಕರಿಸಲ್ಪಟ್ಟ ಈ ಯೋಜನೆಯು, ನಿರ್ಣಾಯಕ ಹಡಗು ಮಾರ್ಗವನ್ನು ಮತ್ತೆ ತೆರೆಯಲು ಮತ್ತು ಅಮೆರಿಕದ ನೌಕಾ ದಿಗ್ಬಂಧನವನ್ನು ಸಡಿಲಿಸಲು ಬದಲಾಗಿ ವಿಸ್ತೃತ ಕದನ ವಿರಾಮ ಅಥವಾ ಯುದ್ಧಗಳಿಗೆ ಶಾಶ್ವತ ಅಂತ್ಯವನ್ನು ಕಲ್ಪಿಸುತ್ತದೆ ಆಕ್ಸಿಯೋಸ್ ವರದಿ ಮಾಡಿದೆ.

ಯುರೇನಿಯಂ ಪುಷ್ಟೀಕರಣ ಮತ್ತು ಈರಾನ್ನ ದಾಸ್ತಾನುಗಳ ಕುರಿತು ಚರ್ಚೆಗಳು ಮತ್ತು ನಂತರದ ಸಭೆಯಲ್ಲಿ ಅದರ ಬಗ್ಗೆ ಮಾತನಾಡಿದರು. ಈರಾನ್ನೊಂದಿಗಿನ ರಾಜತಾಂತ್ರಿಕ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡರೆ, ದಿಗ್ಬಂಧನವನ್ನು ತೆಗೆದುಹಾಕುವುದು ಮತ್ತು ಯುದ್ಧವನ್ನು ಕೊನೆಗೊಳಿಸುವುದರಿಂದ ಟ್ರಂಪ್‌ಗೆ ಇರಾನ್‌ನ ಪುಷ್ಟೀಕರಣಗೊಂಡ ಯುರೇನಿಯಂ ಸಂಗ್ರಹವನ್ನು ತೆಗೆದುಹಾಕಲು ಮತ್ತು ಟೆಹ್ರಾನ್ ಪುಷ್ಟೀಕರಣವನ್ನು ಸ್ಥಗಿತಗೊಳಿಸಲು ಮನವೊಲಿಸಲು ಭವಿಷ್ಯದ ಯಾವುದೇ ಮಾತುಕತೆಗಳಲ್ಲಿ ಅಮೆರಿಕ ಅಧ್ಯಕ್ಷ ಟ್ರಂಪ್ ಎಲ್ಲಾ ಹತೋಟಿಯಿಂದ ಮುಕ್ತರಾಗುತ್ತಾರೆ – ಟ್ರಂಪ್‌ಗೆ ಎರಡು ಪ್ರಾಥಮಿಕ ಯುದ್ಧ ಉದ್ದೇಶಗಳು. ಅಮೆರಿಕದ ಹಿರಿಯ ಅಧಿಕಾರಿಗಳ ಪ್ರಕಾರ, ಅವರು ಸೋಮವಾರ ಶ್ವೇತಭವನದಲ್ಲಿ ಇರಾನ್ ಕುರಿತು ಪರಿಸ್ಥಿತಿ ಸಭೆಯನ್ನು ನಡೆಸುವ ನಿರೀಕ್ಷೆಯಿದೆ, ಅವರ ಜೊತೆಗೆ ಅವರ ಉನ್ನತ ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿ ತಂಡವೂ ಇದೆ. ಯಾವುದೇ ಒಪ್ಪಂದವು ಮೊದಲಿನಿಂದಲೂ ಪರಮಾಣು ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಯುಎಸ್ ಸ್ಪಷ್ಟಪಡಿಸಿದೆ, ಇರಾನ್ "ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಲು ಸಾಧ್ಯವಿಲ್ಲ" ಎಂದು ಟ್ರಂಪ್ ಪುನರುಚ್ಚರಿಸಿದರು ಮತ್ತು ಪ್ರಸ್ತುತ ಪ್ರಸ್ತಾಪವನ್ನು ಸಾಕಷ್ಟಿಲ್ಲ ಎಂದು ತಳ್ಳಿಹಾಕಿದರು. ಈರಾನ್ನ ತೈಲ ರಫ್ತನ್ನು ಹತ್ತಿಕ್ಕುತ್ತಿರುವ ನೌಕಾ ದಿಗ್ಬಂಧನವನ್ನು ಮುಂದುವರಿಸಲು ಬಯಸುವುದಾಗಿ ಟ್ರಂಪ್ ಭಾನುವಾರ ಫಾಕ್ಸ್ ನ್ಯೂಸ್ಗೆ ಹಿಂದಿನಿಂದ ನೀಡಿದರು ಸಂದರ್ಶನದಲ್ಲಿ ಸೂಚಿಸಲಾಯಿತು, ಇದು ಮುಂದಿನ ಕೆಲವು ವಾರಗಳಲ್ಲಿ ಟೆಹ್ರಾನ್ ಅನ್ನು ಪತನಗೊಳಿಸಲಾಗಿದೆ ಎಂದು ಭರವಸೆ ನೀಡಿದರು.

"ನಿಮ್ಮ ವ್ಯವಸ್ಥೆಯ ಮೂಲಕ ಅಪಾರ ಪ್ರಮಾಣದ ತೈಲ ಸೋರಿಕೆಯಾಗುತ್ತಿದೆ... ಯಾವುದೇ ಕಾರಣಕ್ಕಾಗಿ ಈ ಮಾರ್ಗವನ್ನು ಮುಚ್ಚಿದರೆ, ನೀವು ಅದನ್ನು ಕಂಟೇನರ್ಗಳಿಗೆ ಅಥವಾ ಹಡಗುಗಳಿಗೆ ಹಾಕಲು ಸಾಧ್ಯವಾಗದಿದ್ದರೆ... ಏನಾಗುತ್ತದೆ ಎಂದರೆ ಆ ಮಾರ್ಗವು ಒಳಗಿನಿಂದ ಸ್ಫೋಟಗೊಳ್ಳುತ್ತದೆ. ಅಮೆರಿಕದ ರಾಯಭಾರಿಗಳಾದ ಸ್ಟೀವ್ ವಿಟ್ಕಾಫ್ ಮತ್ತು ಜೆರೆಡ್ ಕುಶ್ನರ್




**■ ಅಮೆರಿಕ ಜೊತೆಗಿನ ಯುದ್ಧ ಕೊನೆಗೊಳಿಸಲು ಇರಾನ್ ಹೊಸ ಪ್ರಸ್ತಾವನೆ**

ಮತ್ತು ಇರಾನಿನ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ನಡುವಿನ ಯೋಜಿತ ಇಸ್ಲಾಮಾಬಾದ್ ಸಭೆ ಯಾವಾಗಲೂ ಕಾರ್ಯರೂಪಕ್ಕೆ ಬರದ ನಂತರ, ಟೆಹ್ರಾನ್ ಮತ್ತು ವಾಷಿಂಗ್ಟನ್ ನಡುವಿನ ರಾಜತಾಂತ್ರಿಕ ಬಿಕ್ಕಟ್ಟು ತೀವ್ರಗೊಂಡ, ಟ್ರಂಪ್ ಪ್ರವಾಸವನ್ನು ರದ್ದುಗೊಳಿಸಿದರು ಮತ್ತು ಪ್ರಸ್ತುತ ಪರಿಸ್ಥಿತಿಗಳಲ್ಲಿ ನಿಯೋಗವನ್ನು ಕಳುಹಿಸುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಹೇಳಿದರು. ಭಾನುವಾರ, ಅರಗ್ಚಿ ಮಸ್ಕತ್‌ನಲ್ಲಿ ಒಮಾನಿ ಅಧಿಕಾರಿಗಳೊಂದಿಗೆ ಹಾರ್ಮುಜ್ ಜಲಸಂಧಿಯ ಮೇಲೆ ಕೇಂದ್ರೀಕರಿಸಿದ ಮಾತುಕತೆಗಳು ಹಿಡಿದ, ನಂತರ ಎರಡನೇ ಸುತ್ತಿನ ಮಾತುಕತೆಗಾಗಿ ಇಸ್ಲಾಮಾಬಾದ್‌ಗೆ ಹಿಂತಿರುಗಿದರು.

ಸೋಮವಾರ, ಅರಗ್ಚಿ ಮಾಸ್ಕೋಗೆ ಪ್ರಯಾಣಿಸಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿ ಮಾಡುವ ನಿರೀಕ್ಷೆ ಇತ್ತು. ಅರಗ್ಚಿ ಬದಲಿಗೆ ಪ್ರಾದೇಶಿಕ ರಾಜಧಾನಿಗಳ ನಡುವೆ ಚಲಿಸುತ್ತಿದೆ. ಎ ಇಸ್ಲಾಮಾಬಾದ್ ಚರ್ಚೆಗಳ ಸಮಯದಲ್ಲಿ ಪರಮಾಣು ಸಮಸ್ಯೆ ಬದಿಗಿಡುವ ಕಲ್ಪನೆಯನ್ನು ಮೊದಲು ವಿವರವಾಗಿ ಎತ್ತಲಾಯಿತು ಎಂದು ಅಧಿಕಾರಿಗಳು ಹೇಳುತ್ತಾರೆ.

ಪಾಕಿಸ್ತಾನ, ಈಜಿಪ್ಟ್, ಟರ್ಕಿ ಮತ್ತು ಕತಾರ್‌ನ ಮಧ್ಯವರ್ತಿಗಳಿಗೆ ಟೆಹ್ರಾನ್‌ನಲ್ಲಿನ ಆಂತರಿಕ ವಿಭಾಗಗಳು ಪುಷ್ಟೀಕರಣ ಮಿತಿಗಳು ಹೆಚ್ಚು ಸಮೃದ್ಧ ಯುರೇನಿಯಂ ಅನ್ನು ತೆಗೆದುಹಾಕುವ ಬಗ್ಗೆ ಯಾವುದೇ ತಕ್ಷಣದ ಒಪ್ಪಂದವನ್ನು ಸಂಕೀರ್ಣಗೊಳಿಸಲಾಗಿದೆ ಎಂದು ತಿಳಿಸಲಾಗಿದೆ. ದಿ ವೈಟ್ ಹೌಸ್ ಈ ಪ್ರಸ್ತಾವನೆಯನ್ನು ಸ್ವೀಕರಿಸಿದೆ, ಆದರೆ ಅದನ್ನು ಪರಿಶೀಲಿಸಲು ಅದು ಸಿದ್ಧವಾಗಿದೆ ಎಂಬುದು ಸ್ಪಷ್ಟವಾಗಿಲ್ಲ.

"ಇವು ಸೂಕ್ಷ್ಮ ರಾಜತಾಂತ್ರಿಕ ಚರ್ಚೆಗಳಾಗಿದ್ದರೆ, ಅಮೆರಿಕ ಪತ್ರಿಕಾ ಮೂಲಕ ನಡೆಸುವುದಿಲ್ಲ. ಅಧ್ಯಕ್ಷರು ಹೇಳಿದಂತೆ, ಅಮೆರಿಕವು ತನ್ನ ಹಕ್ಕುಗಳನ್ನು ಕಾಯ್ದುಕೊಂಡಿದೆ ಮತ್ತು ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಲು ಎಂದಿಗೂ ಅವಕಾಶವಿಲ್ಲ ನೀಡದೆ, ಅಮೆರಿಕದ ಜನರನ್ನು ಮೊದಲು ಇರಿಸುವ ಒಪ್ಪಂದವನ್ನು ಮಾತ್ರ ಮಾಡುತ್ತದೆ" ಎಂದು ಶ್ವೇತಭವನದ ವಕ್ತಾರೆ ಒಲಿವಿಯಾ ವೇಲ್ಸ್ ಆಕ್ಸಿಯಾಸ್‌ಗೆ ವಹಿಸಲಾಗಿದೆ.

## ಮಾತುಕತೆಗಳು ಯಶಸ್ವಿಯಾಗಿ ಪುನರಾರಂಭಗೊಳ್ಳಲು ಬಯಸುವುದಿಲ್ಲ, ಮೂರು ಹಂತ ದಾಟಬೇಕಾಗಿದೆ

- **ಹಂತ 1:** ಯುದ್ಧದ ಸಂಪೂರ್ಣ ಅಂತ್ಯ ಮತ್ತು ಇರಾನ್ ಮತ್ತು ಲೆಬನಾನ್ ವಿರುದ್ಧ ಯುದ್ಧದ ಪುನರಾರಂಭವನ್ನು ತಡೆಯುವ ಭರವಸೆ.
- **ಹಂತ 2:** ಮೊದಲ ಬೇಡಿಕೆಗಳನ್ನು ಒಪ್ಪಿಕೊಳ್ಳುವುದು, ಎರಡನೇ ಹಂತದ ಪಕ್ಷಗಳು ನಿರ್ಣಾಯಕ ಸಾಗರ ಚಾಕ್ಪಾಯಿಂಟ್ ಹಾರ್ಮುಜ್ ಜಲಸಂಧಿಯ ನಿರ್ವಹಣೆ ಮತ್ತು ಆಡಳಿತದ ಬಗ್ಗೆ ಚರ್ಚಿಸುತ್ತವೆ.
- **ಹಂತ 3:** ಮೇಲಿನ ಎರಡು ಹಂತಗಳನ್ನು ದಾಟಿದ ನಂತರವೇ ಇರಾನ್ ಪರಮಾಣು ಸಮಸ್ಯೆ ಚರ್ಚಿಸುತ್ತದೆ. ಟೆಹ್ರಾನ್ ಯುರೇನಿಯಂ ಪುಷ್ಟೀಕರಣವನ್ನು ನಿಲ್ಲಿಸಬೇಕು ಮತ್ತು ಅದರ ದಾಸ್ತಾನುಗಳನ್ನು ದೇಶದಿಂದ ಹೊರಗೆ ಸ್ಥಳಾಂತರಿಸಬೇಕು ಎಂದು ಎರಡನೆಯದನ್ನು ಒತ್ತಾಯಿಸಲಾಗಿದೆ ಇದು ಪ್ರಮುಖವಾಗಿದೆ ಅಂಶವಾಗಿದೆ.

# ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ಅವರೊಂದಿಗಿನ ಸಭೆಯಲ್ಲಿ ಪುಟಿನ್: ಇರಾನ್‌ಗೆ ಸಂಪೂರ್ಣ ಬೆಂಬಲ



**ಸೇಂಟ್ ಪೀಟರ್ಸ್ಬರ್ಗ್, ಏ.27:** ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ಅವರೊಂದಿಗೆ ಮಾತನಾಡುತ್ತಾ, ಸೋಮವಾರ ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್ ನಗರದಲ್ಲಿ ಇಬ್ಬರೂ ಭೇಟಿಯಾದಾಗ, ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ಖಚಿತಪಡಿಸಿಕೊಳ್ಳಲ ು ಮಾಸ್ಕೋ ತನ್ನಿಂದ ಸಾಧ್ಯವಿರುವ ಎಲ್ಲವನ್ನೂ ಮಾಡುತ್ತದೆ ಎಂದು ಹೇಳಿದರು.

"ನಮ್ಮ ಪಾಲಿಗೆ, ನಿಮ್ಮ ಹಿತಾಸಕ್ತಿಗಳನ್ನು, ಪ್ರದೇಶದ ಎಲ್ಲಾ ಜನರ ಹಿತಾಸಕ್ತಿಗಳನ್ನು ಪೂರೈಸುವ ಎಲ್ಲವನ್ನೂ ನಾವು ಮಾಡುತ್ತೇವೆ, ಇದರಿಂದ ಸಾಧ್ಯವಾದಷ್ಟು ಬೇಗ ಶಾಂತಿ ಸಾಧಿಸಬಹುದು" ಎಂದು ರಷ್ಯಾದ ರಾಜ್ಯ ಮಾಧ್ಯಮ TASS ವರದಿ ಮಾಡಿದೆ. ಕಠಿಣ ಪಾಶ್ಚಿಮಾತ್ಯ ನಿರ್ಬಂಧಗಳಿಗೆ ಒಳಪಟ್ಟಿರುವ ಮಾಸ್ಕೋ ಮತ್ತು ಟೆಹ್ರಾನ್ ಎರಡೂ ವರ್ಷಗಳಿಂದ ನಿಕಟ ಪಾಲುದಾರರಾಗಿದ್ದು, ಮಾಸ್ಕೋ ವಿಶ್ವಸಂಸ್ಥೆಯಲ್ಲಿ ಇರಾನ್‌ಗೆ ರಾಜತಾಂತ್ರಿಕ ರಕ್ಷಣೆಯನ್ನು ಹಾಗೂ ಮಿಲಿಟರಿ ತಂತ್ರಜ್ಞಾನ ಮತ್ತು ಗುಪ್ತಚರ ಸೇವೆಯನ್ನು ಒದಗಿಸುತ್ತಿದೆ, ಆದರೆ ಟೆಹ್ರಾನ್ ಪಾಶ್ಚಿಮಾತ್ಯ ನಿರ್ಬಂಧಗಳನ್ನು ಬೈಪಾಸ್ ಮಾಡಲು ಕ್ರೆಮ್ಲಿನ್‌ಗೆ ತನ್ನ ನೆರಳು ನೌಕಾಪಡೆಗಳ ಜಾಲವನ್ನು ಮತ್ತು ಉಕ್ರೇನ್‌ನಲ್ಲಿನ ಅದರ ಯುದ್ಧಕ್ಕಾಗಿ ಆತ್ಮಹತ್ಯಾ ಡ್ರೋನ್‌ಗಳನ್ನು ಒದಗಿಸಿದೆ. ಇರಾನ್ ಮತ್ತು ಯುಎಸ್ ನಡುವೆ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸಿದ ಪಾಕಿಸ್ತಾನ ಮತ್ತು ಒಮಾನ್‌ನಲ್ಲಿ ಇತ್ತೀಚೆಗೆ ನಿಂತ ನಂತರ ಅರಗ್ಚಿ ಅವರ ರಷ್ಯಾಕ್ಕೆ ರಾಜತಾಂತ್ರಿಕ ಭೇಟಿ. ವಾಷಿಂಗ್ಟನ್ನ ಅತಿಯಾದ ಬೇಡಿಕೆಗಳು ಇಸ್ಲಾಮಾಬಾದ್ನಲ್ಲಿ ಮಾತುಕತೆಗಳು ವಿಫಲವಾಗಲು ಕಾರಣವಾಯಿತು ಎಂದು ಇರಾನಿನ ವಿದೇಶಾಂಗ ಸಚಿವರು ಈ ಹಿಂದೆ ಹೇಳಿದ್ದಾರೆ.

ಅವರ ವೈಫಲ್ಯದ ಹೊರತಾಗಿಯೂ, ಅರಘ್ಚಿ ಅವರನ್ನು ಫಲಪ್ರದ ಮತ್ತು ಉತ್ಪಾದಕ ಎಂದು ಶ್ಲಾಘಿಸಿದರು, "ನಾವು ಪಾಕಿಸ್ತಾನದಲ್ಲಿರುವ ನಮ್ಮ ಸ್ನೇಹಿತರೊಂದಿಗೆ ಉತ್ತಮ ಸಮಾಲೋಚನೆಗಳನ್ನು ನಡೆಸಿದ್ದೇವೆ. ಪ್ರವಾಸವು ಯಶಸ್ವಿಯಾಯಿತು. ನಮ್ಮ ಇತ್ತೀಚಿನ ಸಭೆಗಳ ಫಲಿತಾಂಶವನ್ನು ನಾವು ನಿರ್ಣಯಿಸಿದ್ದೇವೆ ಮತ್ತು ಯಾವ ದಿಕ್ಕಿನಲ್ಲಿ ಮತ್ತು ಯಾವ ಪರಿಸ್ಥಿತಿಗಳಲ್ಲಿ ಮಾತುಕತೆಗಳು ಮುಂದುವರಿಯಬಹುದು ಎಂಬುದನ್ನು ಚರ್ಚಿಸಿದ್ದೇವೆ" ಎಂದು ಹೇಳಿದರು. ಅವರು ಒಮಾನ್ನಲ್ಲಿ ನಡೆಸಿದ ಸಮಾಲೋಚನೆಗಳನ್ನು ಸಹ ಉಲ್ಲೇಖಿಸಿದರು. "ಒಮಾನ್ ನಮಗೆ ಹತ್ತಿರವಿರುವ ಸ್ನೇಹಪರ ದೇಶ; ಅದು ಯುದ್ಧದಲ್ಲಿ ಉತ್ತಮ ನಿಲುವನ್ನು ತೆಗೆದುಕೊಂಡಿದೆ. ನಾವು ಮತ್ತು ಒಮಾನ್ ಹಾರ್ಮುಜ್ ಜಲಸಂಧಿಯ ಎರಡು ಕರಾವಳಿ ರಾಜ್ಯಗಳು, ಆದ್ದರಿಂದ ನಾವು ಈ ವಿಷಯದ ಬಗ್ಗೆ ಸಮಾಲೋಚನೆಗಳನ್ನು ನಡೆಸಬೇಕಾಗಿತ್ತು. "ಜಲಸಂಧಿಯ ಮೂಲಕ ಹಡಗುಗಳ ಸುರಕ್ಷಿತ ಮಾರ್ಗವು ಒಂದು ಪ್ರಮುಖ ಜಾಗತಿಕ ವಿಷಯವಾಗಿದೆ ಮತ್ತು ಜಲಸಂಧಿಯನ್ನು ನಿಯಂತ್ರಿಸುವ ಎರಡು ದೇಶಗಳಾಗಿ, ನಾವು ಮತ್ತು ಒಮಾನ್ ನಮ್ಮ ಪರಸ್ಪರ ಹಿತಾಸಕ್ತಿಗಳನ್ನು ಖಚಿತಪಡಿಸಿಕೊಳ್ಳಲು ನಿಕಟ ಸಮನ್ವಯವನ್ನು ಕಾಯ್ದುಕೊಳ್ಳಬೇಕಾಗಿದೆ."

# ಝಪೋರಿಝಿಯಾ ಪರಮಾಣು ವಿದ್ಯುತ್ ಸ್ಥಾವರದ ಮೇಲೆ ಉಕ್ರೇನಿಯನ್ ದಾಳಿ ಖಂಡನೆಗೆ ರಷ್ಯಾ ಒತ್ತಾಯ, ಟೀಕೆ

**ಮಾಸ್ಕೋ/ಕೈವ್, ಏ.27:** ಮಾಸ್ಕೋದಲ್ಲಿ ಝಪೋರಿಝಿಯಾ ಪರಮಾಣು ವಿದ್ಯುತ್ ಸ್ಥಾವರದ ಮೇಲೆ "ಅಜಾಗರೂಕ ಮತ್ತು ಕ್ರಿಮಿನಲ್" ದಾಳಿ ಎಂದು ಹೇಳಲಾದ ಉಕ್ರೇನ್ ವಿರುದ್ಧ ಬಲವಾದ ಕ್ರಮ ಕೈಗೊಳ್ಳುವಂತೆ ರಷ್ಯಾ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯನ್ನು ಕೇಳಿದೆ, ಮಾಸ್ಕೋದಲ್ಲಿ ಸ್ಥಾವರದ ಮೇಲೆ ಗುರಿಯಿಟ್ಟು ದಾಳಿ ನಡೆಸಲಾಗಿದೆ ಎಂದು ಆರೋಪಿಸಿ ಉದ್ಯೋಗಿಯೊಬ್ಬರು ಸಾವನ್ನಪ್ಪಿದ ನಂತರ. ವಿದೇಶಾಂಗ ಸಚಿವಾಲಯದ ವಕ್ತಾರೆ ಮಾರಿಯಾ ಜಖರೋವಾ ಅವರು, ಯುಎನ್ ಪರಮಾಣು ಕಾವಲು ಸಂಸ್ಥೆ ಮತ್ತು ಅದರ ಮಹಾನಿರ್ದೇಶಕ ರಾಫೆಲ್ ಗ್ರೊಸ್ಸಿಯಿಂದ ಮಾಸ್ಕೋ ದೃಢವಾದ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಿದೆ ಎಂದು ಹೇಳಿದರು, ಪರಮಾಣು ಮೂಲಸೌಕರ್ಯದ ಮೇಲೆ ಪದೇ ಪದೇ ದಾಳಿಗಳು ನಡೆದಿವೆ ಎಂದು ಅವರು ಹೇಳಿದ್ದಕ್ಕೆ ಮೌನವಾಗಿರಬಾರದು ಎಂದು ಒತ್ತಾಯಿಸಿದರು.

"ಉಕ್ರೇನ್ನಿಂದ ಉಂಟಾದ ಕಾನೂನುಬಾಹಿರತೆಯ ಸಂದರ್ಭದಲ್ಲಿ ಐಎಇಎ ಸಚಿವಾಲಯ ಮತ್ತು ಏಜೆನ್ಸಿಯ ಮಹಾನಿರ್ದೇಶಕ ರಾಫೆಲ್ ಗ್ರೋಸಿ ವೈಯಕ್ತಿಕವಾಗಿ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ನಾವು ಭಾವಿಸುತ್ತೇವೆ. "ಜಪೋರಿಝಿಯಾ ಪರಮಾಣು ವಿದ್ಯುತ್ ಸ್ಥಾವರ ಮತ್ತು ಇತರ ಶಾಂತಿಯುತ ಪರಮಾಣು ಸೌಲಭ್ಯಗಳ ಮೇಲಿನ ದಾಳಿಯನ್ನು ನಿಲ್ಲಿಸುವಂತೆ ಒತ್ತಾಯಿಸುವ ಮೂಲಕ, ಕೈವ್ ಆಡಳಿತದ ಮೇಲೆ ಅರ್ಹ ಮತ್ತು ಕಠಿಣ ಶಿಕ್ಷೆಯನ್ನು ವಿಧಿಸಲು ಅಂತರರಾಷ್ಟ್ರೀಯ ಸಮುದಾಯವು ಬದ್ಧವಾಗಿದೆ ಎಂದು ನಮಗೆ ಮನವರಿಕೆಯಾಗಿದೆ" ಎಂದು ರಾಜತಾಂತ್ರಿಕ ಹೇಳಿದರು. ಜಖರೋವಾ ಅವರ ಪ್ರಕಾರ, ಯುರೋಪಿನ ಅತಿದೊಡ್ಡ ಪರಮಾಣು ಸೌಲಭ್ಯವಾದ ಜಪೋರಿಝಿಯಾ ಸ್ಥಾವರದಲ್ಲಿ ನಡೆದ ಇತ್ತೀಚಿನ ಘಟನೆಯು ಸಿಬ್ಬಂದಿಯೊಬ್ಬರ ಸಾವಿಗೆ ಕಾರಣವಾಯಿತು, ಇದು "ದುರಂತ" ಎಂದು ಅವರು ಹೇಳಿದರು ಮತ್ತು ಬಲಿಪಶುವಿನ ಕುಟುಂಬಕ್ಕೆ ಸಂತಾಪ ಸೂಚಿಸಿದರು. ಉಕ್ರೇನಿಯನ್ ಸಶಸ್ತ್ರ ಪಡೆಗಳಿಂದ ನಿರಂತರ "ಮಾರಕ ಬೆದರಿಕೆಗಳು ಮತ್ತು ಪ್ರಚೋದನೆಗಳ" ಅಡಿಯಲ್ಲಿ ಕಾರ್ಯಾಚರಣೆಯನ್ನು ಮುಂದುವರೆಸಿದ್ದಕ್ಕಾಗಿ ಅವರು ಪರಮಾಣು ಸ್ಥಾವರದ ಕಾರ್ಮಿಕರನ್ನು ಮತ್ತಷ್ಟು ಶ್ಲಾಘಿಸಿದರು. ಕೈವ್‌ನ ಆಪಾದಿತ ಕ್ರಮಗಳನ್ನು ಖಂಡನೀಯ ಎಂದು ಟೀಕಿಸಿದ ಜಖರೋವಾ, ಉಕ್ರೇನ್ ಪರಮಾಣು ಸುರಕ್ಷತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ ಎಂದು ಆರೋಪಿಸಿದರು, ಈ ವಿಷಯದ ಬಗ್ಗೆ ಪಾಶ್ಚಿಮಾತ್ಯ ದೇಶಗಳ ಮೌನವನ್ನು ಖಂಡಿಸಿದರು. "ಸ್ಪಷ್ಟವಾಗಿ, ಯುರೋಪಿನ ಮಧ್ಯಭಾಗದಲ್ಲಿ ಉದ್ದೇಶಪೂರ್ವಕವಾಗಿ ವಿಕಿರಣಶೀಲ ಬೆದರಿಕೆಗಳನ್ನು ಸೃಷ್ಟಿಸುವ ಮೂಲಕ, ಕೈವ್ ಗುಂಡಿಗಳನ್ನು ಒತ್ತಲು ಹಿಂಜರಿಯುವುದಿಲ್ಲ ಎಂಬುದು ಸ್ಪಷ್ಟವಾಗಿದೆ." ಅದರ ಪಾಶ್ಚಿಮಾತ್ಯ ಪ್ರಾಯೋಜಕರು ಬೇಗನೆ ಹೊರಬರಲು ಸಹಾಯ ಮಾಡುತ್ತಾರೆ. ಈ ಚುಚ್ಚುಮದ್ದನ್ನು ಯಾವುದಕ್ಕಾಗಿ ಬಳಸಲಾಗುತ್ತದೆ ಎಂಬುದಕ್ಕೆ ಸಂಭವಿಸಿದ ದುರಂತವು ಒಂದು ಉದಾಹರಣೆಯಾಗಿದೆ" ಎಂದು ಅವರು ಹೇಳಿದರು.

## ಮಾತುಕತೆ ಪುನರಾರಂಭಿಸಲು ಷರತ್ತುಗಳ ಮರುಪರಿಶೀಲನೆ: ಅರಘ್ಚಿ

**ಟೆಹ್ರಾನ್, ಏ. 27:** ಅಮೆರಿಕ ಜತೆಗಿನ ಮಾತುಕತೆ ಸ್ಥಗಿತಗೊಂಡಂತೆ, ಇರಾನ್ ಪ್ರಾದೇಶಿಕ ಮತ್ತು ಜಾಗತಿಕ ಪಾಲುದಾರರ ಕಡೆಗೆ ತಿರುಗುತ್ತಿದೆ. ಬ್ಯಾಕ್ ಚಾನೆಲ್ ಮಾತುಕತೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿರುವ ಎರಡು ದೇಶಗಳಾದ ಪಾಕಿಸ್ತಾನ ಮತ್ತು ಓಮನ್ನಲ್ಲಿ ಮಧ್ಯವರ್ತಿಗಳೊಂದಿಗೆ ತೊಡಗಿಸಿಕೊಂಡ ನಂತರ, ಇರಾನ್ನ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ಈಗ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಉನ್ನತ ಮಟ್ಟದ ಸಮಾಲೋಚನೆಗಾಗಿ ರಷ್ಯಾದಲ್ಲಿದ್ದಾರೆ.

ಇರಾನ್ ಮತ್ತು ಅಮೆರಿಕ ಮಾತುಕತೆಗಳನ್ನು ಪುನರಾರಂಭಿಸುವುದು ಹೇಗೆ ಎಂಬುದರ ಕುರಿತು ಭಿನ್ನಾಭಿಪ್ರಾಯದಲ್ಲಿರುವಾಗ ಈ ಭೇಟಿಗಳು ಬಂದಿವೆ. ಪಾಕಿಸ್ತಾನಕ್ಕೆ ರಾಯಭಾರಿಗಳನ್ನು ಕಳುಹಿಸುವ ಯೋಜನೆಯನ್ನು ವಾಷಿಂಗ್ಟನ್ ರದ್ದುಗೊಳಿಸಿದ ನಂತರ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರಾಜತಾಂತ್ರಿಕತೆಗೆ ಬದ್ಧರಾಗಿದ್ದಾರೆಯೇ ಎಂಬುದು ಸ್ಪಷ್ಟವಾಗಿಲ್ಲ ಎಂದು ಅರಗ್ಚಿ ಹೇಳಿದರು. ಯುಎಸ್ ಫೋನ್ ಮೂಲಕ ಮಾತುಕತೆಗಳನ್ನು ಮುಂದುವರಿಸಲು ಪ್ರಸ್ತಾಪಿಸಿದೆ, ಆದರೆ ಇರಾನ್ ಇದೀಗ ನೇರ ಭಾಗವಹಿಸುವಿಕೆಯನ್ನು ನಿರಾಕರಿಸಿದೆ. ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಉದ್ವಿಗ್ನತೆಗಳು ಪ್ರಮುಖ ಕಾಳಜಿಯಾಗಿ ಉಳಿದಿವೆ, ಇದು ಭದ್ರತೆ ಮತ್ತು ಇಂಧನ ಹರಿವು ಎರಡರ ಮೇಲೂ ಪರಿಣಾಮ ಬೀರುತ್ತದೆ. ಮೆರೈನ್ ಟ್ರಾಫಿಕ್ ಡೇಟಾದ ಪ್ರಕಾರ, ಯುದ್ಧಪೂರ್ವ ಮಟ್ಟಕ್ಕಿಂತ ಹಡಗು ದಟ್ಟಣೆ ತೀವ್ರವಾಗಿ ಕಡಿಮೆಯಾಗಿದೆ.

# ಬಿಡಬ್ಲ್ಯೂಎಫ್ ಕೌನ್ಸಿಲ್‌ನಲ್ಲಿ ಮತದಾನದ ಸ್ಥಾನದೊಂದಿಗೆ ಜಾಗತಿಕ ಬ್ಯಾಡ್ಮಿಂಟನ್ ಆಡಳಿತಕ್ಕೆ ಕಾಲಿಟ್ಟ ಪಿ.ವಿ.ಸಿಂಧು

**ಹಾರ್ಸೆನ್ಸ್ (ಡೆನ್ಮಾರ್ಕ್), ಏ.27:** ಬ್ಯಾಡ್ಮಿಂಟನ್ ಇತಿಹಾಸದಲ್ಲಿ ಅತ್ಯಂತ ಸಾಧನೆಗೈದ ಕ್ರೀಡಾಪಟುಗಳಲ್ಲಿ ಒಬ್ಬರು ಈಗ ಕ್ರೀಡೆಯ ಜಾಗತಿಕ ಆಡಳಿತಕ್ಕೆ ಕಾಲಿಟ್ಟಿದ್ದಾರೆ. ಒಲಿಂಪಿಕ್ ಪದಕ ವಿಜೇತೆ ಮತ್ತು ವಿಶ್ವ ಚಾಂಪಿಯನ್ ಪಿ.ವಿ.ಸಿಂಧು ಬಿಡಬ್ಲ್ಯೂಎಫ್ ಕ್ರೀಡಾಪಟುಗಳ ಆಯೋಗದ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಬ್ಯಾಡ್ಮಿಂಟನ್ ವಿಶ್ವ ಒಕ್ಕೂಟದ (ಬಿಡಬ್ಲ್ಯೂಎಫ್) ಮಂಡಳಿಯಲ್ಲಿ ಪೂರ್ಣ ಮತದಾನದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಔಪಚಾರಿಕ ಪರಿಶೀಲನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ, ಸಿಂಧು 2025 ರ ಕೊನೆಯಲ್ಲಿ ಅಧಿಕೃತವಾಗಿ ಬಿಡಬ್ಲ್ಯೂಎಫ್ ಕೌನ್ಸಿಲ್ ಅನ್ನು ಪ್ರವೇಶಿಸಿದರು. ಹಾರ್ಸೆನ್ಸ್‌ನಲ್ಲಿ ನಡೆದ ಬಿಡಬ್ಲ್ಯೂಎಫ್ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅವರು ಜಾಗತಿಕ ಬ್ಯಾಡ್ಮಿಂಟನ್ ಸದಸ್ಯತ್ವದ ಮುಂದೆ ಮೊದಲ ಬಾರಿಗೆ ಕಾಣಿಸಿಕೊಂಡರು, ಇದು ಕ್ರೀಡೆಯ ಅತ್ಯುನ್ನತ ಆಡಳಿತ ಮಂಡಳಿಯೊಳಗೆ ಅವರ ಅಧಿಕಾರಾವಧಿಯ ಆರಂಭವನ್ನು ಗುರುತಿಸುತ್ತದೆ.




ಬಿಡಬ್ಲ್ಯೂಎಫ್ ಮಂಡಳಿ ವಿಶ್ವಾದ್ಯಂತ ಬ್ಯಾಡ್ಮಿಂಟನ್‌ನ ಕಾರ್ಯತಂತ್ರದ ನಿರ್ದೇಶನ ಮತ್ತು ಆಡಳಿತವನ್ನು ಮಾರ್ಗದರ್ಶನ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಂಡಳಿಯ ಮತದಾನದ ಸದಸ್ಯರಾಗಿ, ಸಿಂಧು ಕ್ರೀಡೆಯ ಭವಿಷ್ಯವನ್ನು ರೂಪಿಸುವ ವಿಷಯಗಳ ಕುರಿತು ಚರ್ಚೆಗಳು ಮತ್ತು ನಿರ್ಧಾರಗಳಲ್ಲಿ ಭಾಗವಹಿಸುತ್ತಾರೆ, ಗಣ್ಯ ಕ್ರೀಡಾಪಟುಗಳ ದೃಷ್ಟಿಕೋನಗಳು ಮತ್ತು ಅನುಭವಗಳನ್ನು ನೇರವಾಗಿ ಜಾಗತಿಕ ಬ್ಯಾಡ್ಮಿಂಟನ್ ನಾಯಕತ್ವದ ಹೃದಯಕ್ಕೆ ತರುತ್ತಾರೆ.

**ಈ ಸಂದರ್ಭದಲ್ಲಿ ಮಾತನಾಡಿದ ಪಿ.ವಿ. ಸಿಂಧು, "ವಿಶ್ವ ಬ್ಯಾಡ್ಮಿಂಟನ್ ಒಕ್ಕೂಟದೊಳಗೆ ಈ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು ಮತ್ತು ಪ್ರಪಂಚದಾದ್ಯಂತದ ಕ್ರೀಡಾಪಟುಗಳ ಧ್ವನಿಯನ್ನು ಪ್ರತಿನಿಧಿಸುವುದು ನಿಜವಾದ ಗೌರವ ಮತ್ತು ಸವಲತ್ತು. ಬ್ಯಾಡ್ಮಿಂಟನ್ ನನಗೆ ತುಂಬಾ ನೀಡಿದೆ, ಮತ್ತು ಈ ಸಾಮರ್ಥ್ಯದಲ್ಲಿ ಕ್ರೀಡೆಗೆ ಕೊಡುಗೆ ನೀಡುವ ಅವಕಾಶಕ್ಕಾಗಿ ನಾನು ತುಂಬಾ ಕೃತಜ್ಞನಾಗಿದ್ದೇನೆ" ಎಂದು ಹೇಳಿದರು.**

# ಐಪಿಎಲ್ ಇತಿಹಾಸದಲ್ಲಿ 81 ಎಸೆತಗಳ ಬೆನ್ನುಹತ್ತಿದ ಆರ್‌ಸಿಬಿ

**ನವದೆಹಲಿ, ಏ.27:** ಶಶಿಕಾಂತ್ ಸಿಂಗ್ ಸಂಗ್ರಹಿಸಿದ ಅಂಕಿಅಂಶಗಳ ಪ್ರಕಾರ, ಐಪಿಎಲ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗಳಿಸಿದ ಭರ್ಜರಿ ಗೆಲುವು ಪಂದ್ಯಾವಳಿಯ ಇತಿಹಾಸದಲ್ಲಿ ಅತ್ಯಂತ ಪ್ರಬಲ ಚೇಸಿಂಗ್‌ಗಳಲ್ಲಿ ಒಂದಾಗಿ ದಾಖಲೆ ಪುಸ್ತಕಗಳನ್ನು ಪ್ರವೇಶಿಸಿದೆ. 76 ರನ್‌ಗಳ ಸಾಧಾರಣ ಗುರಿಯನ್ನು ದಾಟಿದ ಆರ್‌ಸಿಬಿ, 81 ಎಸೆತಗಳು ಬಾಕಿ ಇರುವಾಗಲೇ ಈ ಕಾರ್ಯವನ್ನು ಪೂರ್ಣಗೊಳಿಸಿತು, ಇದು ಐಪಿಎಲ್ ಇತಿಹಾಸದಲ್ಲಿ ಎರಡನೇ ಅತ್ಯಂತ ಆರಾಮದಾಯಕವಾದ ಯಶಸ್ವಿ ಚೇಸಿಂಗ್ ಆಗಿದೆ. 2008 ರಲ್ಲಿ ವಾಂಖೆಡೆ ಕ್ರೀಡಾಂಗಣದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ ತಂಡವು ಚೇಸಿಂಗ್ ಮಾಡಿದ್ದು, ಅಲ್ಲಿ ಅವರು 87 ಎಸೆತಗಳನ್ನು ಬಳಸದೆಯೇ ಮುಗಿಸಿದರು. ಇತ್ತೀಚಿನ ಫಲಿತಾಂಶವು ಡೆಲ್ಲಿ ಕ್ಯಾಪಿಟಲ್ಸ್‌ನ ಕುಸಿತದ ಪ್ರಮಾಣವನ್ನು ಪ್ರತಿಬಿಂಬಿಸುವುದಲ್ಲದೆ, ರಾತ್ರಿಯಲ್ಲಿ ಆರ್ಸಿಬಿಯ ನಿರ್ದಯ ದಕ್ಷತೆಯನ್ನು ಒತ್ತಿಹೇಳುತ್ತದೆ. ಈ ಪ್ರದರ್ಶನವು ನಿರ್ದಿಷ್ಟ ಎದುರಾಳಿಗಳ ವಿರುದ್ಧ ವಿರಾಟ್ ಕೊಹ್ಲಿ ಅವರ ಗಮನಾರ್ಹ ಸ್ಥಿರತೆಯನ್ನು ಮತ್ತಷ್ಟು ಬಲಪಡಿಸಿದೆ. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಅವರ ಒಟ್ಟು ರನ್ ಗಳಿಕೆ ಈಗ 1,172 ರನ್ ಗಳಿಗೆ ಏರಿದ್ದು,




ಯಾವುದೇ ತಂಡದ ವಿರುದ್ಧ ಅವರು ಗಳಿಸಿದ ಗರಿಷ್ಠ ಮೊತ್ತವಾದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 1,174 ರನ್ ಗಳ ಸಂಖ್ಯೆಯನ್ನು ಮುಟ್ಟುವಷ್ಟು ಹತ್ತಿರದಲ್ಲಿದೆ. ಕೊಹ್ಲಿ ಈಗಾಗಲೇ ರೋಹಿತ್ ಶರ್ಮಾ ಮತ್ತು ಡೇವಿಡ್ ವಾರ್ನರ್ ಅವರಂತಹ ಆಟಗಾರರೊಂದಿಗೆ ಇಂತಹ ದಾಖಲೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ, ಇದು ಬಹು ಋತುಗಳಲ್ಲಿ ಅವರ ನಿರಂತರ ಪ್ರಾಬಲ್ಯವನ್ನು ಎತ್ತಿ ತೋರಿಸುತ್ತದೆ. ಆರ್ಸಿಬಿ–ಡಿಸಿ ಸ್ಪರ್ಧೆಯು ಸಂಖ್ಯಾಶಾಸ್ತ್ರೀಯವಾಗಿ ಮಹತ್ವದ ಪೈಪೋಟಿಯಾಗಿ ಬೆಳೆದಿದೆ. ಈ ಗೆಲುವಿನೊಂದಿಗೆ, ಆರ್ಸಿಬಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 21 ನೇ ಗೆಲುವು ಸಾಧಿಸಿದ್ದು, ಐಪಿಎಲ್ ಇತಿಹಾಸದಲ್ಲಿ ಅತಿ ಹೆಚ್ಚು ಏಕಪಕ್ಷೀಯ ಮುಖಾಮುಖಿ ಪಂದ್ಯಗಳಲ್ಲಿ ಒಂದಾಗಿದೆ. ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಮುಂಬೈ ಇಂಡಿಯನ್ಸ್‌ನ 25 ಗೆಲುವುಗಳು ಮಾತ್ರ ಉನ್ನತ ಸ್ಥಾನದಲ್ಲಿವೆ, ಆದರೆ ಆರ್ಸಿಬಿ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಪಂಜಾಬ್ ಕಿಂಗ್ಸ್ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ ಸೇರಿದಂತೆ ಹಲವಾರು ಇತರ ಪೈಪೋಟಿಗಳು ಒಂದೇ ಮಟ್ಟದಲ್ಲಿವೆ.

ಒಟ್ಟಿಗೆ ತೆಗೆದುಕೊಂಡರೆ, ಈ ಪಂದ್ಯದಲ್ಲಿ ಆರ್‌ಸಿಬಿಯ ಗೆಲುವಿನ ಪ್ರಮಾಣವನ್ನು ಮಾತ್ರವಲ್ಲದೆ, ಲೀಗ್ನ ವಿಕಸನಗೊಳ್ಳುತ್ತಿರುವ ಸಂಖ್ಯಾಶಾಸ್ತ್ರೀಯ ಪರಂಪರೆಯನ್ನೂ ಸಹ ಈ ಅಂಕಿಅಂಶಗಳು ಒತ್ತಿಹೇಳುತ್ತವೆ, ಅಲ್ಲಿ ತಂಡದ ಪ್ರಾಬಲ್ಯ ಮತ್ತು ವೈಯಕ್ತಿಕ ಪ್ರತಿಭೆ ಎರಡೂ ದಾಖಲೆ ಪಟ್ಟಿಯಲ್ಲಿ ಮರುರೂಪಿಸುತ್ತಲೇ ಇವೆ.

### ಡೆಲ್ಲಿ ಕ್ಯಾಪಿಟಲ್ಸ್ 3/6 ಪತನ

**ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ನಿರಂತರ ಒತ್ತಡದಲ್ಲಿ ಪತನಗೊಂಡಾಗ "13 ಕ್ಕೆ 6" ಪವರ್‌ಪ್ಲೇ ಕುಸಿತವು ಐಪಿಎಲ್ ಪಂದ್ಯವನ್ನು ವ್ಯಾಖ್ಯಾನಿಸಿತು, ಇದು ಪಂದ್ಯಾವಳಿಯ ಇತಿಹಾಸದಲ್ಲಿ ಅತ್ಯಂತ ನಾಟಕೀಯ ಬ್ಯಾಟಿಂಗ್ ಕುಸಿತಗಳಲ್ಲಿ ಒಂದನ್ನು ಬರೆದಿದೆ. ಭುವನೇಶ್ವರ್ ಕುಮಾರ್ ಮತ್ತು ಜೋಶ್ ಹ್ಯಾಜಲ್ವುಡ್ ಅವರ ವೇಗದ ಜೋಡಿ ಆರಂಭಿಕ ಪ್ರಗತಿಯೊಂದಿಗೆ ದಂಗೆ ಎದ್ದ ಕಾರಣ ಅಗ್ರ ಕ್ರಮಾಂಕವು ಮೊದಲ ಆರು ಓವರ್‌ಗಳಲ್ಲಿ 6 ವಿಕೆಟ್‌ಗೆ 13 ಕ್ಕೆ ಕುಸಿಯಿತು –ಈಗ ಐಪಿಎಲ್ ಇತಿಹಾಸದಲ್ಲಿ ಅತ್ಯಂತ ಕಡಿಮೆ ಪವರ್‌ಪ್ಲೇ ಸ್ಕೋರ್.**

# ಏಷ್ಯನ್ ಬೀಚ್ ಗೇಮ್ಸ್: ಭಾರತದ ಮಹಿಳಾ ಕಬಡ್ಡಿ ತಂಡಕ್ಕೆ ಚಿನ್ನ, ಪುರುಷರಿಗೆ ಬೆಳ್ಳಿ ಪದಕ

**ಸಾನ್ಯಾ, ಏ.27:** ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದಲ್ಲಿ ಸೋಮವಾರ ನಡೆದ ಏಷ್ಯನ್ ಬೀಚ್ ಗೇಮ್ಸ್ 2026 ರಲ್ಲಿ ಭಾರತೀಯ ಮಹಿಳಾ ಕಬಡ್ಡಿ ತಂಡ ಯಶಸ್ವಿಯಾಗಿ ತನ್ನ ಕಿರೀಟವನ್ನು ಉಳಿಸಿಕೊಂಡು ಚಿನ್ನದ ಪದಕ ಗೆದ್ದರೆ, ಪುರುಷರು ಸತತ ಎರಡನೇ ಬೆಳ್ಳಿಗೆ ತೃಪ್ತಿಪಟ್ಟರು.

ರಿತು ನೇತೃತ್ವದ ಆರು ಸದಸ್ಯರ ಭಾರತೀಯ ಮಹಿಳಾ ಬೀಚ್ ಕಬಡ್ಡಿ ತಂಡವು ಅರ್ಧಾವಧಿಯಲ್ಲಿ 20–18 ಅಂತರದ ಮುನ್ನಡೆಯನ್ನು ಪರಿವರ್ತಿಸಿ ಶ್ರೀಲಂಕಾವನ್ನು 47–31 ಅಂತರದಿಂದ ಸೋಲಿಸಿ ಸತತ ಆರನೇ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಸೆಮಿಫೈನಲ್‌ನಲ್ಲಿ ಭಾರತವು ಬಾಂಗ್ಲಾದೇಶವನ್ನು 50–31 ಅಂತರದಿಂದ ಸೋಲಿಸಿತು.

ನಾಯಕಿ ರಿತು ಜೊತೆಗೆ, ಮನೀಷಾ ಕುಮಾರಿ, ಸಿಮ್ರಾನ್ ಕಾಂಬೋಜ್, ಮನ್‌ಪ್ರೀತ್ ಕೌರ್, ನಿಕಿತಾ ಮತ್ತು ನಿಕಿತಾ ಚೌಹಾಣ್ ಕೂಡ ಭಾರತೀಯ ಕಬಡ್ಡಿ ತಂಡದ ಭಾಗವಾಗಿದ್ದರು. 2016 ರಲ್ಲಿ ನಡೆದ ಕೊನೆಯ ಆವೃತ್ತಿಯಲ್ಲಿ, ಭಾರತವು ಫೈನಲ್‌ನಲ್ಲಿ ಥೈಲ್ಯಾಂಡ್ ಅನ್ನು ಸೋಲಿಸಿತು ಎಂದು olympics.com ವರದಿ ಮಾಡಿದೆ.



ಏತನ್ಮಧ್ಯೆ, ಹಿಂದಿನ ಆವೃತ್ತಿಯ ಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ ಸೋತಿದ್ದ ಭಾರತೀಯ ಪುರುಷರ ಕಬಡ್ಡಿ ತಂಡವು ಈ ವರ್ಷ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ವಿರುದ್ಧ ಸೋತು, 44–31 ಅಂಕಗಳಿಂದ ಫೈನಲ್‌ನಲ್ಲಿ ಸೋತಿತು. ಸೋಮವಾರ ಕಬಡ್ಡಿಯಲ್ಲಿ ಎರಡು ಪದಕಗಳು ಈ ಆವೃತ್ತಿಯಲ್ಲಿ ಭಾರತಕ್ಕೆ ಮೊದಲನೆಯದು. ಏಷ್ಯಾ ಒಲಿಂಪಿಕ್ ಕೌನ್ಸಿಲ್ ಆಯೋಜಿಸಿರುವ ಏಷ್ಯನ್ ಬೀಚ್ ಗೇಮ್ಸ್ ಬೀಚ್ ಮತ್ತು ಕರಾವಳಿ ವಿಭಾಗಗಳ ಮೇಲೆ ಕೇಂದ್ರೀಕರಿಸಿದ ಬಹು–ಕ್ರೀಡಾ ಕಾರ್ಯಕ್ರಮವಾಗಿದೆ.